

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಿಪಿಐ(ಎಂ) 15

ಸಂಪುಟ 17
ಸಂಚಿಕೆ 16

ರೂ. 2.00 16/04/1995

ಹುರುಪಿನ, ನಿರೀಕ್ಷೆಯ ವಾತಾವರಣದಲ್ಲಿ 15ನೇ ಮಹಾಧಿವೇಶನ

ಹೊಸ ಸವಾಲುಗಳ ಬಗ್ಗೆ ಚರ್ಚಿಸಲೆಂದು ಸೇರಿದ್ದೇವೆ

-ಇ.ಎಂ.ಎಸ್.

ಏಪ್ರಿಲ್ 3, 1995. ಬೆಳಿಗ್ಗೆ 10ಗಂಟೆ ಪಂಜಾಬಿನ ರಾಜಧಾನಿ ಚಂಡೀಗಢ ಕೆಂಬಾವುಟಗಳ ಸಾಗರ, ಮೊಳಗುತ್ತಿದ್ದ ಕ್ರಾಂತಿಗೀತೆಗಳು ನಿರ್ಮಿಸಿದ್ದ ಹುರುಪಿನ, ನಿರೀಕ್ಷೆಯ ವಾತಾವರಣದಲ್ಲಿ ಹಿರಿಯ ನೇತಾರ ಇ.ಎಂ.ಎಸ್. ನಂಬೂದರಿಪ್ಪಾಡ್‌ರವರು ಕೆಂಬಾವುಟವನ್ನು ಅರಳಿಸುವುದರೊಂದಿಗೆ ಸಿಪಿಐ(ಎಂ)ನ ಹದಿನೈದನೇ ಮಹಾಧಿವೇಶನ ಆರಂಭವಾಯಿತು.

"ಈ ಕೆಂಬಾವುಟ ಕಾರ್ಮಿಕ ವರ್ಗದ ಅಂತರ‍್ರಾಷ್ಟ್ರೀಯತೆಯ ಬಾವುಟ. ವಿಶ್ವದ ದುಡಿಯುವ ಜನಗಳ ವಿಮೋಚನೆಗೆಂದು ಕಾರ್ಲ್ ಮಾರ್ಕ್ಸ್ ಮತ್ತು ಫೆಡ್ರಿರಿಕ್ಸ್ ಎಂಗೆಲ್ಸ್ ಜತೆಗೂಡಿ ರೂಪಿಸಿದ ವಿಚಾರಗಳನ್ನು ಪ್ರತಿನಿಧಿಸುವ ಬಾವುಟ. ಇದು ವಿಶ್ವದ ಕಾರ್ಮಿಕ ವರ್ಗದ ಬಾವುಟವಷ್ಟೇ ಅಲ್ಲ, ಕಳೆದ [illegible] ವರ್ಷಗಳಲ್ಲಿ ಇದು ಸಮರಧೀರ ಭಾರತೀಯ ರಾಷ್ಟ್ರವಾದದ ಬಾವುಟವೂ ಆಗಿದೆ. ಭಾರತೀಯ ಕಾರ್ಮಿಕ ವರ್ಗ, ರೈತಾಪಿ ವರ್ಗ ನಡೆಸಿದ ಹಲವು ಹತ್ತು ಹೋರಾಟಗಳಿಗೆ ಸ್ಫೂರ್ತಿ ನೀಡಿದ ಬಾವುಟವಾಗಿದೆ" ಎಂದರು ಕಾಂ. ಇ.ಎಂ.ಎಸ್. ಧ್ವಜಾರೋಹಣದ ನಂತರ ಮಾಡಿದ ಸಂಕ್ಷಿಪ್ತ ಭಾಷಣದಲ್ಲಿ.

"ನಾವು ಹಲವು ಗೆಲುವುಗಳನ್ನು ಸಾಧಿಸಿದ್ದೇವೆ. ಆದರೆ ಇಂದು ಹಲವು ಸವಾಲುಗಳನ್ನೂ ಎದುರಿಸುತ್ತಿದ್ದೇವೆ. ಈ ಹೊಸ ಸವಾಲುಗಳ ಬಗ್ಗೆ ಚರ್ಚಿಸಲೆಂದೇ ಇಲ್ಲಿ ಆರು ದಿನಗಳ ಕಾಲ ಸಭೆ ಸೇರಿದ್ದೇವೆ" ಎಂದು ಮುಂದುವರೆದು ಹೇಳಿದ ಇ.ಎಂ.ಎಸ್. ಇತ್ತೀಚೆಗೆ ಅಂತರ‍್ರಾಷ್ಟ್ರೀಯ ಕಾರ್ಮಿಕ ಆಂದೋಲನ ಒಂದು ದೊಡ್ಡ ಹಿನ್ನಡೆ ಕಾಣಬೇಕಾಯಿತು, ಆದರೆ ಸನ್ನಿವೇಶ ಸುಧಾರಿಸುತ್ತಿದೆ, ಹಲವು ಸೋದರ ಪಕ್ಷಗಳು ಸಿಪಿಐ(ಎಂ)ನ ಈ ಮಹಾಧಿವೇಶನಕ್ಕೆ ತಮ್ಮ ನಿಯೋಗಗಳನ್ನು ಕಳಿಸಿವೆ ಎಂಬ ಸಂಗತಿಯತ್ತವೂ ಗಮನ ಸೆಳೆದರು. ಸೋದರ ಪಕ್ಷಗಳೊಂದಿಗೆ ವಿಚಾರಗಳ ವಿನಿಮಯದಿಂದ ಈ ಮಹಾಧಿವೇಶನ ಖಂಡಿತಾ ಪ್ರಯೋಜನ ಪಡೆಯುತ್ತದೆ ಎಂದರು.

ಇ.ಎಂ.ಎಸ್. ಭಾಷಣದ ನಂತರ ಎಲ್ಲಾ ಪ್ರತಿನಿಧಿಗಳು ಹುತಾತ್ಮ ಸ್ತಂಭದೆದುರು ಖಾಲಿಸ್ತಾನಿ ಭಯೋತ್ಪಾದನೆಯ ವಿರುದ್ಧ ಹೋರಾಟದಲ್ಲಿ ಪ್ರಾಣ ಬಲಿದಾನ ನೀಡಿದ ಹತ್ತಾರು ಸಂಗಾತಿಗಳಿಗೆ ಕೆಂಪು ನಮನ ಸಲ್ಲಿಸಿದರು. ಪ್ರತಿನಿಧಿಗಳು ಪುಷ್ಪಾಂಜಲಿ ಸಲ್ಲಿಸುವ ಮೊದಲು ಆ ಹುತಾತ್ಮರ ಗ್ರಾಮಗಳಿಂದ ತಂದ ಮಣ್ಣನ್ನು ಸ್ತಂಭದ ಬಳಿ ಇಡಲಾಯಿತು. ಈ ಹುತಾತ್ಮರ ಭಾವಚಿತ್ರಗಳೊಂದಿಗೆ ಕುಟುಂಬದ ಸದಸ್ಯರು ಹಾಗೂ ಸಂಗಾತಿಗಳು ಹುತಾತ್ಮ ಸ್ತಂಭದ ಬಳಿ ಕುಳಿತಿದ್ದರು.

ಕ್ರಾಂತಿಕಾರಿ ಪರಂಪರೆ

ಸತ್ವಂತ್‌ಸಿಂಗ್ ವೇದಿಕೆ ಎಂದು ಹೆಸರಿಸಿದ್ದ ಪ್ರಧಾನ ಸಭಾಂಗಣದಲ್ಲಿ ನಂತರ ಮಹಾಧಿವೇಶನದ ಕಲಾಪಗಳು ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಗತ್‌ರಾಂಪಾಸ್ಲಾರವರ ಸ್ವಾಗತ ಭಾಷಣದೊಂದಿಗೆ ಆರಂಭವಾಯಿತು. ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದಕ್ಕಾಗಿ ಹೋರಾಟಕ್ಕೆ ಪಂಜಾಬಿನ ಜನತೆಯ ಅಪಾರ ಕಾಣಿಕೆಯನ್ನು ಸ್ಮರಿಸಿಕೊಳ್ಳುತ್ತಾ ಕಾಂ. ಪಾಸ್ಲಾ "ಪಂಜಾಬಿನಲ್ಲಿ ಕಮ್ಯುನಿಸ್ಟ್ ಪಕ್ಷ ಅತ್ಯುತ್ತಮ ಕ್ರಾಂತಿಕಾರಿ ಪರಂಪರೆ ಹೊಂದಿದೆ ಎಂಬ ಬಗ್ಗೆ ನಮಗೆ ಹೆಮ್ಮೆ ಏಕೆಂದರೆ ಆರಂಭದ ಕ್ರಾಂತಿಕಾರಿಗಳು ಕೆಂಬಾವುಟದ ಸುತ್ತ ನೆರೆದು ಕಾರ್ಮಿಕ ವರ್ಗ ಹಾಗೂ ರೈತಾಪಿ ವರ್ಗಗಳಿಗಾಗಿ ಕೆಲಸ

ಪುಟ 8 ನೋಡಿ

41 ವಿದೇಶೀ ಸೋದರ ಪ್ರತಿನಿಧಿಗಳು

19 ವಿದೇಶೀ ಸೋದರ ಪಕ್ಷಗಳ 41 ಪ್ರತಿನಿಧಿಗಳು ಭಾಗವಹಿಸಿದ್ದು 15ನೇ ಮಹಾಧಿವೇಶನದ ಒಂದು ವಿಶಿಷ್ಟತೆಯಾಗಿತ್ತು. ಇದು ಅಂತರ‍್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದಲ್ಲಿ ಸಿಪಿಐ(ಎಂ)ನ ಪ್ರತಿಷ್ಠೆಯ ದ್ಯೋತಕ. ಚೀನಾ, ವಿಯೆಟ್ನಾಂ, ಕ್ಯೂಬಾ, ಕೊರಿಯಾ, ರಷ್ಯನ್ ಒಕ್ಕೂಟ, ಬ್ರೆಝಿಲ್, ಬ್ರಿಟನ್, ಕೆನಡಾ, ಫ್ರಾನ್ಸ್, ಇಟಲಿ, ಗ್ರೀಸ್, ಜಪಾನ್, ನೇಪಾಳ, ಪೋರ್ಚುಗಲ್, ಶ್ರೀಲಂಕಾದ ಕಮ್ಯುನಿಸ್ಟ್ ಪಕ್ಷಗಳ, ಆಸ್ಟ್ರೇಲಿಯದ ಸಮಾಜವಾದಿ ಪಕ್ಷದ, ಬಾಂಗ್ಲಾದೇಶ ಕಾರ್ಮಿಕ ಪಕ್ಷದ, ತುರ್ಕಿ ಲೇಬರ್ ಪಕ್ಷದ ಹಾಗೂ ಇರಾನಿನ ತುದೇ ಪಕ್ಷದ ಪ್ರತಿನಿಧಿಗಳು ಆಗಮಿಸಿದ್ದರು. ಚೀಣಾ ಹಾಗೂ ವಿಯೆಟ್ನಾಂ ನಿಯೋಗದಲ್ಲಿ ತಲಾ 5 ಸದಸ್ಯರು, ಕ್ಯೂಬಾ ಹಾಗೂ ನೇಪಾಳದ ನಿಯೋಗದಲ್ಲಿ ತಲಾ 4 ಸದಸ್ಯರು, ಕೊರಿಯಾ ರಷ್ಯನ್ ಒಕ್ಕೂಟ ಬಾಂಗ್ಲಾದೇಶದಿಂದ ತಲಾ ಮೂರು ಪ್ರತಿನಿಧಿಗಳು ಬಂದಿದ್ದರು.

ಸಾಮೂಹಿಕ ಆಂದೋಲನಗಳ ಮೂಲಕ ಎಡ ಪ್ರಜಾಸತ್ತಾತ್ಮಕ ಪರ್ಯಾಯ

- ಸುರ್ಜಿತ್

ಹದಿನೈದನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ಮಂಡಿಸಿ ಸುತ್ತಾ ಒಂದು ವಿವರವಾದ ಭಾಷಣ ಮಾಡುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರವರು ಕಾಂಗ್ರೆಸ್(ಐ) ಹಾಗೂ ಬಿಜೆಪಿಯನ್ನು ಸೋಲಿಸಬೇಕು ಎಂಬ ಪಕ್ಷದ ನಿರ್ಧಾರವನ್ನು ಪುನರುಚ್ಚರಿಸಿದರು. ಇದನ್ನು ಈಡೇರಿಸಲು ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸಬೇಕು ಎಂಬ ಕರೆ ನೀಡಿದರು; ಕೋಮುವಾದಿ ಬಿಜೆಪಿಯ ಅಪಾಯಕಾರಿ ಉದಯ ಹಾಗೂ ರಾವ್ ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳ ವಿನಾಶಕಾರಿ ಪರಿಣಾಮಗಳ ಬಗ್ಗೆ ವಿವರವಾಗಿ ಚರ್ಚಿಸುತ್ತಾ ಎಡ ಮತ್ತು ಪ್ರಜಾಸತ್ತಾತ್ಮಕ ಮೈತ್ರಿಕೂಟ ಮಾತ್ರವೇ ನಿಜವಾದ ಪರ್ಯಾಯವಾಗಬಲ್ಲದು ಎಂದರು. ಆದರೆ ಸದ್ಯ ಎಡಪಕ್ಷಗಳು ತಾವಾಗಿಯೇ ಕಾಂಗ್ರೆಸ್(ಐ) ಹಾಗೂ ಬಿಜೆಪಿಗೆ ಸವಾಲೆಸೆಯುವಷ್ಟು ಬಲಿಷ್ಠವಾಗಿಲ್ಲ. ಆದ್ದರಿಂದ ಈ ಎರಡು ಅಪಾಯಗಳ ವಿರುದ್ಧ ಅಣಿನೆರೆ ಸಬಲ್ಲ ಎಲ್ಲಾ ಜಾತ್ಯಾತೀತ ಶಕ್ತಿಗಳೊಂದಿಗೆ ಸಹಕರಿಸುತ್ತೇವೆ ಎಂದು ಸುರ್ಜಿತ್ ಹೇಳಿದರು.

ಬಂಡವಾಳಶಾಹಿ ಜಗತ್ತಿನ ಹರ್ಷಾತಿರೇಕ ಇಳಿದಿದೆ

ಮೊದಲು ಅಂತರ‍್ರಾಷ್ಟ್ರೀಯ ಸನ್ನಿವೇಶದ ಬಗ್ಗೆ ಮಾತನಾಡುತ್ತಾ ಸಮಾಜವಾದಕ್ಕಾಗಿರುವ ಹಿನ್ನಡೆ ತಾತ್ಕಾಲಿಕ ಎಂಬ ಹದಿನಾಲ್ಕನೇ ಮಹಾಧಿವೇಶನ ಅಂದಾಜು ಸರಿಯೆಂದು ಸಾಬೀತಾಗಿದೆ ಎಂದು ಸುರ್ಜಿತ್ ಹೇಳಿದರು. ಸಮಾಜವಾದ ಕೊನೆಗೊಂಡಿತು ಎಂಬ ಬಂಡವಾಳಶಾಹಿ ಜಗತ್ತಿನ ಹರ್ಷಾತಿರೇಕ ಬಹುಪಾಲು ಇಳಿದು ಹೋಗಿದೆ. ಬಂಡವಾಳಶಾಹಿ ಜಗತ್ತು ತೀವ್ರ ಹಿಂಜರಿತದ ಕಪಿಮುಷ್ಟಿಯಲ್ಲಿ ಸಿಲುಕಿದೆ. ನಿರುದ್ಯೋಗ, ಸಂಕಟ ಹೆಚ್ಚುತ್ತಿದೆ. ಅತ್ತ ಹಿಂದಿನ ಸಮಾಜವಾದಿ ದೇಶಗಳಲ್ಲಿ ಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಈ ದೇಶಗಳ ಜನರಿಗೆ ತ್ವರಿತವಾಗಿ ಭ್ರಮನಿರಸನವಾಗಿದೆ, ಹಲವು ದೇಶಗಳಲ್ಲಿ ಹಿಂದೆ ಕಮ್ಯುನಿಸ್ಟರಾಗಿದ್ದವರು ಅಧಿಕಾರಕ್ಕೆ ಮರಳುತ್ತಿದ್ದಾರೆ. ಆದರೆ ಇದನ್ನು ಸಮಾಜವಾದ ಮರಳುತ್ತಿದೆ ಎಂದು ಅರ್ಥೈಸುವಂತಿಲ್ಲ ಎಂದು ಸುರ್ಜಿತ್ ಎಚ್ಚರಿಸಿದರು. ಆದರೆ ಇವು ಈ ದೇಶಗಳ ಮೇಲೆ ಹೇರಿದ ಮುಕ್ತ ಮಾರುಕಟ್ಟೆ ಆರ್ಥಿಕಕ್ಕೆ ಪ್ರತಿರೋಧ ಹೆಚ್ಚುತ್ತಿರುವ ನಿಶ್ಚಿತ ಸಂಕೇತಗಳು ಎಂದು ಅವರು ಹೇಳಿದರು.

ಕಳೆದ ಮೂರು ವರ್ಷಗಳಲ್ಲಿ ವಿಶ್ವದಲ್ಲಿ ಎಲ್ಲಾ ನಾಲ್ಕು ವೈರುಧ್ಯಗಳೂ -ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವಿನ ವೈರುಧ್ಯ, ಸಾಮ್ರಾಜ್ಯಶಾಹಿ ಮತ್ತು ಮೂರನೇ ಜಗತ್ತಿನ ನಡುವಿನ ವೈರುಧ್ಯ, ಸಾಮ್ರಾಜ್ಯಶಾಹಿಗಳ ನಡುವಣ ವೈರುಧ್ಯ ಮತ್ತು ಬಂಡವಾಳದ ನಡುವಿನ ವೈರುಧ್ಯ-ತೀವ್ರಗೊಂಡಿವೆ. ಅಮೇರಿಕಾ ನಡೆಸಿರುವ ಕ್ಯೂಬಾದ ದಿಗ್ಬಂಧನ, ಪರಮಾಣು ನಿರೀಕ್ಷಣೆಯ ಪ್ರಶ್ನೆಯ ಮೇಲೆ ಉತ್ತರ ಕೊರಿಯಾದ ಮೇಲೆ ಅದರ ಒತ್ತಡ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ಸಾರ್ವಭೌಮತೆಯ ಮೇಲೆ ಆಕ್ರಮಣಗಳು ಹೆಚ್ಚುತ್ತಿರುವುದು ಇವೆಲ್ಲಾ ಇಂದಿನ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿಯ ಹೊಸ-ಹೊಸ ಧಾಳಿ ಹೆಚ್ಚುತ್ತಿರುವ ಸ್ಪಷ್ಟ ಸಾಕ್ಷಿಗಳು. ಇವೆಲ್ಲದಕ್ಕೆ ಪ್ರತಿರೋಧ ಕೂಡಾ ವಿಶ್ವದಾದ್ಯಂತ ಬೆಳೆಯುತ್ತಿದೆ. ಸಮಾಜವಾದಿ ದೇಶಗಳೊಡನೆ, ವಿಶ್ವಾದ್ಯಂತ ಕಾರ್ಮಿಕ ವರ್ಗದ ಆಂದೋಲನಗಳೊಂದಿಗೆ ಸೌಹಾರ್ದ ಬೆಳೆಸುವುದನ್ನು ಮುಂದುವರಿಸುವುದು ಅನಿವಾರ್ಯ ಎಂದು ಸುರ್ಜಿತ್ ತಿಳಿಸಿದರು.

ಪ್ರಧಾನ ಶತ್ರುಗಳು ಯಾರು?

ರಾಷ್ಟ್ರೀಯ ಸನ್ನಿವೇಶಕ್ಕೆ ಬರುತ್ತಾ ಸುರ್ಜಿತ್ ಭಾರತ "ಅಸ್ಥಿರತೆಯ ಒಂದು ಅವಧಿಯನ್ನು ಪ್ರವೇಶಿಸಿದೆ. ಮತ್ತು ಒಂದು ಪಕ್ಷ ದೀರ್ಘ ಕಾಲ ಆಳಬಹುದಾದ ಸಮಯ ಹೋಗಿದೆ" ಎಂಬುದು ಈ ವೇಳೆಗೆ ಎಲ್ಲರಿಗೂ ಸ್ಪಷ್ಟವಾ

ಪುಟ 8 ನೋಡಿ

ಮೇಲಿನ ಫೋಟೋ: ಹುತಾತ್ಮರಿಗೆ ಶ್ರದ್ಧಾಂಜಲಿ. ಮಹಾಧಿವೇಶನದ ಕಲಾಪಗಳು ಆರಂಭವಾಗುವ ಮೊದಲು ಸುರ್ಜಿತ್, ಇ.ಎಂ.ಎಸ್., ನಯನಾರ್ ಮತ್ತಿತರ ಮುಖಂಡರು ಕೆಂಪು ನಮನ ಸಲ್ಲಿಸುತ್ತಿದ್ದಾರೆ.
ಕೆಳಗಿನ ಫೋಟೋ: ಸುರ್ಜಿತ್ ಕರಡು ರಾಜಕೀಯ ವರದಿ ಮಂಡಿಸುತ್ತಿದ್ದಾರೆ



3 ರಾಜ್ಯದ ಬೆಳವಣಿಗೆಗೆ ಕನಿಷ್ಟ ಕಾರ್ಯಕ್ರಮವನ್ನಾದರೂ ರೂಪಿಸಿ
- ವಿಧಾನಸಭೆಯಲ್ಲಿ ಕಾಂ.ಶ್ರೀರಾಮರೆಡ್ಡಿ ಆಗ್ರಹ

4 ಕನಿಷ್ಟ ಜವಾಬ್ದಾರಿಯನ್ನೂ ತೋರದ ರಾಜ್ಯ ಬಜೆಟ್

5 ಮನೆಗೆ ಮಾರಿ ಪರರಿಗುಪಕಾರಿ

2 "ಸತ್ಯವನ್ನು ಎದುರಿಸಲು ಭಯಪಡಬಾರದು" ಎನ್ನುತ್ತಾರೆ "ಬಾಂಬೆ" ನಿರ್ದೇಶಕ
ಬುಡಮೇಲಾಗಿ ಬಿದ್ದ ಬೇರಿಂಗ್ಸ್ ಬ್ಯಾಂಕ್ ಕಥೆ

ಆಧುನಿಕ ಭಾರತದ ಆಧುನಿಕ ವರ್ಗಗಳು, ಮುಖ್ಯವಾಗಿ ಕಾರ್ಮಿಕ ವರ್ಗ ಒಂದು ಉತ್ತಮ ಮಾನವೀಯ, ಸಮೃದ್ಧ
ಬದುಕಿಗಾಗಿ ಹೋರಾಟಕ್ಕೆ ನಾಂದಿ ಹಾಕಿದ ಮಹಾನಗರ ಮುಂಬೈ. ಐವತ್ತು ವರ್ಷಗಳ ಹಿಂದೆ ಸ್ವಾತಂತ್ರ್ಯ ಹೋರಾಟದಲ್ಲಿ
ಜನಸಾಮಾನ್ಯರ ಜ್ವಲಂತ ಪಾತ್ರವನ್ನು ಮನಗಾಣಿಸಿ ಕೊಟ್ಟ ಮಹಾನಗರ ಮುಂಬೈ. ನಾವಿಕರು ಬ್ರಿಟಿಷರ ವಿರುದ್ಧ ಬಂಡಾ
ಯವೆದ್ದಾಗ ದುಡಿಯುವ ಜನ ಅವರಿಗೆ ಬೆಂಬಲವಾಗಿ ಜಾತಿ-ಮತ-ಭಾಷೆಗಳ ಭೇದಭಾವವಿಲ್ಲದೆ ಒಟ್ಟಾಗಿ ಬೀದಿಗಳಲ್ಲಿ
ಭಾರತೀಯ ಜನತೆಯ ಐಕ್ಯತೆಯನ್ನು ಬ್ರಿಟಿಷರಿಗೆ ಮನವರಿಕೆ ಮಾಡಿದ ಮಹಾನಗರ ಮುಂಬೈ. ಎರಡು ವರ್ಷಗಳ
ಹಿಂದೆ ಇದೇ ಮಹಾನಗರ ತಲ್ಲಣಗೊಂಡಿತು. ದೇಶಪ್ರೇಮಿಗಳನ್ನು ಜಾತ್ಯಾತೀತರನ್ನು ಪ್ರಗತಿಶೀಲರನ್ನೆಲ್ಲಾ ತಲ್ಲಣಗೊಳಿ
ಸಿತು. ಈ ತಲ್ಲಣವನ್ನು, ನೋವನ್ನು ಸಿನಿಮಾ ಮಾಧ್ಯಮದಲ್ಲಿ ಅಭಿವ್ಯಕ್ತಿಗೊಳಿಸಿದ "ಬಾಂಬೆ" ಚಿತ್ರ ಆ ತಲ್ಲಣಕ್ಕೆ
ಕಾರಣವಾದ ಗುಂಪೊಂದು ಅಲ್ಲಿ ಅಧಿಕಾರ ಪೀಠ ಗಳಿಸಿರುವ ಸಂದರ್ಭದಲ್ಲಿ ಅದೇ ಶಕ್ತಿಗಳಿಂದ ಆಕ್ರಮಣಕ್ಕೆ ಗುರಿ
ಯಾಗಿರುವುದೂ ಆಕಸ್ಮಿಕವೇನಲ್ಲ. ಆದರೆ ಈ ಬೆದರಿಕೆಯನ್ನು ದೇಶಪ್ರೇಮಿಗಳೆಲ್ಲಾ ಎದುರಿಸಲೇಬೇಕು.

"ಸತ್ಯವನ್ನು ಎದುರಿಸಲು ನಾವು ಭಯಪಡಬಾರದು"

ಎನ್ನುತ್ತಾರೆ 'ಬಾಂಬೆ' ಚಿತ್ರದ ನಿರ್ದೇಶಕ ಮಣಿರತ್ನಂ ಒಂದು ಸಂದರ್ಶನದಲ್ಲಿ'

◆ ***ಪ್ರತಿಭಟನೆಗಳು ಕುತೂಹಲಕಾರಿಯಾಗಿ ಕಾಣುತ್ತವೆ. ವಿಶೇಷವಾಗಿ ನೀವು ಪರಸ್ಪರ ವಿರೊಧಿ ಕೋಮುಗಳ ಅಭಿಪ್ರಾಯಗಳನ್ನು ಸಮತೋಲನಗೊಳಿಸಲು ಪ್ರಯತ್ನಿಸಿದಂತಿರುವಾಗ. ಇಂತಹ ಸಮತೋಲನ ಉದ್ದೇಶಪೂರ್ವಕವೇ?***

✪ ನಿಜವಾಗಿಯೂ ನನಗೆ ಗೊತ್ತಿಲ್ಲ...... ಚಿತ್ರ ಬೆಳೆದದ್ದು ಆ ರೀತಿ. ಒಬ್ಬ ಸಿನಿಮಾಕಾರನ ಪ್ರಧಾನ ಹೋರಾಟವೆಂದರೆ ತನ್ನ ಚಿತ್ರ ಕಥೆಯನ್ನು ರಚಿಸುವುದು ಹೇಗೆ ಎಂದು. ಒಂದು ಕಥೆ ಹೇಳಲು ವಿಭಿನ್ನ ದೃಷ್ಟಿಕೋನಗಳ ನಡುವೆ ಹಿಂದೆ-ಮುಂದೆ ಹೋಗುತ್ತಿರಬೇಕಾಗುತ್ತದೆ. 'ಬಾಂಬೆ'ಯಲ್ಲಿ ಚಿಗುರೊಡೆಯುವ ಅಂಶವೆಂದರೆ ಒಂದು ನಿರ್ದಿಷ್ಟ ಸಂದರ್ಭದೊಳಗಿನ ಒಂದು ಪ್ರೇಮ ಕಥೆ. ಈ ಆಧಾರದ ಮೇಲೆ ವಿವಿಧ ಪಾತ್ರಗಳು ಮೂಡಿ ಬಂದಿವೆ.

◆ ***ಎರಡು ರಾಜಕೀಯ ಮುಖಂಡರು ಬಹುಪಾಲು ಮೊಂಟಾಜ್ ಚಿತ್ರಣದಲ್ಲೇ ಕಾಣಬರುತ್ತಾರೆ. ನಿಮ್ಮ ಚಿತ್ರದಲ್ಲಿ ಮಾಡಿರುವ 'ಕಟ್'ಗಳು ನೀವು ಏನು ಹೇಳಬೇಕೆಂದಿದ್ದಿರೋ ಅದನ್ನು ದುರ್ಬಲಗೊಳಿಸಿವೆಯೇ?***

✪ ಸುಮಾರಾಗಿ ಇಲ್ಲ. ಸುಮಾರು 140 ಅಡಿಗಳಷ್ಟು ಕತ್ತರಿಸಿದ್ದಾರೆ. ಅಂದರೆ ಸುಮಾರು ಎರಡು ನಿಮಿಷಗಳಷ್ಟು. ಅವು ಕ್ಷುಲ್ಲಕ ಕಟ್‌ಗಳು. ಅವು ಚಿತ್ರದ ನವಿರನ್ನು ಸ್ವಲ್ಪ ಕಡಿಮೆಮಾಡಿರಬಹುದು. ಆದರೆ ಚಿತ್ರದ ಸತ್ಯವನ್ನು ದುರ್ಬಲಗೊಳಿಸಿಲ್ಲ. ನಿಜ, 'ಬಾಂಬೆ'ಯ ಒಂದಾದರೂ ಫ್ರೇಂಗೆ ಕತ್ತರಿ ಬೀಳಬಾರದಿತ್ತೆಂದು ನನ್ನ ಇಚ್ಛೆ.

◆ ***ನೀವು ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಲು ಹಿಂಜರಿದಿರಾ?***

✪ ನಾನು ಹೇಳಬೇಕೆಂದಿದ್ದದ್ದು ಇಷ್ಟೇ-ಒಂದಿಷ್ಟು ಪ್ರಮಾಣದಲ್ಲಿ ಮನಸ್ಸಿಗೆ ನೋವುಂಟುಮಾಡಲಾಗಿದೆ. ಹೀಗೆಂದು ಹೇಳಲು, ಅದರ ಹೊಡೆತವನ್ನು ಮೃದುಗೊಳಿಸಲು ನಾನು ಕೈಗಳಿಗೆ ಮೆತ್ತೆಗಳನ್ನು ಧರಿಸುವುದು ಸಾಧ್ಯವಿರಲಿಲ್ಲ. ಸತ್ಯವನ್ನು ಹೇಳಲು ಅಥವಾ ಈ ರೀತಿ ನಡೆದದ್ದು ಸರಿಯಲ್ಲ ಎಂದು ಹೇಳಲು ನಾವು ಭಯಪಡಬೇಕಾಗಿಲ್ಲ. ಪ್ರೇಕ್ಷಕರು ನಿಮ್ಮ ಭಾವನೆಗಳನ್ನು ಹಂಚಿಕೊಂಡರೆ ನಿಮ್ಮ ಉದ್ದೇಶ ಸಾರ್ಥಕವಾದಂತೆ.

ನನ್ನ ಉದ್ದೇಶ ಪ್ರಚೋದಿಸುವುದಲ್ಲ, ನಾವೆಲ್ಲ ಒಂದು ಎಂಬ ಭಾವನೆಯನ್ನು, ನಾವೆಲ್ಲ ಜೀವನದಿಂದ ಬೆಸೆಯಲ್ಪಟ್ಟ ಮಾನವ ಜೀವಿಗಳು ಎಂಬುದನ್ನು ಮೂಡಿಸುವುದು. ಇದನ್ನು ಹೇಳಲು ನಾನು ಅಧಿಕಾರಶಾಹಿ ಪದಗಳ ಹಿಂದೆ ಅಡಗಿಕೊಳ್ಳಲಾಗಲಿ ಅಥವಾ ವಾಸ್ತವತೆಗೆ ಮೆತ್ತೆ ಒದಗಿಸಲಾಗಲೀ ಇಷ್ಟಪಡಲಿಲ್ಲ. ಒಂದು ಚಿತ್ರ ತೆಗೆಯುವ ವ್ಯಕ್ತಿಗೆ ಒಂದು ಬಲವಾದ [illegible] ದಿದ್ದರೆ ಆತ ಈ ತೊಡಕನ್ನು ದಾಟಲೇಬೇಕು-ನೋವುಂಟು ಮಾಡುವ ಕೆಲವು ಕ್ಷಣಗಳನ್ನು ತೋರಿಸಲೇಬೇಕಾಗುತ್ತದೆ.

◆ ***ಇಂತಹ ಒಂದು ಬಲಶಾಲೀ ವಸ್ತುವಿಗೆ ಹಾಡು-ಕುಣಿತಗಳು ಅಗತ್ಯವಿದ್ದುವೇ?***

✪ ಪ್ರತಿಬಾರಿ ಒಂದು ಚಿತ್ರ ಆರಂಭಿಸುವಾಗ ಹಾಡು-ಕುಣಿತಗಳಿಲ್ಲದೆ ಅದನ್ನು ಮಾಡಬಹುದು ಎಂದು ಅನಿಸುತ್ತದೆ. ಆದರೆ ಆಗ ನಾನು ಮುಖ್ಯಪ್ರವಾಹದಲ್ಲಿ ಕೆಲಸ ಮಾಡುತ್ತಿದ್ದೇನೆ, ನಾನು ಜನಗಳನ್ನು ತಲುಪಬೇಕು ಎಂದು ನೆನಪಾಗುತ್ತದೆ. ಈ ಸ್ವರೂಪವನ್ನು ಬಿಟ್ಟು ಬಿಡಲಿಕ್ಕಾಗಿ ಪ್ರೇಕ್ಷಕರಿಂದ ದೂರವಾಗುವ ಬೆಲೆ ತೆರಲು ಸಾಧ್ಯವಿಲ್ಲ..... ಆದರೆ ನೋಡೋಣ. ಬಹುಶಃ ಇನ್ನೆರೆಡು ಮೂರು ವರ್ಷಗಳಲ್ಲಿ ಹಾಡು ಕುಣಿತಗಳಿಲ್ಲದೆ ಒಂದು ಚಿತ್ರ ತೆಗೆಯುವ ಎದೆಗಾರಿಕೆ ನನಗೆ ಬರಬಹುದು.

◆ ***ನಿಮ್ಮ ಚಿತ್ರ ಮಕ್ಕಳ ನಡುವೆ ಆಶ್ಚರ್ಯಜನಕ ಸೌಹಾರ್ದವನ್ನು ಅಭಿವ್ಯಕ್ತಗೊಳಿಸುತ್ತದೆ.***

✪ ದೊಡ್ಡವರು ಮತ್ತು ಮಕ್ಕಳ ನಡುವೆ ಒಂದು ವಿರೋಧಿ ಅಂಶವಿರಬೇಕು ಎಂದು ನನ್ನ ಮನಸ್ಸಿನ ಮೂಲೆಯಲ್ಲೆಲ್ಲೋ ಇತ್ತು-ಬೆಳೆದವರು ಹೊಡೆದಾಡಿದರೂ ಮಕ್ಕಳ ನಡುವೆ ಐಕ್ಯತೆ ಸಾಧ್ಯ ಎಂಬುದು.

(ಕೃಪೆ: ಸಂಡೇ ಟೈಮ್ಸ್)

ಬಂಡವಾಳಶಾಹಿ ಪದ್ಧತಿ ಅತ್ಯುತ್ತಮ ಎನ್ನುವವರ ತಲೆ ಮೇಲೆ ಹೊಡೆದು ಸಾರಿದ ಕಥೆ

ಬುಡ ಮೇಲಾಗಿ ಉರುಳಿ ಬಿದ್ದ ಬೇರಿಂಗ್ಸ್ ಬ್ಯಾಂಕ್

ಅಂತರಾಷ್ಟ್ರೀಯ ಹಣಕಾಸು ವಲಯವಲ್ಲಿ ಬೇರಿಂಗ್ಸ್ ಬ್ಯಾಂಕ್ ದಿವಾಳಿಯೆದ್ದು ಹೋದ ಸುದ್ದಿ ಈಗ ಒಂದು ಬಹುಮುಖ್ಯ ಸುದ್ದಿ. 223 ವರ್ಷಗಳಷ್ಟು ಹಳೆಯ ಜಗದ್ವಿಖ್ಯಾತ ಬ್ಯಾಂಕು ಉರುಳಿದ ಕತೆ. ಬಂಡವಾಳಶಾಹಿ ಪದ್ಧತಿಯಲ್ಲಿ ಏನನ್ನೆಲ್ಲ ಆಗಬಹುದು ಎಂಬುದುರ ಒಂದು ಸೂಚಿ ಅಷ್ಟೇ.

ಬ್ರಿಟನ್ ಮೂಲದ ಈ ಬ್ಯಾಂಕಿನಲ್ಲಿ ಬ್ರಿಟನ್ನಿನ ರಾಣಿಯೂ ಖಾತೆ ಹೊಂದಿದ್ದಳಂತೆ. ಒಂದು ಕಾಲದಲ್ಲಿ ಜಗತ್ತಿನ ಆರು ದೊಡ್ಡ ಶಕ್ತಿಗಳು ಇವೆ ಅವುಗಳೆಂದರೆ ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್, ಪ್ರಷ್ಯ ಆಸ್ಟ್ರಿಯಾ, ರಷ್ಯ ಮತ್ತು ಬೇರಿಂಗ್ ಬ್ರದರ್ಸ್ ಎನ್ನಲಾಗುತ್ತಿತ್ತಂತೆ. ಅಂದರೆ ಐದು ದೇಶಗಳನ್ನು ಶಕ್ತಿಯೆಂದು ಪರಿಗಣಿಸಿದಂತೆ ಬೇರಿಂಗ್ಸ್ ಬ್ರದರ್ಸ್ ಬ್ಯಾಂಕನ್ನು ಪರಿಗಣಿಸಲಾಗುತ್ತಿತ್ತು. ಅಂತಹ ಬ್ಯಾಂಕು ಕೆಲವೇ ದಿನಗಳಲ್ಲಿ ಧೂಳೀ ಪಟವಾಯಿತೆಂದರೆ ಬಹಳ ವಿಚಿತ್ರವೆನಿಸುತ್ತದಲ್ಲವೆ? ಅದೇ ಬಂಡವಾಳಶಾಹಿ ಪದ್ಧತಿಯ ಗುಣ. ಏನು ಬೇಕಾದರೂ ಆಗಬಹುದು.

ಇಷ್ಟಕ್ಕೆಲ್ಲ ಕಾರಣ? ನಿಕೋಲಸ್ ಲೀಸನ್ ಎಂಬ ಒಬ್ಬ ಇಪ್ಪತ್ತೆಂಟು ವರ್ಷದ ಉದ್ಯೋಗಿ. ಈತ ಈ ಬ್ಯಾಂಕಿನ ಬಹಳ ಮುಖ್ಯ ಉದ್ಯೋಗಿಯೂ ಹೌದು. ಸಿಂಗಾಪುರದಲ್ಲಿ ಈ ಬ್ಯಾಂಕ್‌ನ ಡೆರಿವೇಟೆನ್ಸ್ ಟ್ರೇಡಿಂಗ್ ಎಂಬ ವಿಶಿಷ್ಟ ರೀತಿಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಈತ ಬ್ಯಾಂಕನ್ನೇ ಮುಳುಗಿಸಿಬಿಟ್ಟ.

ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಡೆಸುವ ಬ್ಯಾಂಕುಗಳು ಹೀಗೆ ದಿವಾಳಿಯೆದ್ದು ಹೋಗುವ ಉದಾಹರಣೆಗಳು ನಮಗೆ ಸಿಗುತ್ತವೆ. ನಮ್ಮ ದೇಶದಲ್ಲೇ ನಡೆದ ಶೇರು ಹಗರಣ ಬಹಳ ದೊಡ್ಡ ಪ್ರಮಾಣದ ಮೋಸ. ನಮಗೆ ಈ ನೆನಪು ಹಸಿರಾಗೇ ಇದೆ. ಬೇರಿಂಗ್ಸ್ ಬ್ರದರ್ಸ್ ಬ್ಯಾಂಕ್‌ನದೂ ಇಂತಹದ್ದೇ ಮೋಸ.

ಈ ಬ್ಯಾಂಕಿನಲ್ಲಿ ಹತೋಟಿ ಪದ್ಧತಿಯೇ ಇರಲಿಲ್ಲವೇ? ಬ್ಯಾಂಕಿನ ನಿರ್ವಾಹಕರು ವ್ಯವಹಾರದ ಮೇಲೆ ಹಿಡಿತ ಹೊಂದಿರಲಿಲ್ಲವೇ ಎಂಬೆಲ್ಲ ಪ್ರಶ್ನೆಗಳು ಏಳುತ್ತವೆ. ಆದರೆ ಈ ವಿಷಯಗಳಲ್ಲಿ ಇನ್ನೂ ಬಹಳ ವಿವರಗಳು ಹೊರಬರಬೇಕಿವೆ.

ಈಗ ಹೊರಬಂದಿರುವುದು ಅತ್ಯಲ್ಪ. ಇದು ಒಬ್ಬನೇ ವ್ಯಕ್ತಿಯ ಕುತಂತ್ರವಿರಲಿಕ್ಕಿಲ್ಲ ಎಂಬುದು ಮೇಲು ನೋಟಕ್ಕೆ ಹೊಳೆಯುತ್ತದೆ.

ಈಗ ಈ ಡೆರಿವೆಟೆನ್ಸ್ ಟ್ರೇಡಿಂಗ್ ಅಂದರೆ ಏನೆಂದು ಅರ್ಥ ಮಾಡಿಕೊಳ್ಳೋಣ. ಇದು ಬಹಳ ಸಂಕೀರ್ಣವಾದ ವ್ಯವಹಾರ. ಶೇರುಗಳಿಗೆ ಸಂಬಂಧಪಟ್ಟಂತೆ ಒಂದು ಉದಾಹರಣೆ ತೆಗೆದುಕೊಳ್ಳೋಣ.

ಅ ಎಂಬ ಶೇರಿನಾಂದರ ಬೆಲೆ ಟೋಕಿಯೊದಲ್ಲಿ ಹತ್ತು ಅಮೇರಿಕನ್ ಡಾಲರುಗಳಷ್ಟಿದೆ ಎಂದುಕೊಳ್ಳೋಣ. ಅದೇ ದಿನ ನ್ಯೂಯಾರ್ಕಿನಲ್ಲಿ ಈ ಇದೇ ಶೇರಿನ ಬೆಲೆ 10.05 ಡಾಲರುಗಳಷ್ಟಿರುತ್ತದೆ. ಅದೇ ದಿನ ಟೋಕಿಯೋದಲ್ಲಿ ಈ ಶೇರನ್ನು ಕೊಂಡು ನ್ಯೂಯಾರ್ಕಿನಲ್ಲಿ ಮಾರಾಟ ಮಾಡಿದರೆ ಪ್ರತಿ ಶೇರಿಗೆ 0.05 ಡಾಲರಿನಷ್ಟು ಲಾಭವಾಗುತ್ತದೆ. ಇಲ್ಲಿ ಕೊಡುಕೊಳ್ಳುವಾಗ ಕಾಂಟ್ರಾಕ್ಟ್ (ಒಪ್ಪಂದ) ಮಾತ್ರ ಆಗುತ್ತದೆ. ಹೊರತು ಶೇರುಗಳ ವಿನಿಮಯ ಆಗುವುದಿಲ್ಲವಾದ್ದರಿಂದ ಶೇರುಗಳಿಲ್ಲದೆ ಈ ಒಪ್ಪಂದ ಮಾಡಿಕೊಳ್ಳಬಹುದು. ಆದರೆ ನಿರ್ದಿಷ್ಟಪಡಿಸಿದ ದಿನಗಳಲ್ಲಿ ಶೇರುಗಳನ್ನು ನೀಡಬೇಕಾಗುತ್ತದೆ.

ಈಗ ಮೇಲಿನ ಉದಾಹರಣೆಯಲ್ಲಿ ಇನ್ನೊಂದು ರೀತಿಯೂ ಸಾಧ್ಯ. ನ್ಯೂಯಾರ್ಕಿನಲ್ಲಿ ಮಾರಲು ಒಪ್ಪಂದ ಮಾಡಿಕೊಂಡು ಅದೇ ದಿನ ಕೆಲವೇ ನಿಮಿಷಗಳ ಸಮಯದಲ್ಲಿ ಟೋಕಿಯೊದಲ್ಲಿ ಕೊಳ್ಳಲು ಒಪ್ಪಂದ ಮಾಡಿಕೊಳ್ಳಬಹುದು. ಇಂತಹ ವ್ಯವಹಾರಗಳನ್ನು "ಆರ್ಬಟ್ರೇಜ್" ಎಂದು ಕರೆಯುತ್ತಾರೆ.

ಈ 'ಆರ್ಬಿಟ್ರೇಜ್' ವ್ಯವಹಾರದಲ್ಲಿ ಪ್ರತಿಶತ ಲಾಭ ಕಡಿಮೆ ಇದೆ ಎನಿಸಿದರೂ ವ್ಯವಹಾರದ ಪ್ರಮಾಣ ಬಹಳ ದೊಡ್ಡದಿರುವುದರಿಂದ ಒಟ್ಟಾರೆ ಲಾಭ ಬಹುದೊಡ್ಡ ಪ್ರಮಾಣದ್ದಾಗಬಹುದು. ಹಾಗೆಯೇ ಹಾನಿಯೂ ಸಹ.

ಹೀಗೆಯೇ ಬೇರೆ ದೇಶದ ಕರೆನ್ಸಿ (ಹಣ) ಬೇಕಾಗಿದ್ದರೆ ಫಾರ್ವರ್ಡ್ ಕಾಂಟ್ರಾಕ್ಟರುಗಳನ್ನು ಮಾಡಿಕೊಳ್ಳಬಹುದು. ನಮ್ಮ 'ದೇಶದ ಆಮದುಗಾರನೊಬ್ಬನಿಗೆ ಒಂದು ಅಮೇರಿಕನ್ ಯಂತ್ರ ಕೊಳ್ಳಲು 10000 ಡಾಲರುಗಳ ಒಂದು ತಿಂಗಳ ನಂತರ ಬೇಕೆಂದು ಇಟ್ಟುಕೊಳ್ಳೋಣ ಇಂದು ಒಂದು ಡಾಲರಿನ ಬೆಲೆ 31 ರೂಪಾಯಿಗಳು ಇಟ್ಟುಕೊಳ್ಳೋಣ. ಆದರೆ ಒಂದು ತಿಂಗಳ ನಂತರ ಒಂದು ಡಾಲರಿನ ಬೆಲೆ 31 ರೂಪಾಯಿಗಳಿಗಿಂತ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಈ 10000 ಡಾಲರು ಪಡೆಯಲು ಹೆಚ್ಚು ಬೆಲೆ ತೆರುವ ಬದಲು ಇಂದೇ ಆತ ತನ್ನ ಬ್ಯಾಂಕಿನ ಮೂಲಕ ಒಂದು ಒಪ್ಪಂದ ಮಾಡಿಕೊಳ್ಳುತ್ತಾನೆ. ಈ ಒಪ್ಪಂದದಂತೆ ಒಂದು ಡಾಲರಿಗೆ 31 ರೂಪಾಯಿಗಳಂತೆ 10000 ಡಾಲರುಗಳನ್ನು ಒಂದು ತಿಂಗಳ ನಂತರ ಮಾರಲು ಡಾಲರ್ ಮಾರುವ ಬ್ಯಾಂಕ್ ಒಪ್ಪಿಕೊಂಡಿರುತ್ತದೆ. ಇಲ್ಲಿ ಎಲ್ಲರೂ ತಮ್ಮ ಲಾಭದ ಕಡೆಗೆ ಗಮನ ಕೊಡುವುದರಿಂದ ವ್ಯವಹಾರ ಬಹಳ ಸಂಕೀರ್ಣವಾಗುತ್ತದೆ. ಇದು ಫಾರ್ವರ್ಡ್ ಕಾಂಟ್ರಾಕ್ಟ್.

ಈಗ ಡೆರಿವೇಟಿವ್ಸ್ ಟ್ರೇಡಿಂಗ್ ಎಂದರೆ ಇಂತಹ ಆರ್ಬಿಟ್ರೇಜ್ ಮತ್ತು ಫಾರ್ವರ್ಡ್ ಇತ್ಯಾದಿ ಹಲವು ತರಹದ ಒಪ್ಪಂದಗಳ ವ್ಯವಹಾರ. ಆದ್ದರಿಂದಲೇ ಇದು ಬಹಳ ಪರಿಣತಿ, ಅನುಭವ, ಕೌಶಲ್ಯ ಬೇಡುವ ವ್ಯವಹಾರ.

ಹಾಗೆ ಒಂದು ರೀತಿಯಲ್ಲಿ ಇದು ಜೂಜಿನಂತೆ ಇಲ್ಲಿ ಜೂಜಿನಲ್ಲಿ ಪಣಕಟ್ಟಿದಂತೆ ಪಣಕಟ್ಟಬೇಕಾಗುತ್ತದೆ ಬಂದರೆ ಅಪಾರ ಲಾಭ ಹೋದರೆ ಅಪಾರ ಲಾಭ.

ಈಗ ಬೇರಿಂಗ್ಸ್ ಬ್ರದರ್ಸ್ ಬ್ಯಾಂಕಿನ ನಿಕೋಲಸ್ ಲೀಸನ್ ಮಾಡುತ್ತಿದ್ದ ವ್ಯವಹಾರ ಇಂತಹದ್ದೇ. ಈತ ಸಿಂಗಪೂರದಲ್ಲಿದ್ದುಕೊಂಡು ಜಪಾನಿನ ಶೇರು ಮಾರುಕಟ್ಟೆಯಲ್ಲಿ ಈ ವ್ಯವಹಾರ ಮಾಡುತ್ತಿದ್ದ. ನಮ್ಮ ವಿವಿಧ ಶೇರು ಮಾರುಕಟ್ಟೆ ಸೂಚ್ಯಂಕದಂತೆ ಜಪಾನಿನಲ್ಲಿ ನಿಕ್ಕಿ ೨೨೫ ಶೇರು ಬೆಲೆ ಸೂಚ್ಯಂಕವಿದೆ. ಈ ಸೂಚ್ಯಂಕ ಏರಬಹುದೆಂಬ ನಿರೀಕ್ಷೆಯಲ್ಲಿ ಈ ಬಹು ದೊಡ್ಡ ಮೊತ್ತದ ಒಪ್ಪಂದಗಳನ್ನು ಮಾಡಿಕೊಂಡ. ಈ ನಿಕ್ಕಿ 225 ಸೂಚ್ಯಂಕ ಇಳಿಯುವ ಸಾಧ್ಯತೆಯನ್ನು ಆತ ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಆದರೆ ಜಪಾನಿನ ಕೋಬೆಯಲ್ಲಿ ಭೂಕಂಪ ಆದ ಕಾರಣ ನಿಕ್ಕಿ 225 ಸೂಚ್ಯಂಕ ಕುಸಿಯತೊಡಗಿತು. ನಿಕೋಲಸ್ ಲೀಸನ್ ಅಪಾರ ಹಾನಿಯಾಗುವುದನ್ನು ಕಂಡುಕೊಂಡ. ಇದನ್ನು ತಪ್ಪಿಸಲು ಇಮ್ಮಡಿ ಹಣ ತೊಡಗಿಸಿದ. ಇದೂ ಆತನ ನಿರೀಕ್ಷೆಯಂತೆ ಆಗಲಿಲ್ಲ, ಆಗ ಇದಕ್ಕೂ ಇಮ್ಮಡಿ ಪಣ ಕಟ್ಟಿದ ಇಷ್ಟೊತ್ತಿಗೆ ಆಗಲೇ ಅಪಾರ ಹಾನಿಯನ್ನು ಬೇರಿಂಗ್ಸ್ ಬ್ಯಾಂಕ್ ಅನುಭವಿಸಿತ್ತು. ಈಗ ಅದು ಏನಾಗುತ್ತಿದೆ ಎಂದು ನೋಡುವುದರೊಳಗೆ ದಿವಾಳಿಯೆದ್ದು ಹೋಗಿತ್ತು. ಲೀಸನ್ ಸಿಂಗಾಪುರ ಬಿಟ್ಟು ಒಂದು ವಾರ ತಲೆ ಮರೆಸಿಕೊಂಡಿದ್ದು ನಂತರ ಬ್ರಿಟಿಷ್ ಪೋಲೀಸರಿಗೆ ಶರಣಾದ.

ಈಗ ಬೇರಿಂಗ್ಸ್ ಬ್ಯಾಂಕಿನ ನಿರ್ವಾಹಕರು ಇದು ನಿಕೋಲಸ್ ಲೀಸನ್ ಒಬ್ಬನದೇ ಕೆಲಸ ತಮಗಾರಿಗೂ ಇದರ ಅರಿವಿರಲಿಲ್ಲ ಎನ್ನುತ್ತಾರೆ. ಆದರೆ ಅದನ್ನು ನಂಬುವುದು ಕಷ್ಟ. ಈ ವ್ಯವಹಾರ ನಡೆಯುತ್ತಿರುವಾಗಲೇ 800 ದಶಲಕ್ಷ ಪೌಂಡುಗಳಷ್ಟು ಹಣವನ್ನು ತನ್ನ ಪ್ರಧಾನ ಕಛೇರಿಯಿಂದ ತರಿಸಿಕೊಂಡಿದ್ದ.

ಲೀಸನ್‌ಗೆ ಇಂತಹ ವ್ಯವಹಾರ ಮಾಡುವುದರಿಂದ ಲಾಭವೇನೆಂದು ಕೇಳಬಹುದು. ಇಂತಹ ವ್ಯವಹಾರ ಮಾಡುವವರಿಗೆ ಸಂಬಳವಲ್ಲದೆ ಲಾಭದ ಮೇಲೆ ಕಮಿಷನ್ ಸಹ ದೊರೆಯುತ್ತದೆ. ಈ ಲಾಭದ ಮೇಲಿನ ಕಮಿಷನ್ ಗಾಗೇ ಲೀಸನ್ ಇಂತಹ ಜೂಜಿಗೆ ಇಳಿದದ್ದು 1992ರಲ್ಲಿ ಬೇರಿಂಗ್ಸ್ ಬ್ಯಾಂಕಿನ ವಿಶ್ವ ವ್ಯಾಪಾರದ ಲಾಭ ಶೇ. 25ರಷ್ಟನ್ನು ಲೀಸನ್ ಒಬ್ಬನೇ ಗಳಿಸಿಕೊಂಡಿದ್ದನಂತೆ. ಬ್ಯಾಂಕಿನ ನಿರೀಕ್ಷಕರು/ಲೆಕ್ಕ ತಪಾಸಕರು ಈತನ ಬಗ್ಗೆ ಬ್ಯಾಂಕು ಎಚ್ಚರವಹಿಸಬೇಕೆಂದು ಆಗಲೇ ಹೇಳಿದ್ದರಂತೆ.

ಆದರೇನು ಬಂಡವಾಳಶಾಹಿಯ ಈ ಜೂಜಿನಂತಹ ವ್ಯವಹಾರದಲ್ಲಿ ಶತಮಾನಗಳಷ್ಟು ಉದ್ದದ ಚರಿತ್ರೆಯುಳ್ಳ ಬ್ಯಾಂಕ್ ಕೆಲವೇ ದಿನಗಳಲ್ಲಿ ನೆಲಕಚ್ಚಿತು. ಈ ಬ್ಯಾಂಕಿನಲ್ಲಿ ವ್ಯವಹಾರ ಹೊಂದಿದವರಿಗೆಲ್ಲ ಈ ನಷ್ಟದ ಬಿಸಿ ತಟ್ಟುತ್ತದೆ. ಇಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲವೇನೊ ಎನಿಸುತ್ತದೆ.

ಬಂಡವಾಳಶಾಹಿ ಪದ್ಧತಿ ಅತ್ಯುತ್ತಮ ಪದ್ಧತಿ ಎನ್ನುವವರಿಗೆ ತಲೆಯ ಮೇಲೆ ಮೊಟಕು ಹೇಳುವ ಘಟನೆಯಂತೂ ಇದು ಹೌದು.

ಕರ್ನಾಟಕ ಸುದ್ದಿ ಸಮಾಚಾರ

"ಅಕ್ಕಿಲೂರಿನಲ್ಲಿ ಕೋಮು ಸೌಹಾರ್ದತೆ ಕಾಪಾಡಲು ಸಿಪಿಐ(ಎಂ)ನ ಯಶಸ್ವಿ ಪಾತ್ರ"

ಹುಬ್ಬಳ್ಳಿ: ಹಾನಗಲ್ ತಾಲೂಕಿನ ಅಕ್ಕಿಆಲೂರು ಗ್ರಾಮದಲ್ಲಿ ಮಾರ್ಚ್ 25 ರಂದು ಹೋಳಿ ಹಬ್ಬದ ನಿಮಿತ್ತ ಹುಲ್ಲಿನ ಆನೆಗಳ ಮೆರವಣಿಗೆಯನ್ನು ಮಸೀದಿ ಮುಂದೆ ಕೊಂಡೊಯ್ದು ಕೋಮು ಗಲಭೆ ನಡೆಸಲು ಉದ್ದೇಶಿಸಿದ್ದ ಬಿ.ಜೆ.ಪಿ.ಯ ಯತ್ನವನ್ನು ವಿಫಲಗೊಳಿಸಲು ಸಿಪಿಐ(ಎಂ) ತಾಲೂಕು ಸಮಿತಿ ಶ್ರಮಿಸಿ ಯಶಸ್ವಿಯಾಗಿದೆ.

ಅಂದು ಕೋಮುಗಲಭೆ ಸಂಭವಿಸ ಬಹುದಾದ ಮಾಹಿತಿ ತಿಳಿದಿದ್ದ ಜಿಲ್ಲಾ ವರಿಷ್ಠಾಧಿಕಾರಿಗಳು ಸುಮಾರು ಒಂದು ಸಾವಿರದಷ್ಟು ಸಿಬ್ಬಂದಿಯೊಡನೆ ಆ ಗ್ರಾಮದಲ್ಲಿ ಮುಕ್ಕಾಂ ಮಾಡಿದ್ದರು. ಕಳೆದ ಕೆಲವು ವರ್ಷಗಳಿಂದ ಈ ಗ್ರಾಮದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದವರು ಒಂದಲ್ಲ ಒಂದು ನೆಪದಲ್ಲಿ ಕೋಮು ಗಲಭೆ ಭುಗಿಲೆಬ್ಬಿಸಲು ಪ್ರಯತ್ನಿಸಿದ್ದಾಗಲೆಲ್ಲಾ ಅಲ್ಲಿನ ಸಿಪಿಐ(ಎಂ) ನ ಕಾರ್ಯಕರ್ತರು ಮಧ್ಯಪ್ರವೇಶಿಸಿ ಶಾಂತಿ ಸೌಹಾರ್ದತೆ ಕಾಪಾಡಿದ ಸತ್ಪರಂಪರೆ ಇದೆ. ಇದನ್ನು ತಿಳಿದ ಪೋಲೀಸು ಅಧಿಕಾರಿಗಳು ಊರ ಹಿರಿಯರು ಈ ಬಾರಿಯೂ ಸಿಪಿಐ(ಎಂ)ನ ಧುರೀಣರನ್ನು ಸಂಪರ್ಕಿಸಿ ಕೋಮು ಗಲಭೆ ತಡೆಯಲು ಮತ್ತು ಹೋಳಿ ಮೆರವಣಿಗೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿಯ ಸದಸ್ಯರಾದ ಫಕೀರಪ್ಪ ಹೊತ್ನಳ್ಳಿ, ಎಂ. ಜಿನ್ನಾ, ಹಾಗೂ ಅಕ್ಕಿ ಆಲೂರು ಶಾಖಾ ಕಾರ್ಯದರ್ಶಿ ವಿಶ್ವನಾಥ ತುಪ್ಪದವರು ಭಾಗವಹಿಸಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪ್ರಯತ್ನಿಸಿ ಯಶಸ್ವಿಯಾದರು.

ಅಕ್ಕಿ ಆಲೂರಿನಲ್ಲಿ ಹೋಳಿ ಹಬ್ಬದ ಸಂದರ್ಭದ ಪರಿಸ್ಥಿತಿಯನ್ನು ತಿಳಿಯಲು ಹೋಗಿ ಬಂದ ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ. ಸಿ.ಆರ್. ಭಟ್ ರವರು ಕೋಮು ಸೌಹಾರ್ದತೆ ಕಾಪಾಡಿದ ಸ್ಥಳೀಯ ಸಿಪಿಐ(ಎಂ) ಧುರೀಣರನ್ನು ಕಾರ್ಯಕರ್ತರನ್ನು ಮತ್ತು ಹಿತೈಷಿಗಳನ್ನು ಅಭಿನಂದಿಸಿದ್ದಾರೆ.

ಶಾಂತಿ ಸೌಹಾರ್ದತೆ ಕಾಪಾಡಲು ಕರೆ

ಹುಬ್ಬಳ್ಳಿ: ಹೋಳಿ ಹಬ್ಬದ ಸಂದರ್ಭದಲ್ಲಿ ಹುಬ್ಬಳ್ಳಿ ನಗರದಲ್ಲಿ ಭುಗಿಲೆದ್ದ ಗಲಭೆಗಳಿಂದಾಗಿ ಸಂಭವಿಸಿದ ಸಾವು-ನೋವು, ಆಸ್ತಿ ಹಾನಿ ನಾಗರಿಕರಿಗೆ ಆದ ಅತೀವ ಅನಾನೂಕೂಲಗಳ ಕುರಿತು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯು ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ನಗರದಲ್ಲಿ ಇನ್ನೂ ಭಯದ ವಾತಾವರಣವಿದ್ದು ನಿರಾಧಾರವಾದ ವದಂತಿಗಳನ್ನು ಹಬ್ಬಿಸುವ ಮೂಲಕ ಪುನಃ ಗಲಬೆಗಳಾಗುವ ಸಂಭವ ಇರಬಹುದಾದರಿಂದ ಸರಕಾರ ಹಾಗೂ ರಕ್ಷಣಾ ಇಲಾಖೆ ಕಟ್ಟೆಚ್ಚರದಿಂದ ಇರಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ನಗರದಲ್ಲಿ ಶಾಂತಿ ಸೌಹಾರ್ದತೆ ಕಾಪಾಡಿಕೊಂಡು ಬರಲು ಎಲ್ಲ ಜನರಿಗೆ ಸಿಪಿಐ(ಎಂ) ಕಳಕಳಿಯ ಕರೆ ನೀಡಿದೆ.

ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ನಿಯೋಗವೊಂದು ಹುಬ್ಬಳ್ಳಿ ನಗರದಲ್ಲಿ ಕಳೆದ ವಾರದಿಂದ ಗಲಭೆ ಪೀಡಿತ ಮುಸಲ್ಮಾನ ಓಣಿ, ಕಮರಿಪೇಟೆ, ಕೌಲಪೇಟೆ, ಗಣೇಶ ಪೇಟೆ, ಹಳೇ ಹುಬ್ಬಳ್ಳಿ, ಕೆ.ಎಂ.ಸಿ. ಮುಂತಾದ ಪ್ರದೇಶಗಳಿಗೆ ಭೇಟಿ ನೀಡಿ ನೊಂದ ನಾಗರಿಕರಿಂದ ಸತ್ಯ ಸಂಗತಿಗಳ ಮಾಹಿತಿ ನಡೆದಿದೆ. ಗಲಭೆಗಳಿಂದಾಗಿ ಹೆಚ್ಚಾಗಿ ಮುಗ್ಧ ಜನರು ಸಾವು ನೋವುಗಳಿಗೆ ಬಲಿಯಾಗಿದ್ದು, ಗಾಯಗೊಂಡ ಕೆ.ಎಂ.ಸಿ.ಯಲ್ಲಿ ಚಿಕಿತ್ಸೆ ಪಡೆಯುವವರನ್ನು ಸಿಪಿಐ(ಎಂ) ನಿಯೋಗದ ಸದಸ್ಯರು ಪ್ರತ್ಯಕ್ಷ ಭೇಟಿಯಾಗಿ ಅವರಿಗೆ ಸಾಂತ್ವನ ಹೇಳಿ ಬಂದಿದ್ದಾರೆ. ಕೂಡಲೇ ಸಾಕಷ್ಟು ಪರಿಹಾರ ಧನ ಕೊಡಿಸಬೇಕೆಂದು ಗಲಭೆಗಳಲ್ಲಿ ಆಸ್ತಿಪಾಸ್ತಿ, ಮನೆ, ಅಂಗಡಿ, ಆಸ್ತಿಪಾಸ್ತಿ ಕಳೆದುಕೊಂಡವರಿಗೂ ಸೂಕ್ತ ಪರಿಹಾರ ಒದಗಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ರಿಕ್ಷಾ ಚಾಲಕರ ಪ್ರತಿಭಟನಾ ಮೆರವಣಿಗೆ

ವಿಧಾನಸೌಧ ಸುತ್ತ 3. ಕಿ.ಮೀ ಸರಹದ್ದಿನಲ್ಲಿ ಆಟೋ ಪ್ರವೇಶ ನಿಷಿದ್ಧದ ವಿರುದ್ಧ ಆಟೋಚಾಲಕರ ಪ್ರತಿಭಟನಾ ಮೆರವಣಿಗೆ ಏಪ್ರಿಲ್ 4 ರಂದು ನಡೆಯಿತು.

ಬಿಡಿ ಭಾಗಗಳು, ಟೈರ್ ಟ್ಯೂಬ್ ಗಳ ಮೇಲೆ ಹಾಕಿರುವ ತೆರಿಗೆಯನ್ನು ವಾಪಸ್ಸು ಪಡೆಯಬೇಕೆಂದು ಮಾರಾಟ ತೆರಿಗೆ ಹೆಚ್ಚು ಮಾಡಿರುವುದನ್ನು ವಾಪಸ್ಸು ಪಡೆಯಬೇಕು ಎಂದು ಮುಖ್ಯ ಮಂತ್ರಿಗಳಿಗೆ ಮನವಿ ಪತ್ರ ಅಜೀವ ತೆರಿಗೆ 1800 ರೂ ಮತ್ತು ಸೆಸ್ ನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸಿ ಸಾರಿಗೆ ಸಚಿವರಿಗೆ ಮನವಿ ಪತ್ರ ಅರ್ಪಿಸಲಾಯಿತು.

ಈ ಸಭೆಯನ್ನುದ್ದೇಶಿಸಿ ಶಾಸಕರಾದ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮತ್ತು ಸಿಐಟಿಯು ನ ಕಾರ್ಯದರ್ಶಿ ಕಾಂ. ಆರ್. ಶ್ರೀನಿವಾಸ್ ಸಂಘದ ಉಪಾಧ್ಯಕ್ಷ ಬಿ.ಎಸ್. ನಾರಾಯಣ ಮೂರ್ತಿ ಮತ್ತು ಪ್ರಧಾನ ಕಾರ್ಯದರ್ಶಿ ಎಚ್.ಜಿ. ಶ್ರೀನಿವಾಸ ಮೂರ್ತಿ ಅವರುಗಳು ಮಾತನಾಡಿದರು.

ಸರ್ಕಾರದ ಜನವಿರೋಧಿ ಬಜೆಟ್ ನ್ನು ತೀವ್ರವಾಗಿ ವಿರೋಧಿಸಲಾಯಿತು. ಸರ್ಕಾರವು ಆಟೋರಿಕ್ಷಾ ಚಾಲಕರ ಬೇಡಿಕೆಯನ್ನು ಒಂದು ತಿಂಗಳೊಳಗೆ ಈಡೇರಿಸದಿದ್ದಲ್ಲಿ ಅನಿರ್ದಿಷ್ಟಕಾಲ ಮುಷ್ಕರ ಹೂಡಬೇಕಾದೀತೆಂದು ಎಚ್ಚರಿಸಿದರು.

ಮುಖ್ಯಮಂತ್ರಿಗಳಿಗೆ, ಸಾರಿಗೆ ಮಂತ್ರಿಗಳಿಗೆ, ಸಾರಿಗೆ ಆಯುಕ್ತರಿಗೆ, ಮನವಿ ಪತ್ರವನ್ನು ಸಲ್ಲಿಸಿ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಲಾಯಿತು.

ಶ್ರದ್ಧಾಂಜಲಿ ಸಭೆ

ಕೋಲಾರ: ಕಾಂ. ಕೆ.ಎ. ನಾಗರಾಜ್ ಅವರು ಮಾರ್ಚ್ 9 ರ ಗುರುವಾರದಂದು ಹಠಾತ್ ಹೃದಯಾಘಾತದಿಂದ ಅಕಾಲ ಮರಣಕ್ಕೆ ತುತ್ತಾದರು. ಇವರ ಅಕಾಲ ಮರಣದಿಂದ ದುಡಿಯುವ ವರ್ಗದ ಶೋಷಿತ ಜನತೆಗೆ ತುಂಬಲಾರದ ನಷ್ಟ ಉಂಟಾಗಿದೆ. ಇವರ ಆಶಯಗಳನ್ನು ಈಡೇರಿಸುವ ಪಣ ತೊಡಲು ಶ್ರೀನಿವಾಸ ಪುರದಲ್ಲಿ ಮಾರ್ಚ್ 25 ರಂದು ವಿದ್ಯಾರ್ಥಿ ಯುವಜನ ರೈತ ಸಂಘ ವೇದಿಕೆಯಲ್ಲಿ ಶ್ರದ್ಧಾಂಜಲಿ ಸಭೆ ಏರ್ಪಡಿಸಲಾಯಿಗಿತ್ತು.

ಈ ಸಬೆಯ ಅಧ್ಯಕ್ಷತೆ ವಿನಾಯಕ ಟ್ಯೂಟೋರಿಯಲ್ ವಿಜ್ಞಾನ ಶಿಕ್ಷಕರಾದ ಎಂ. ನಾರಾಯಣಸ್ವಾಮಿ ವಹಿಸಿದ್ದರು. ಕೋಲಾರ ಜಿಲ್ಲಾ ಡಿ.ವೈ.ಎಫ್.ಐ.ಅಧ್ಯಕ್ಷರಾದ ವಿ. ನಾಗಪ್ಪನವರು ಅಗಲಿದ ಕಾಂ. ಕೆ.ಎ. ನಾಗರಾಜ್ ರವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಕರ್ನಾಟಕ ಪ್ರಾಂತ್ಯ ರೈತ ಸಂಘ ತಾಲೂಕು ಅಧ್ಯಕ್ಷರಾದ ಎನ್. ವೀರಪ್ಪ ರೆಡ್ಡಿ ಮತ್ತು ಸಿಪಿಐ(ಎಂ)ನ ಜಿಲ್ಲಾ ಸಮಿತಿ ಸದಸ್ಯರಾದ ಪಿ. ಆರ್. ನಾರಾಯಣಸ್ವಾಮಿಯವರು ಮತನಾಡುತ್ತಾ ಕೆ.ಪಿ. ನಾಗರಾಜ್ ರವರ ಹೋರಾಟ ಜೀವನದ ಬಗ್ಗೆ ವಿವರಿಸಿದರು. ಸಭೆಯ ಸ್ವಾಗತ ಭಾಷಣ ಎಸ್.ಎಫ್.ಐ. ನ ಜಿಲ್ಲಾ ಸಮಿತಿ ಸದಸ್ಯರಾದ ವಿ. ಆನಂದ್ ಮತ್ತು ವಂದನಾರ್ಪಣೆಯನ್ನು ಆರ್. ವೆಂಕಟರಾಮ ರೆಡ್ಡಿ ಮಾಡಿದರು.

ಏಪ್ರಿಲ್ 18 ರಂದು ರೈತರ ಧರಣಿ ಸತ್ಯಾಗ್ರಹ

ವಿಜಾಪುರ: ಕಾಂಗ್ರೆಸ್ ಸರಕಾರದ ಧೋರಣೆಯನ್ನು ವಿರೋಧಿಸಿ ಬಂದಿರುವ ಜನತಾದಳ ಸರಕಾರ ಕಾಂಗ್ರೆಸ್ ಆಡಳಿತದ ದಾರಿಯನ್ನು ಹಿಡಿದಿದೆ. ವಿದ್ಯುತ್ ಉತ್ಪಾದನೆಯನ್ನು ಖಾಸಗಿ ಕಂಪೆನಿಗಳಿಗೆ ವಹಿಸಿಕೊಡುವುದಲ್ಲದೆ ವಿದ್ಯುತ್ ದರಗಳನ್ನು ಏರಿಸುವುದು ಬಡರೈತರ ಪಂಪ್ ಸೆಟ್ಟುಗಳಿಗೆ ಬೆಲೆ ನಿಗದಿಗೊಳಿಸುವುದು ಮುಂತಾದ ಕ್ರಮಗಳಿಂದ ತೀವ್ರವಾಗಿ ಖಂಡನೀಯವಾಗಿವೆಯಾದ್ದರಿಂದ ಏಪ್ರಿಲ್ 18 ರಿಂದ ಜಿಲ್ಲೆಯಾದ್ಯಂತ ಧರಣಿ ಸತ್ಯಾಗ್ರಹ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಕಾರ್ಯಕರ್ತರ ಸಭೆಯು ತೀರ್ಮಾನಿಸಿದೆ.

ಮಾರ್ಚ್ 27 ರಂದು ಸಭೆ ಸೇರಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯಕರ್ತರು ಜನತಾದಳ ಸರ್ಕಾರದ ವಿದ್ಯುತ್ ನೀತಿಯ ಬಗ್ಗೆ ಚರ್ಚಿಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಚಂದ್ರಶೇಖರ ಬಾಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ಅಣ್ಣಾರಾಯ ಈಳಿಗರ ಈ ಸಭೆಯಲ್ಲಿ ಭಾಗವಹಿಸಿದ್ದರು.

ಅಧ್ಯಕ್ಷತೆಯನ್ನು ಕಾಂ. ಭೀಮಶೀ ಕಲಾದಗಿಯವರು ಸಮಾರೋಪ ಮಾತುಗಳೊಂದಿಗೆ ಸಭೆ ಮುಕ್ತಾಯವಾಯಿತು.

ಡಿ.ವೈ.ಎಫ್.ಐ. ನೂತನ ಘಟಕ

ಬಳ್ಳಾರಿ: ಮಾರ್ಚ್ 24 ರಂದು ಬಳ್ಳಾರಿ ಜಿಲ್ಲೆಯ ಬಿಸಲಹಳ್ಳಿಯಲ್ಲಿ ಡಿ.ವೈ.ಎಫ್.ಐ. ನೂತನ ಘಟಕದ ಉದ್ಘಾಟನಾ ಸಮಾರಂಭ ನಡೆಯಿತು.

ಘಟವನ್ನು ಉದ್ಘಾಟಿಸಿ ಮಾತನಾಡಿದ ಕಾಂ. ಪ್ರಸನ್ನಕುಮಾರ್ "ಸಮಸ್ಯೆಗಳ ಪರಿಹಾರಕ್ಕಾಗಿ ಯುವಜನರು ಸಂಘಟಿತರಾಗಿ ಹೋರಾಡಬೇಕೆಂದು ಕರೆ ನೀಡಿದರು. ಸಭೆಯಲ್ಲಿ ಡಿ.ವೈ.ಎಫ್.ಐ. ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ರಾಮಾಂಜನೇಯ ಹಾಜರಿದ್ದರು.

ಸಭೆಯ ಆರಂಭದಲ್ಲಿ ಕಾಂ. ಮಲ್ಲಿಕಾರ್ಜುನ ಸ್ವಾಗತಿಸಿದರು. ಕೊನೆಯಲ್ಲಿ ಹಸೇನ್ ವಂದಿಸಿದರು. ಸಭೆಯಲ್ಲಿ 100ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಪೋಲೀಸ್ ದೌರ್ಜನ್ಯ: ಪ್ರತಿಭಟನೆ

ಹರೇಕಳ: ಮಾರ್ಚ್ 23 ರಂದು ಡಿ.ವೈ.ಎಫ್.ಐ. ಹರೇಕಳ ಘಟಕದ ಕಾರ್ಯಕರ್ತ ಅಜೀಜ್ ಅವರಿಗೆ ಬಂಟ್ವಾಳ ಪೋಲೀಸ್ ಠಾಣೆಯ ಅಧಿಕಾರಿ ವರ್ಗದವರು ಅಮಾನುಷ ಹಲ್ಲೆ ಮಾನಸಿಕ ಮತ್ತು ದೈಹಿಕ ಹಲ್ಲೆ ನಡೆಸಿದ್ದು ಮಾತ್ರವಲ್ಲ ನಿಯಮ ಬಾಹಿರವಾಗಿ ೫ ದಿವಸಕ್ಕೂ ಮಿಕ್ಕಿ ಪೋಲೀಸ್ ಠಾಣೆಯಲ್ಲಿ ಬಂಧಿಸಿಟ್ಟು ಕೋರ್ಟಿಗೆ ಹಾಜರು ಪಡಿಸದೆ ಸುಳ್ಳು ಮೊಕದ್ದಮೆ ಹಾಕಿದ್ದನ್ನು ಪ್ರತಿಭಟಿಸಿ ನೂರಾರು ಡಿ.ವೈ.ಎಫ್.ಐ. ಕಾರ್ಯಕರ್ತರು ಬಂಟ್ವಾಳ ಪೋಲೀಸ್ ಠಾಣೆಯ ಮುಂದೆ ಮತಪ್ರದರ್ಶನ ನಡೆಸಲಾಯಿತು.

ಮತಪ್ರದರ್ಶನದಲ್ಲಿ ನಿಜವಾದ ಅಪರಾಧಿಯನ್ನು ಬಂಧಿಸಬೇಕು ನಿರಪರಾಧಿ ಅಜೀಜ್‌ನನ್ನು ಬಂಧಿಸಿ ಅಮಾನುಷವಾಗಿ ವರ್ತಿಸಿದ ಠಾಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಅಜೀಜ್‌ರವರಿಗಾದ ಮಾನಸಿಕ, ದೈಹಿಕ ಮತ್ತು ಆರ್ಥಿಕ ಕಷ್ಟನಷ್ಟಗಳಿಗೆ ಠಾಣಾಧಿಕಾರಿಗಳು ಹೊಣೆಗಾರರಾಗಬೇಕು ಎಂಬ ನಾಲ್ಕು ಬೇಡಿಕೆಯನ್ನು ಮುಂದಿಟ್ಟು ಒತ್ತಾಯಿಸಲಾಯಿತು. ಮತಪ್ರದರ್ಶನದ ನಂತರ ಡಿವೈಎಫ್ಐ ಜಿಲ್ಲಾಧ್ಯಕ್ಷ ಯಾಧವ ಶೆಟ್ಟಿ, ಕಾರ್ಯದರ್ಶಿ ವಸಂತ ಆಚಾರಿ, ಸಿಪಿಐ(ಎಂ) ಜಿಲ್ಲಾ ಮುಖಂಡ ರಾಮಚಂದ್ರ ಉಚ್ಚಿಲ್, ಬಂಟ್ವಾಳ ಸಿಪಿಐ(ಎಂ) ಮುಖಂಡ ವಾಸು ಗಟ್ಟಿ, ಹರೇಕಳ ಡಿವೈಎಫ್ಐ ಅಧ್ಯಕ್ಷ ಹುಸೇನ್ ಪಾವೂರಿಲಿ, ಹಾಗೂ ಹರೇಕಳ ಗ್ರಾಮ ಪಂಚಾಯತ್ ಸದಸ್ಯ ಕೆ.ಎಚ್. ಹಾಮೀದ್‌ರವರನ್ನೊಳಗೊಂಡ ನಿಯೋಗವು ಸರ್ಕಲ್ ಇನ್ಸಪೆಕ್ಟರ್ ಶ್ರೀ ಹರಿಸಿಂಗ್‌ರವರನ್ನು ಭೇಟಿಯಾಗಿ ವಸ್ತುಸ್ಥಿತಿಯನ್ನು ವಿವರಿಸಿ ನ್ಯಾಯ ಒದಗಿಸುವಂತೆ ವಿನಂತಿಸಲಾಯಿತು. ಅವು ಸ್ವತಃ ಈ ಕೇಸಿನ ತನಿಖೆ ನಡೆಸಿ ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಮತಪ್ರದರ್ಶಗಾರರಿಗೆ ಭರವಸೆಯನ್ನಿತ್ತರು. ಮತಪ್ರದರ್ಶನಗಾರರನ್ನು ಉದ್ದೇಶಿಸಿ ಜಿಲ್ಲಾ ಡಿವೈಎಫ್ಐ ಕಾರ್ಯದರ್ಶಿ ವಸಂತ ಆಚಾರಿ, ಉಳ್ಳಾಲ ವಲಯ ಸಿಪಿಐ(ಎಂ) ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಮಾತನಾಡಿದರು. ಮತಪ್ರದರ್ಶನದಲ್ಲಿ ಹರೇಕಳ ಗ್ರಾಮಪಂಚಾಯತ್ ಉಪಾಧ್ಯಕ್ಷ ನೇಮು ಮುಖಾರಿ ಗ್ರಾಮಪಂಚಾಯತ್ ಸದಸ್ಯರುಗಳಾದ ಆನಂದ, ಅಬ್ದುಲ್ ಕಾದರ್ ಮತ್ತು ಡಿವೈಎಫ್ಐಯ ಮಹಮ್ಮದ್ ಆಶ್ರಾಫ್, ಕೆ.ಪಿ. ಇಬ್ರಾಹಿಂ ಮತ್ತು ಎಸ್ಎಫ್ಐ ಜಿಲ್ಲಾ ಮುಖಂಡ ರಾಜ್‌ಕುಮಾರ್ ಪಾಲ್ಗೊಂಡಿದ್ದರು.

"ರಿಕ್ಷಾ ಚಾಲಕರ ಸಭೆ"

ತೊಕ್ಕೊಟು: ತೊಕ್ಕೊಟು ರಿಕ್ಷಾ ಚಾಲಕರ ವಿಶೇಷ ಸಭೆ ಸ್ಟೇನಿ ಡಿ ಸೋಜರ ಅಧ್ಯಕ್ಷತೆಯಲ್ಲಿ ಪೆರಮನ್ನೂರ ಪಂಚಾಯತ್ ಮೈದಾನದಲ್ಲಿ ಸೇರಿತು. ತೊಕ್ಕೊಟು ರಿಕ್ಷಾ ಪಾರ್ಕನ್ನು ರಿಪೇರಿ ಮಾಡಿ ಅದಕ್ಕೆ ಡಾಂಬರು ಹಾಕಿಸಬೇಕೆಂದು ಮನವಿಯನ್ನು ಸಂಬಂಧಪಟ್ಟವರಿಗೆ ನೀಡಿ ಹಲವು ತಿಂಗಳಾದರೂ ಏನು ಕ್ರಮ ಕೈಗೊಳ್ಳದಿರುವುದನ್ನು ಸಭೆ ಗಂಭೀರವಾಗಿ ಪರಿಗಣಿಸಿತು.

ಉಳ್ಳಾಲ ವಲಯ ಕಾರ್ಯದರ್ಶಿ ಜಯಂತನಾಯಕ್ ಸಭೆಯಲ್ಲಿ ಭಾಗವಹಿಸಿ ಮಾಹಿತಿ ನೀಡಿದರು. ವೆಂಕಟೇಶ್ ಕುಂಪಲ ಸ್ವಾಗತಿಸಿದರು. ಪಿ. ಆನಂದ ಸಪಲ್ಯರು ಅಧ್ಯಕ್ಷರಾಗಿಯೂ ವಾರಿಖ ಡಿ ಸೋಜ ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ವೆಂಕಟೇಶ್ ಕುಂಪಲ, ಫಾರೂಕ್ ಮದನಿ ಜಂಟಿ ಕಾರ್ಯದರ್ಶಿಯಾಗಿ ಹಾಗೂ ನಾಗೇಶ್ ಕೋಶಾಧಿಕಾರಿಯಾಗಿ ಆಯ್ಕೆ ಆದರು. 10 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಆಯಿತು.

ಭಗತ್ ಸಿಂಗ್ ಹುತಾತ್ಮ ದಿನಾಚರಣೆ

ಹರವಿ: ಹರವಿ ಗ್ರಾಮದಲ್ಲಿ "ಭಗತ್ ಸಿಂಗ್ ಯುವಕ ಮಂಡಳಿ" ವತಿಯಿಂದ ಮಾರ್ಚ್ 23 ರಂದು ಭಗತ್ ಸಿಂಗರ 64ನೇ ಹುತಾತ್ಮ ದಿನಾಚರಣೆಯನ್ನು ಆಚರಿಸಲಾಯಿತು. ಇದರ ಅಂಗವಾಗಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಬಹಿರಂಗ ಸಭೆಯ ಉದ್ಘಾಟನೆಯನ್ನು ಕಾಂ. ಪಂಪಾಪತಿ ಪಾಟೀಲ್ ಮಾಡಿದರು. ಪ್ರದಕ್ಷರಯ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಿ. ವೀರನಗೌಡ ಹಾಗೂ ಮಲ್ಲಯ್ಯ ಗಮಿಸಿದ್ದರು. ಈ ಸಭೆಗೆ ಪಿ. ಗಿರಿಯಪ್ಪ ಅವರು ಹಾಜರಿದ್ದರು. ಎ.ಎಂ. ನಾಯಕ ಸ್ವಾಗತಿಸಿದರು. ಜಿ. ಮಲ್ಲಿಕಾರ್ಜುನ ವಂದಿಸಿದರು.

ವಿಜಾಪುರ: ಹುತಾತ್ಮ ಭಗತ್ ಸಿಂಗ್ ರಾಜಗುರು ಸುಖದೇವರ ದಿನಾಚರಣೆಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಜಿಲ್ಲಾ ಸಮಿತಿ ಆಶ್ರಯದಲ್ಲಿ ಎಪಿಎಂಸಿ ಯಾರ್ಡ್ ದಲ್ಲಿ ಆಚರಿಸಲಾಯಿತು.

ಅತಿಥಿಗಳಾಗಿ ಜನಪ್ರಿಯ ರೈತ ಮುಖಂಡ ಭೀಮಶಿ ಕಲಾದಗಿ ಮಾತನಾಡಿ ಹುತಾತ್ಮ ಭಗತ್ ಸಿಂಗ್ ಮತ್ತು ಅವರು ಸಂಗಾತಿಗಳು ಎಳೆವಯಸ್ಸಿನಲ್ಲಿಯೇ ಸ್ವಾತಂತ್ರ್ಯಕ್ಕಾಗಿ ಯಾವ ರೀತಿಯಾಗಿ ತ್ಯಾಗ ಮಾಡಿದ್ದಾರೆ ಎಂಬುದರ ಬಗ್ಗೆ ಸವಿಸ್ತಾರವಾಗಿ ಹೇಳಿದರಲ್ಲದೇ ಇಂದಿನ ಯುವಕರು ಭಗತ್ ಸಿಂಗ್ ರವರ. ಧ್ಯೇಯ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಯುವಕರಿಗೆ ಕರೆ ನೀಡಿದರು.

ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಸದಾನಂದ ಮೋದಿ ಹಾಜರಿದ್ದರು.

ಮಹಾಚೈತ್ರ ರದ್ಧತಿ ಖಂಡನೆ:

ಎಚ್.ಎಸ್. ಶಿವಪ್ರಕಾಶ್ ರವರ ಮಹಾಚೈತ್ರ ನಾಟಕ ಪುಸ್ತಕವನ್ನು ಕುವೆಂಪು ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯ ಪಠ್ಯಪುಸ್ತಕದಿಂದ ತೆಗೆದುಹಾಕುವ ನಿರ್ಣಯವನ್ನು ಪ್ರಬಲವಾಗಿ ಖಂಡಿಸಲಾಯಿತು. ಮಠಾಧಿಪತಿಗಳ ಪ್ರಗತಿ ವಿರೋಧಿ ಶಕ್ತಿಗಳಿಗೆ ಸರ್ಕಾರ ಮಣಿಯಬಾರದಿತ್ತೆಂದು ಸಭೆಯಲ್ಲಿ ಗೊತ್ತುವಳಿ ಸ್ವೀಕರಿಸಲಾಯಿತಲ್ಲದೆ ಸರ್ಕಾರವು ರದ್ದು ವಾಪಸ್ಸು ಪಡೆಯಬೇಕೆಂದು ಸರ್ಕಾರಕ್ಕೆ ಒತ್ತಾಯಿಸಲಾಯಿತು.

ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆ ವಿಜೇತರಾದ ಸಿಪಿಐ(ಎಂ) ಅಭ್ಯರ್ಥಿಗಳು



ಉಳ್ಳಾಲ ವಲಯ: ಉಳ್ಳಾಲ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಟೆಕಾರು ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಸಿಪಿಐ(ಎಂ)ನ ಅಭ್ಯರ್ಥಿ ಶ್ರೀಮತಿ ಪದ್ಮಾವತಿ ಎಸ್. ಶೆಟ್ಟಿಯವರು ತಮ್ಮ ಸಮೀಪದ ಪ್ರತಿಸ್ಪರ್ಧಿಯನ್ನು ಅತ್ಯಧಿಕ ಮತಗಳ ಅಂತರದಿಂದ ಸೋಲಿಸಿ ಆರಿಸಿ ಬಂದಿದ್ದಾರೆ.

ಪೆರ್ಮನ್ನೂರು ತಾಲೂಕು ಪಂಚಾಯತ್



ಕ್ಷೇತ್ರದಿಂದ ಸಿಪಿಐ(ಎಂ)ನ ಅಭ್ಯರ್ಥಿ ಶ್ರೀಮತಿ ಮೀನಾಕ್ಷಿ ಹಾಗೂ ಪಾವೂರು ಕ್ಷೇತ್ರದಿಂದ ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಶ್ರೀಮತಿ ಜೆಸಿಂತ ಕ್ವೀನ್ ಡಿ. ಸೋಜ ಜಯಗಳಿಸಿದ್ದಾರೆ.

ಬಾಗೇಪಲ್ಲಿ: ಬಾಗೇಪಲ್ಲಿಯ ಗೂಳೂರು ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಸಿ.ಡಿ. ಗಂಗಳಪ್ಪ ಅವರು ತಮ್ಮ ಸಮೀಪ ಪ್ರತಿಸ್ಪರ್ಧಿ ಜನತಾದಳ ಅಭ್ಯರ್ಥಿಯನ್ನು 600 ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ಇವರು ಒಟ್ಟು 7774 ಮತಗಳನ್ನು ಪಡೆದಿದ್ದಾರೆ. ಜನತಾದಳದ ಅಭ್ಯರ್ಥಿ 7120 ಮತಗಳನ್ನು ಪಡೆದಿದ್ದಾರೆ.



ಮಸರಕಲ್: ದೇವದುರ್ಗ ತಾಲೂಕ್ ಮಸರಕಲ್ ತಾಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸಿಪಿಐ(ಎಂ)ನ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ದೇವದುರ್ಗ ತಾಲೂಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ರಾಮಪ್ಪ ಬಸವಲಿಂಗಪ್ಪ ಆಯ್ಕೆಯಾಗಿದ್ದಾರೆ.

6794 ಮತದಾರರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಚಲಾಯಿಸಲ್ಪಟ್ಟ ಮತಗಳು 3379 ಅದರಲ್ಲಿ ಕಾಂ. ರಾಮಪ್ಪನವರು 991 ಮತಗಳನ್ನು ಪಡೆದು ಬಿಜೆಪಿ [illegible] ಗಿಂತ 357 ಮತಗಳ [illegible] ಗಳಿಸಿದ್ದಾರೆ.

> ವಿಧಾನಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾದ ಕಾಂ.ಜೆ.ವಿ.ಶ್ರೀರಾಮರೆಡ್ಡಿ ಯವರು ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಮಾಡಿದ ಭಾಷಣದ ಕೆಲವು ಆಯ್ದ ಅಂಶಗಳು.

ಕನಿಷ್ಠ ಜವಾಬ್ದಾರಿಯನ್ನೂ ತೋರದ ರಾಜ್ಯ ಬಜೆಟ್

ಕಾಂ. ಜೆ.ವಿ. ಶ್ರೀರಾಮರೆಡ್ಡಿ

ಮಾನ್ಯ ಹಣಕಾಸಿನ ಸಚಿವರು ಮೊದಲನೆಯ ಆಯವ್ಯಯವನ್ನು ಮಂಡಿಸಿದ್ದಾರೆ. ಬಜೆಟನ್ನು ಮಂಡಿಸುವಾಗ ಎರಡನೇ ಪ್ಯಾರದಲ್ಲಿ" ಇಂತಹ ಅಭೂತಪೂರ್ವ ಅವಕಾಶ, ಕನ್ನಡ ನಾಡಿನ ಜನ ಹಿಂದಿನ ಕಾಂಗ್ರೆಸ್ ಸರ್ಕಾರವನ್ನು ಬದಲಿಸಿ ನಾವು ಸರ್ಕಾರ ರಚಿಸಲು ಮಾಡಿದ ಆಶೀರ್ವಾದದ ಫಲ" ಎಂದು ಪ್ರಾರಂಭವಾಡಿದ್ದಾರೆ. ಎಲ್ಲರಿಗೆ ಕಾಂಗ್ರೆಸ್ಸಿನ ಆಡಳಿತದ ಬಗ್ಗೆ ಬೇಸರ ಬಂದು ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಅವರು ಐದು ವರ್ಷಗಳ ಕಾಲ ಅಧಿಕಾರ ನಡೆಸಲಿ. ಅದಕ್ಕೆ ನನ್ನ ಭಿನ್ನಾಭಿಪ್ರಾಯ ಇಲ್ಲ, ಈಗ ರಾಜಕೀಯದ ಅಧಿಕಾರದ ಹಸ್ತಾಂತರ ಆಗಿದೆ ಎನ್ನತಕ್ಕಂಥದ್ದು ವಾಸ್ತವಿಕ. ಈ ಹಿನ್ನೆಲೆಯಲ್ಲಿ ಅವರು ಬಹುಶಃ ಹೆಚ್ಚಿನ ಜವಾಬ್ದಾರಿಯಿಂದ ಬಡ್ಜೆಟ್ ಮಂಡಿಸುತ್ತಾರೆ ಎಂದು ನಾನು ನಿರೀಕ್ಷಿಸಿದ್ದೆ. ಅದಕ್ಕಿಂತ ಹೆಚ್ಚಿನ ನಿರೀಕ್ಷೆಯನ್ನು ಈ ಸರ್ಕಾರದಿಂದ ಮಾಡತಕ್ಕದ್ದು ಬಹುಶಃ ಅವಶ್ಯಕತೆ ಇಲ್ಲ, ಏತಕ್ಕೆಂದರೆ ಹಿಂದಿನ ಸರ್ಕಾರಕ್ಕೆ ಹಾಗೂ ಈಗ ಅಧಿಕಾರಕ್ಕೆ ಬಂದಿರತಕ್ಕ ಸರ್ಕಾರಕ್ಕೆ ಮೂಲಭೂತವಾಗಿ ಧೋರಣೆಗಳಲ್ಲಿ ಭಿನ್ನಾಭಿಪ್ರಾಯ ಇಲ್ಲ.......

.......ಆದರೂ ಕೂಡ ಈ ಸರ್ಕಾರಕ್ಕೆ ಒಂದು ಕನಿಷ್ಠವಾದ ಜವಾಬ್ದಾರಿ ಇದೆ. ಈ ಆಯವ್ಯಯವನ್ನು ಮಂಡಿಸುವಾಗ, ಬಜೆಟ್‌ನಲ್ಲಿ ಅವರಲ್ಲಿ ಇರತಕ್ಕಂಥ ಕಲ್ಪನೆಯಲ್ಲಿ ಇರತಕ್ಕಂತ ದೋಷವನ್ನು ಎತ್ತಿ ತೋರುತ್ತಿದೆ. ಆಯವ್ಯಯವನ್ನು ಮಂಡಿಸುವಾಗ ಒಂದು ಲೆಕ್ಕಾಚಾರ, ಆದಾಯ ಎಷ್ಟು, ಖರ್ಚು, ಎಷ್ಟು ಎಂದು ಹೇಳತಕ್ಕಂತ ಮಟ್ಟಿಗೆ ಮಾತ್ರ ಇದ್ದರೆ ಅದು ಯಾವುದೇ ಒಂದು ರಾಜ್ಯದ ಬೆಳವಣಿಗೆಗೆ ಆರೋಗ್ಯಕರವಾದುದು ಅಲ್ಲವೆಂದು ನನ್ನ ಅಭಿಪ್ರಾಯ. ನನ್ನ ಪ್ರಕಾರ ಆಯವ್ಯಯ ಎಂದರೆ ಒಂದು ರಾಜ್ಯದ ಬೆಳವಣಿಗೆಗೆ ಭೌತಿಕ ಮತ್ತು ಬೌದ್ಧಿಕ ಬದ್ಧತೆ ಇರಬೇಕು. ಭೌತಿಕ ಬೆಳವಣಿಗೆಗೆ ಮತ್ತು ಬೌದ್ಧಿಕ ಬೆಳವಣಿಗೆಗೆ ಸರ್ಕಾರ ಎರಡಕ್ಕೂ ಕೂಡಾ ಬದ್ಧವಾಗಿರಬೇಕು. ಆದರೆ ಈ ಬಜೆಟ್ನಲ್ಲಿ ಇವೆರಡಕ್ಕೂ ಅವಕಾಶವಿಲ್ಲ, ಈ ಬಜೆಟ್‌ನಲ್ಲಿ ಅವರು ನಮ್ಮ ರಾಜ್ಯದಲ್ಲಿ ಶೇಕಡಾ 40 ರಷ್ಟು ಜನ ಬಡತನದ ರೇಖೆಗಿಂತ ಕೆಳಮಟ್ಟದಲ್ಲಿ ಜೀವನ ನಡೆಸುತ್ತಿದ್ದಾರೆ ಎಂದು ಸೂಚಿಸಿದ್ದಾರೆ. ಅಂದರೆ ಎಷ್ಟು ಭೌತಿಕ ದಾರಿದ್ರ್ಯ ಇದೆ ಎಂಬುದನ್ನು ಅದು ನಮಗೆ ತೋರಿಸುತ್ತದೆ. ಒಂದು ಕಡೆ ಭೌತಿಕ ದಾರಿದ್ರ್ಯ ಇನ್ನೊಂದು ಕಡೆ ಬೌದ್ಧಿಕ ದಾರಿದ್ರ್ಯ ಇವೆರಡೂ ದಾರಿದ್ರ್ಯಗಳು ನಮ್ಮ ರಾಜ್ಯವನ್ನು ಕಾಡುತ್ತಿರತಕ್ಕ ಸಮಸ್ಯೆಗಳು. ಇವೆರಡನ್ನೂ ನಿರ್ಮೂಲನ ಮಾಡುವುದಕ್ಕೆ ಯಾವುದೇ ಸರ್ಕಾರ ಬಜೆಟ್ ಮಂಡನೆ ಮಾಡಿದಾಗಲೂ ಕೂಡ ಇದರ ಬಗ್ಗೆ ಒಂದು ಚಿಂತನೆ, ಯೋಚನೆ ಮತ್ತು ಗುರಿ ಇರಬೇಕಾಗುತ್ತದೆ. ಆ ಗುರಿಯನ್ನು ಕನಿಷ್ಠ ತಿಳಿಸತಕ್ಕಂಥ ಪ್ರಯತ್ನ ಕೂಡಾ ಈ ಬಜೆಟ್‌ನಲ್ಲಿ ಇಲ್ಲ. ಭೌತಿಕ ದಾರಿದ್ರ್ಯವನ್ನು ನಿವಾರಣೆ ಮಾಡಲಿಕ್ಕೆ ತೋರಿಸಿರತಕ್ಕಂತ ಯಾವುದೇ ಅಂಶಗಳು ಈ ಬಜೆಟ್ ನಲ್ಲಿ ಇರತಕ್ಕಂಥ ಯಾವುದೇ ಅಂಶಗಳು ಕೂಡಾ ಖಂಡಿತಾ ಪರಿಹಾರವಲ್ಲ, ನೀವೇ ಹೇಳಿರುವಂಥ ಪ್ರಕಾರ ಗ್ರಾಮೀಣ ಪ್ರದೇಶಗಳಿಗೆ 70 ಪರ್ಸೆಂಟ್ ಕೊಟ್ಟಿದ್ದೀರಿ, ಪಟ್ಟಣಗಳಿಗೆ 30 ಪರ್ಸೆಂಟ್ ಕೊಟ್ಟಿದ್ದೀರಿ. ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ನಾವು ಹೆಚ್ಚು ಗಮನವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಒಂದು ರಾಜ್ಯ ಅಭಿವೃದ್ಧಿ ಆಗಬೇಕಾದರೆ ಬೆಳವಣಿಗೆ ಆಗಬೇಕು ಎಂದರೆ ಅದರಲ್ಲಿ ಮುಖ್ಯವಾದ ಅಂಶಗಳು ಇರಬೇಕು. ಒಂದು ಕೃಷಿ ರಂಗ, ಇನ್ನೊಂದು ಕೈಗಾರಿಕಾ ರಂಗ. ಈ ಎರಡೂ ಕೂಡಾ ಸಂಪೂರ್ಣವಾಗಿ ಬೆಳವಣಿಗೆ ಆಗದೇ ಹೋದರೆ ಯಾವುದೇ ರಾಜ್ಯವನ್ನು ಭೌತಿಕ ದಾರಿದ್ರ್ಯವನ್ನು ಸಂಪೂರ್ಣ ನಿವಾರಣೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದರೂ ಕೂಡಾ ಕನಿಷ್ಠ ಪಕ್ಷ ಕಡಿಮೆ ಮಾಡಲಿಕ್ಕೂ ಸಾಧ್ಯತೆ ಇಲ್ಲ, ಈಗ ಇದರ ಜತೆಗೆ 244.85 ಕೋಟಿ ತೆರಿಗೆಯನ್ನು ಹಾಕಿದ್ದಾರೆ. ಈ ತೆರಿಗೆ ಹಾಕುವ ವಿಚಾರದಲ್ಲಿ ಒಂದು ಕನಿಷ್ಠವಾದಂಥ ಮೂಲಭೂತ ಧೋರಣೆ ಇರಬೇಕು. ತೆರಿಗೆಯನ್ನು ಯಾವ ಮೂಲಭೂತ ಆಧಾರದ ಮೇಲೆ ಹಾಕಬೇಕು ಎನ್ನತಕ್ಕ ವಿಚಾರದಲ್ಲಿ ಮೂಲಭೂತ ಧೋರಣೆ ಇರಬೇಕು. ಒಂದು London School of Economicsನ ಸರ್ವೆ Necessity of taxation system in the world should be based on production(ತೆರಿಗೆ ವ್ಯವಸ್ಥೆ ಉತ್ಪಾದನೆಯನ್ನು ಆಧರಿಸಬೇಕು) ಎಂದಿದೆ. ಯಾವುದೇ ರಾಜ್ಯ ಸರ್ಕಾರ ತೆರಿಗೆಯನ್ನು ಹಾಕಬೇಕಾದರೆ ಮೂಲಭೂತವಾಗಿ ರಾಜ್ಯದಲ್ಲಿ ಎಷ್ಟು ಉತ್ಪಾದನೆಯಾಗುತ್ತಿದೆ ಎಂಬುದನ್ನು ನೋಡಬೇಕು....

> "ಆಯವ್ಯಯ ಎಂದರೆ ಒಂದು ರಾಜ್ಯದ ಬೆಳವಣಿಗೆಗೆ ಭೌತಿಕ ಮತ್ತು ಬೌದ್ಧಿಕ ಬದ್ಧತೆ ಇರಬೇಕು. ಭೌತಿಕ ಬೆಳವಣಿಗೆಗೆ ಮತ್ತು ಬೌದ್ಧಿಕ ಬೆಳವಣಿಗೆಗೆ ಸರ್ಕಾರ ಎರಡಕ್ಕೂ ಕೂಡಾ ಬದ್ಧವಾಗಿರಬೇಕು. ಆದರೆ ಈ ಬಜೆಟ್ನಲ್ಲಿ ಇವೆರಡ್ಡಕ್ಕೂ ಅವಕಾಶವಿಲ್ಲ."

ವಿಚಿತ್ರ ತರ್ಕ

ನಾವು ಮಧ್ಯಮ ವರ್ಗದವರ ಜೇಬಿಗೆ ಕೈ ಹಾಕಿದ್ದೇವೆ ಬಡವರ ಜೈಬಿಗೆ ಕೈ ಹಾಕಿಲ್ಲ ಎನ್ನತಕ್ಕಂಥದ್ದು ಒಂದು ತರ್ಕವಾದರೆ, ಇನ್ನೊಂದು 'ಶ್ರೀಮಂತರಿಗೆ ನಾವು ಹೊರೆ ಹಾಕುತ್ತಿದ್ದೇವೆ ಬಡವರಿಗೆ ಹಾಕುತ್ತಿಲ್ಲ' ಎನ್ನತಕ್ಕಂಥದ್ದು. ಇದೊಂದು ವಿಚಿತ್ರ ತರ್ಕ.

ಯಾವುದೇ ಸರ್ಕಾರ ಯಾವುದೇ ರಾಜ್ಯ ತೆರಿಗೆಯನ್ನು ಹಾಕಿದರೆ ಅದಕ್ಕೆ ಕೊನೆಯದಾಗಿ ಬಲಿಯೆಂದರೆ ಜನಸಾಮಾನ್ಯರೇ. ಹೋಟೆಲ್ ಮಾಲೀಕರಿಗೆ ತೆರಿಗೆಯನ್ನು ಹಾಕುತ್ತೇವೆ ಅಂತ ಹೇಳಿದರೆ ಅವನು ಇಡ್ಲಿ ಬೆಲೆ ಜಾಸ್ತಿ ಮಾಡುತ್ತಾನೆ. ಡೀಸೆಲ್ ರೇಟ್ ಜಾಸ್ತಿ ಮಾಡಿದರೆ ಬಸ್ ಚಾರ್ಜ್ ಜಾಸ್ತಿ ಆಗುತ್ತದೆ. ಅದನ್ನು ನಾವು ಆಲೋಚನೆ ಮಾಡದೆ ತೆರಿಗೆಯನ್ನು ಹಾಕತಕ್ಕಂಥದ್ದು ಮಧ್ಯಮ ವರ್ಗದವರಿಗೆ ಹೊರೆ ಅನ್ನತಕ್ಕಂಥದೆಂದು ನನ್ನ ಅನಿಸಿಕೆ. ಇವೊತ್ತು ಶ್ರೀಮಂತರ ಮೇಲೆ ಟ್ಯಾಕ್ಸು ಹಾಕಿದರೆ ಅವನೇನು ತನ್ನ ಜೇಬಿನಿಂದ ಕೊಡುವುದಿಲ್ಲ, ಆತ ತನ್ನ ವಸ್ತುಗಳ ಮೇಲಿನ ಬೆಲೆಯನ್ನು ಏರಿಸಿ ಸಾಮಾನ್ಯ ಮನುಷ್ಯನಿಂದ ಮನುಷ್ಯನ ಮೇಲೆ ಹಾಕಿ ಕಡೆಯದಾಗಿ ಇದೊಂದು ಸರಳ ತರ್ಕ.

ಯಾವುದೇಒಂದು ಟ್ಯಾಕ್ಸ್ ಹಾಕಿದಾಗಲೂ ಕೂಡಾ ಇದೇ ರೀತಿ ಇರುತ್ತದೆ. ಆದ್ದರಿಂದ ತೆರಿಗೆಯನ್ನು ವಿಧಿಸಬೇಕಾದಾಗ ಯಾ ವುದೇ ರಾಜ್ಯವು ತನ್ನ ರಾಜ್ಯದಲ್ಲಿ ಆಗತಕ್ಕಂತ ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದೇ ಆಧಾರವಾಗಿರಬೇಕು. ನೀವು ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಯಾವ ಕ್ರಮವನ್ನು ಈ ಬಜೆಟ್ಟಿನಲ್ಲಿ ತೆಗೆದುಕೊಂಡಿದ್ದೀರಿ ಎಂದರೆ ಈ ಬಜೆಟ್ಟಿನಲ್ಲಿ ಆ ವಿಷಯವಾಗಿ ಒಂದೇ ಒಂದು ಅಕ್ಷರವೂ ಇಲ್ಲ.

> "ಕೃಷಿ ರಂಗದಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕೆನ್ನುವ ಕಳಕಳಿ ಇದ್ದರೆ, ಉಳುವವನಿಗೆ ಭೂಮಿ ಕೊಡಿ. ರೈತ ಬೆಳೆಯತಕ್ಕಂತಹ ಬೆಳೆಗೆ ಲಾಭದಾಯಕ ಬೆಲೆ ಕೊಡಿ. ಕೃಷಿ ಕಾರ್ಮಿಕನಿಗೆ ಜೀವನಾವಶ್ಯಕವಾಗಿ ಬೇಕಾಗಿರತಕ್ಕಂತಹ ಕನಿಷ್ಠ ವೇತನವನ್ನು ನಿಗದಿ ಮಾಡಿ."

ಅದು ಕೈಗಾರಿಕಾ ಕ್ಷೇತ್ರ ಆಗಿರಬಹುದು ಅಥವಾ ಕೃಷಿ ಕ್ಷೇತ್ರ ಇರಬಹುದು. ಏಕೆಂದರೆ ಉತ್ಪಾದನೆ ಇವೆರಡೇ ಕ್ಷೇತ್ರದಿಂದ ಬರುವುದು. ನಾನು ಮೊದಲಿಗೆ ಕೃಷಿರಂಗವನ್ನೇ ತೆಗೆದುಕೊಂಡು ಉದಾಹರಣೆ ಕೊಡುತ್ತೇನೆ.

ಕೃಷಿ ಉತ್ಪಾದನೆ ಹೆಚ್ಚಳ ಹೇಗೆ?

ಇವರು ಕೃಷಿ ರಂಗದಲ್ಲಿ ಏನು ಹೇಳುತ್ತಾರೆ ಎಂದರೆ ಕಳೆದ ಒಂದು ದಶಕದಿಂದ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಇಳುವರಿ ಸ್ಥಗಿತವಾಗಿರುವುದು ಕಳವಳಕಾರಿಯಾದ ವಿಷಯವಾಗಿದೆ. ಆಹಾರ ಧಾನ್ಯಗಳ ಉತ್ಪಾದನೆ ಸ್ಥಗಿತಗೊಂಡಿದ್ದರೂ ಸಹಿತ ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ಹೊಗೆಸೊಪ್ಪು, ಎಣ್ಣೆ ಬೀಜ ಮುಂತಾದವುಗಳ ಗಣನೀಯ ಪ್ರಮಾಣದಲ್ಲಿ ಏರಿದೆ. ಇದನ್ನು ನೋಡಿದರೆ ಇದು ಏನು ತೋರಿಸುತ್ತದೆ ಎಂದರೆ ಉತ್ಪಾದನೆ ಸ್ಥಗಿತವಾಗಿರುವುದು ಕೃಷಿ ರಂಗದಲ್ಲಿ ಎಂದು ಒಪ್ಪಿಕೊಳ್ಳುವಂತಹದು. ಈ ಕೃಷಿ ರಂಗದಲ್ಲಿ ಉತ್ಪಾದನೆ ಹೆಚ್ಚು ಮಾಡಲು ಏನು ಮಾಡಬೇಕು? ನೀವು ಬರೀ ರಸಗೊಬ್ಬರಗಳ ಮೇಲೆ ಸಬ್ಸಿಡಿ ಕೊಟ್ಟು ಬಿಟ್ಟು ಕೃಷಿ ರಂಗದ ಉತ್ಪಾದನೆಯನ್ನು ಹೆಚ್ಚು ಮಾಡುತ್ತೇವೆ ಎಂದು ಹೇಳುವುದು ಅವಾಸ್ತವಿಕವಾದ ಸಂಗತಿ ಎಂದರೆ ಅದು ತಪ್ಪಾಗುವುದಿಲ್ಲ, ಕೃಷಿ ರಂಗದಲ್ಲಿ ಉತ್ಪಾದನೆಯನ್ನು ಮಾಡಲಿಕ್ಕೆ ಇರತಕ್ಕ ಮೂಲಭೂತವಾದ ಪ್ರಶ್ನೆ ಭೂಮಿಯ ಪ್ರಶ್ನೆ. ಉಳುವವನಿಗೆ ಭೂಮಿ ಎಲ್ಲಿಯವರೆಗೂ ಕೊಡುವುದಿಲ್ಲವೋ, ಎಲ್ಲಿಯವರೆವಿಗೂ ಕೂಡಾ ಈ ಕೃಷಿ ರಂಗದ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಆ ಭೂಮಿಯನ್ನು ಉತ್ಪಾದನೆ ಮಾಡತಕ್ಕವನಿಗೆ ಕೊಡಲಿಕ್ಕೆ ನಿಮ್ಮ ಬಜೆಟ್ ನಲ್ಲಿ ಯಾವುದಾದರೂ ಕಾರ್ಯಕ್ರಮಗಳು ಇವೆಯೇ? ನಾವು ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಕೃಷಿ ಬೆಳವಣಿಗೆಯ ಕೆಲವು ಅಂಕಿ ಅಂಶಗಳನ್ನು ನೋಡಬಹುದು. ಕರ್ನಾಟಕದಲ್ಲಿ ಕೃಷಿ ಬೆಳವಣಿಗೆಯ ವೇಗ ಕರ್ನಾಟಕದಲ್ಲಿ 2.2.ರಷ್ಟು ಆಹಾರ ಧಾನ್ಯಗಳ ಉತ್ಪಾದನೆ 75 ಲಕ್ಷ ಟನ್‌ಗಳು. ಕೃಷಿ ಯೋಗ್ಯ ಜಮೀನು 102 ಲಕ್ಷ ಹೆಕ್ಟೇರ್‌ಗಳು. ಹಂಚಿತ ಹೆಚ್ಚುವರಿ ಜಮೀನು 1,25,000 ಎಕರೆಗಳು. ಹಂಚಲ್ಪಟ್ಟ ಜನ 25,000 ಕುಟುಂಬಗಳು ಇದನ್ನು ಸ್ಪಷ್ಟವಾಗಿ ಸರ್ಕಾರ ತಿಳಿಯಬೇಕಾಗಿದೆ. ಯಾವುದೇ ಒಂದು ಸರ್ಕಾರ ಕೃಷಿ ರಂಗದಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡಬೇಕು ಎಂಬ ಪ್ರಾಮಾಣಿಕ ಕಳಕಳಿ ಇದ್ದರೆ ಮೊಟ್ಟ ಮೊದಲಿಗೆ ಅವರು ಮಾಡಬೇಕಾಗಿರತಕ್ಕಂಥ ಕೆಲಸ ಈ ಭೂಮಿಯನ್ನು ಹಂಚುವುದು. ಈ ಭೂಮಿಯನ್ನು ಹಂಚತಕ್ಕಂತ ಕೆಲಸ ಕರ್ನಾಟಕದಲ್ಲಿ ಇವೊತ್ತಿನವರೆಗೆ ಆಗಲಿಲ್ಲ, ಇವೊತ್ತು ಕೃಷಿಗೆ ಯೋಗ್ಯವಾಗಿರತಕ್ಕಂಥ ಜಮೀನು ಮೂರುವರೆ ಲಕ್ಷ ಹೆಕ್ಟೇರ್ ಇದೆ. ನೀವು ಹಂಚಿರತಕ್ಕದ್ದು ಕೇವಲ 1,25,000 ಎಕರೆಗಳು. ನೀವು ಈ ಭೂಮಿಯನ್ನು ಹಂಚದೇ ಕೃಷಿ ರಂಗದ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಖಂಡಿತ ಸಾಧ್ಯವಿಲ್ಲ, ಬಹುಶಃ ಈ ವಿಚಾರ ನಿಮಗೆ ಮುಂದಿನ ವರ್ಷ ಬಜೆಟ್ ಮಂಡಿಸುವಾಗ ಗೊತ್ತಾಗುತ್ತದೆ. ಏಕೆ ಇದಕ್ಕೆ ನಿಮ್ಮ ಬಜೆಟ್ ನಲ್ಲಿ ಕಾರ್ಯಕ್ರಮಗಳು ಇಲ್ಲ? ಇದು ಒಂದನೇ ಪ್ರಶ್ನೆ. ಭೂಮಿ ಹಂಚುವುದರಿಂದ ಕೃಷಿ ಉತ್ಪಾದನೆ ಜಾಸ್ತಿಯಾಗಿದೆ ಎಂಬುದನ್ನು ನಾನು ನಮ್ಮ ಪಕ್ಷ ಆಡಳಿತ ನಡೆಸುತ್ತಿರುವ ಪಶ್ಚಿಮ ಬಂಗಾಳದ ಕೆಲವು ಅಂಕಿ ಅಂಶಗಳಿಂದ ಹೇಳುತ್ತೇನೆ. ಅಲ್ಲಿ ಕೃಷಿ ರಂಗದ ಬೆಳವಣಿಗೆ 6.4 ರಷ್ಟು. ಆಹಾರ ಧಾನ್ಯಗಳ ಉತ್ಪಾದನೆ 115.14 ಲಕ್ಷ ಟನ್ ಗಳು ಹಂಚಿರತಕ್ಕಂಥ ಭೂಮಿ 12 ಲಕ್ಷ ಹೆಕ್ಟೇರ್ ಎಕರೆಗಳು. ಇವೊತ್ತು ನಿಮಗೆಲ್ಲಾ ಗೊತ್ತಿದೆ. ಏಕನಾಮಿಕ್ಸ್ ಸರ್ವೆ ಮತ್ತು ಪ್ಲಾನಿಂಗ್ ಕಮಿಷನ್ ನಲ್ಲಿ ಹೇಳಿದ್ದಾರೆ. ಇಡೀ ದೇಶದಲ್ಲೇ ಅತಿ ಹೆಚ್ಚಿ ಕೃಷಿ ಉತ್ಪಾದನೆಯಾಗುತ್ತಿರುವುದು ಪಶ್ಚಿಮ ಬಂಗಾಳದಲ್ಲಿ ಮಾತ್ರ. ಅವರೇನು ಮಂತ್ರ ಮಾಡಲಿಲ್ಲ, ಅವರು ಇಷ್ಟೇ ಮಾಡಿದ್ದು , ಭೂಮಿಯನ್ನು ಹಂಚಿದ್ದಾರೆ. ನೀವು ಭೂಮಿಯನ್ನು ಹಂಚದೇ ಕೃಷಿ ಉತ್ಪಾದನೆ ಜಾಸ್ತಿ ಮಾಡಿತ್ತೀವಿ ಅಂತ ಹೊರಟಿರುವುದು ಸಾಧ್ಯವಿಲ್ಲದ ಕೆಲಸ. ಇದಕ್ಕೆ ಸರಿಯಾದ ಕಾರ್ಯಕ್ರಮಗಳು ನಿಮ್ಮ ಬಜೆಟ್ ನಲ್ಲಿ ಇಲ್ಲ.......

ಕೃಷಿ ಕೂಲಿಯ ಪ್ರಶ್ನೆ

.....ಇನ್ನು ಎರಡನೇ ಪ್ರಶ್ನೆ ಕೃಷಿ ರಂಗಕ್ಕೆ ಸಂಬಂಧಪಟ್ಟಿರುವುದು ಕೂಲಿಯ ಪ್ರಶ್ನೆ. ಇವತ್ತು ಎಲ್ಲಾ ಯೋಜನೆಗಳಿಗೆ ಹಣ ಹಾಕುತ್ತೀರಿ, ಉತ್ಪನ್ನ ಮಾಡುತ್ತೀರಿ, ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಎಲ್ಲಿಂದ ತರುತ್ತೀರಿ? ಕೈಗಾರಿಕೆಗಳಲ್ಲಿ ಆಗತಕ್ಕಂತಹ ಉತ್ಪನ್ನಗಳನ್ನು ಮಾರಾಟ ಮಾಡಬೇಕಾದರೆ ನಿಮಗೆ ಮಾರುಕಟ್ಟೆ ಎಲ್ಲಿ? ನಿಜವಾಗಿರತಕ್ಕಂತಹದು, ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನ ಜನ. ಅವರ ಕೈಯಲ್ಲಿ ಹಣವಿದ್ದರೆ ನೀವು ಕೈಗಾರಿಕಾ ರಂಗದಲ್ಲಿ ಉತ್ಪಾದ... ಸರಕುಗಳಿಗೆ, ಕೃಷಿ ರಂಗ ಉತ್ಪಾದನೆ ಮಾ... ಸರಕುಗಳಿಗೆ ಮಾರುಕಟ್ಟೆ ಸಿಗುತ್ತದೆ. ಎಲ್ಲಿ... ರೆಗೆ, ಕೃಷಿ ರಂಗ ಮತ್ತು ಕೈಗಾರಿಕೋರಂ... ಉತ್ಪಾದನೆ ಆಗತಕ್ಕಂತಹ ಸರಕುಗಳಿಗೆ ಮಾ... ಕಟ್ಟೆ ಇರುವುದಿಲ್ಲವೋ ಅಲ್ಲಿಯವರೆಗೆ ... ಉತ್ಪಾದನೆ ಸಂಪೂರ್ಣವಾಗಿ ಸ್ಥಗಿತವಾಗು... ಕೃಷಿ ಕಾರ್ಮಿಕರ ಪ್ರಶ್ನೆ ಬಂದಾಗ, ಅವರ ... ಪ್ರಶ್ನೆ ಬಂದಾಗ ನೀವು ಇಲ್ಲಿ ಏನೂ ಹೇ... ಹಾಗಾದರೆ, ಉತ್ಪಾದನೆಗಳಿಗೆ ಬೇಕಾಗಿ... ತಹ ಮಾರುಕಟ್ಟೆಯನ್ನು ಎಲ್ಲಿಂದ ತರುತ್ತೀ...

ಮೂರನೆಯದಾದ ಅಂಶ. ಕೃಷಿಗೆ ಸ... ಧಪಟ್ಟ ಹಾಗೆ ರೈತ ಬೆಳೆದ ಬೆಳೆಗಳಿಗೆ ಲಾ... ಯಕವಾದ ಬೆಲೆ ನಿಗದಿ ಮಾಡುವ... ಕಾರ್ಯಕ್ರಮ ಇದರಲ್ಲಿ ಇಲ್ಲ, ಸಬ್ಸಿಡಿ ಕೊ... ತ್ತೇವೆಂದು ಹೇಳುತ್ತೀರಿ ನಾನು ಯಾ... ಸರ್ಕಾರವನ್ನು ಕೇಳುತ್ತೇನೆ -ಈ ಸಬ್ಸಿಡಿ ಕೊ... ವುದರ ಮುಖಾಂತರ ಪರಿಹಾರಗಳನ್ನು ಕೊ... ವುದರ ಮುಖಾಂತರ, ರಿಸರ್ವೇಷನ್ ಮು... ತರ ಎಷ್ಟು ವರ್ಷಗಳ ಕಾಲ ರಾಜ್ಯ... ನಡೆಸುತ್ತೀರಿ? ರೈತ ಇವತ್ತು ಸಂಪೂರ್ಣ... ದಿವಾಳಿಯಾಗುತ್ತಿದ್ದಾನೆ. ಆದುದರಿಂದ ... ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ರೈತ ... ಬಹಳ ಬೆಳೆದರು ಕೂಡಾ ಲಾಭವಿಲ್ಲ... ಅನುಭವಿಸುತ್ತಿದ್ದಾನೆ. ಪಾಪರ್ ಆಗುತ್ತಿ... ಅವನು ಬೆಳೆದಂತ ಬೆಳೆಗೆ ಬೆಲೆ ನಿಗದಿ... ತಕ್ಕಂತಹ ಹಕ್ಕು ಈ ದೇಶದಲ್ಲಿ ರೈತ... ಒಂದು ಸಣ್ಣ ಬೆಂಕಿಪೊಟ್ಟಣ ತಯಾರು ಮಾ... ಮಾಲೀಕ ತನ್ನ ಬೆಂಕಿ ಪೊಟ್ಟಣಕ್ಕೆ ನಲ್ವತ್ತು... ಎಂದು ಬೆಲೆ ನಿಗದಿ ಮಾಡುತ್ತಾನೆ. ಅ... ಹಕ್ಕು ಕೊಟ್ಟಂತಹವರು ಯಾರು? ರೈತ... ದಂತ ಬೆಳೆಗೆ ಲಾಭದಾಯಕವಾದ ಬೆಲೆ ... ಮಾಡುವಂತಹ ಹಕ್ಕನ್ನು ಆತನಿಂದ ಕಿತ್ತು... ಡವರು ಯಾರು? ಇದು ಮೂಲಭೂತ... ಪ್ರಶ್ನೆ, ರೈತ ಪಾಪರಾದರೆ, ನಿಮ್ಮ ಕೈಗಾರಿಕಾ... ಎಲ್ಲಿ ಬೆಳೆಯುತ್ತದೆ. ಇದು ಸಾಮಾನ್ಯ ... ಜ್ಞಾನ ಇರತಕ್ಕಂತವಹವರಿಗೆ ಅರ್ಥವಾಗ...


> **ನಿರುದ್ಯೋಗ ಸಮಸ್ಯೆ ನಿವಾರಣ... ಯಾವುದೇ ಕಾರ್ಯಕ್ರಮವನ್ನೂ ಹಾ... ಕೊಳ್ಳದೇ ಇರತಕ್ಕ ಸರ್ಕಾರ ಶೇ. ... ರಷ್ಟು ಬಡತನ ರೇಖೆಯಿಂದ ಕೆಳಗೆ ... ವಂಥ ಜನರಿಗೆ ಈ ರಾಜ್ಯದಲ್ಲಿ ನಾ... ಬಡತನ ನಿವಾರಣೆ ಮಾಡುತ್ತೇವೆಂದು ಒ... ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಸ... ಕಾರ್ಯಕ್ರಮ ಏನು ಸ್ವಾಮಿ?, ನೀವು ಹಾ... ಬಡತನವನ್ನು ನಿವಾರಣೆ ಮಾಡುತ್ತೀರಿ...**

ಲ್ಲವೇ?.....

ನೀರಾವರಿ: ಸಮಗ್ರ ದೃಷ್ಟಿ ಬೇಕು

......ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳ... ದರೆ ನೀರಾವರಿ ಸೌಲಭ್ಯದಿಂದ ವಂಚಿತ... ತಕ್ಕಂತ ಜಿಲ್ಲೆಗಳ ಪ್ರಶ್ನೆ ಇದೆ. ಅಲ್ಲಿ ನದಿ... ಡ್ಯಾಂಗಳಿಲ್ಲ, ಅಣೆಕಟ್ಟುಗಳಿಲ್ಲ, ಅಂತಹ... ಗಳು ನಮ್ಮ ರಾಜ್ಯದಲ್ಲಿ ಎಷ್ಟಿವೆ? ... ಪರಿಸ್ಥಿತಿ ಏನು? ನಿಮ್ಮ ದೃಷ್ಟಿಯಲ್ಲಿ ... ನೀರಾವರಿ ಯೋಜನೆ ಎಂದರೆ ಕೃಷ್ಣಾ ಮೇ... ಯೋಜನೆಯನ್ನು ಪೂರ್ತಿ ಮಾಡತಕ್ಕ... ಅಪ್ಪರ್ ಭದ್ರಾ ಪ್ರಾಜೆಕ್ಟ್ ಯೋಜನ... ಪೂರ್ತಿ ಮಾಡತಕ್ಕಂತಹದ್ದು, ಕಾವೇರಿ... ಯನ ಪ್ರದೇಶ ಅಭಿವೃದ್ಧಿ ಮಾಡತಕ್ಕ... ಅದು ಮಾಡಬಾರದೆಂದು ನಾವು ಹೇ... ಅದನ್ನು ಮಾಡಲೇಬೇಕು. ಅದು ಕ... ರಾಜ್ಯದ ಆಸ್ತಿ. ಅದರ ಬಗ್ಗೆ ನಮಗೆ ಭಿನ್ನ... ಯವಿಲ್ಲ, ಆದರೆ ಒಟ್ಟು ಸಮಗ್ರ ನೀ... ಯಜನೆ ಬಗ್ಗೆ ಏನಿದೆ? ನಮ್ಮ ಕೃಷಿ ... ಆಧರಿಸಿರತಕ್ಕಂತಹದ್ದು ಮಳೆಯ ಮೇಲೆ. ಕ... ರಾಜ್ಯದಲ್ಲಿ ಪೂರ್ತಿ ವರ್ಷ ಸರಾಸರಿ ... ಬೀಳತಕ್ಕಂತ ಪ್ರಮಾಣ ಕಡಿಮೆಯ... ಇದೆ.......

........ಆದುದರಿಂದ ಕೃಷಿ ರಂಗದಲ್ಲಿ ... ಉತ್ಪಾದನೆ ಮಾಡಬೇಕೆನ್ನುವ ಕಳಕಳಿ...



ವವನಿಗೆ ಭೂಮಿ
. ರೈತ ಬೆಳೆಯತಕ್ಕಂ
ಬೆಳೆಗೆ ಲಾಭದಾಯಕ
ಕೊಡಿ. ಕೃಷಿ ಕಾರ್ಮಿ
ಜೀವನಾವಶ್ಯಕವಾಗಿ
ಗಿರತಕ್ಕಂತಹ ಕನಿಷ್ಠ ವೇತ
ನ ನಿಗದಿ ಮಾಡಿ. ಕನಿಷ್ಠ
ನವೆಂದರೆ 16, 15, 12
 ನಿಗದಿ ಮಾಡದೆ,
ವಶ್ಯಕತೆಗೆ ಅನುಕೂಲ
ತಕ್ಕಂತಹ ವೇತನ ನಿಗದಿ
ಬೇಕಾಗಿದೆ.

> "ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಯ ಮೂಲ ಪಾಠವೇ ಎಲ್ಲವನ್ನೂ ಖಾಸಗೀಕರಣ ಮಾಡತಕ್ಕದ್ದು. ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಯನ್ನು ವಿರೋಧ ಮಾಡುತ್ತೇವೆಂದು ಹೇಳುವ ನೀವು ಇನ್ನೊಂದು ಕಡೆ ನೀವು ನಿಮಗೆ ರಾಜ್ಯದಲ್ಲಿ ಖಾಸಗೀಕರಣವನ್ನು ಪ್ರೋತ್ಸಾಹಿಸಲು ಬೇಕಾಗಿರತಕ್ಕ ಎಲ್ಲ ಪ್ರಯತ್ನವನ್ನೂ ನಾವು ಮಾಡುತ್ತೇವೆಂದು ಹೇಳಿದ್ದೀರಿ."

.1983ರಿಂದ 89ರವರೆಗೆ ನಿಮ್ಮ ಪಕ್ಷ
ತವಿತ್ತು. ಕರ್ನಾಟಕ ರಾಜ್ಯದಲ್ಲಿ ಆಗಲೇ
ಉತ್ಪಾದನೆ ಕಡಿಮೆಯಾಗುತ್ತಾ ಬಂದಿತ್ತು.
ಉತ್ಪಾದನೆಯಲ್ಲಿ ರಾಜ್ಯದ ಆದಾಯ
ರಿಂದ 64ರವರೆಗೆ ಶೇ 4.3 ಇತ್ತು 64
70ರವರೆಗೆ 4 ಇತ್ತು. 74 ನಂತರ ಶೇಕಡ
ಇಳಿಯಿತು. 84-85ರಲ್ಲಿ ನೀವು ಗುರಿ
ಕೊಂಡದ್ದು 100 ಲಕ್ಷ ಟನ್, ಆದರೆ
ದ್ದು 85 ಲಕ್ಷ ಟನ್. 8ನೇ ಪಂಚವಾರ್ಷಿಕ
ಜನೆ ಪ್ರಾರಂಭದಲ್ಲಿ 85ಲಕ್ಷಟನ್ ಮಾಡಿ
93-94ರ ಗುರಿ 85 ಲಕ್ಷ ಟನ್ ಗೆ
ದಾಯಿತು. ಎರಡು ಸಾವಿರ ಇಸವಿಯ
ಗೆ ನಮ್ಮ ಕರ್ನಾಟಕ ರಾಜ್ಯದ ಒಟ್ಟು
ರದ ಅವಶ್ಯಕತೆ ಎಷ್ಟಿದೆ ಎಂದರೆ 150
ಟನ್ ಗುರಿಯನ್ನು ಸಾಧಿಸಿದರೆ ಮಾತ್ರ
ಟಕ ರಾಜ್ಯದ ಜನತೆಗೆ ಊಟ ಕೊಡುವು
ಧ್ಯವಿದೆ. ಇವತ್ತು ರಾಜ್ಯದಲ್ಲಿ 65 ರಿಂದ
ಷ ಟನ್ ಉತ್ಪಾದನೆ ಮಾತ್ರ ಇದೆ. 2000
ಗೆ ಕೇವಲ ಐದು ವರ್ಷಗಳು ಮಾತ್ರ
ಉಳಿದಿವೆ. ನಾವು 150 ಲಕ್ಷ ಟನ್
ದನೆ ಮಾಡಿದರೆ ಮಾತ್ರ ಆಹಾರ
ದನೆಯಲ್ಲಿ ಸ್ವಾವಲಂಬಿಗಳಾಗು ವುದಕ್ಕೆ
ದೆ. ಇದನ್ನು ಸಾಧಿಸಬೇಕಾದರೆ ಬರೀ
ಬ್ಬರಕ್ಕೆ ಸಬ್ಸಿಡಿ ಕೊಡುವುದರಿಂದ ಸಾಧ್ಯ
ರಸಗೊಬ್ಬರಗಳಿಗೆ ಸಬ್ಸಿಡಿ ಕೊಡಬೇಕು

ನನ್ನ ವಿರೋಧವಿಲ್ಲ. ಈಗಿರತಕ್ಕಂತಹ
ಯಲ್ಲಿ ಕೊಡಬೇಕಾಗುತ್ತದೆ, ಅದೊಂದೇ
ಮಾಡುತ್ತದೆಂದರೆ ಅದು ಖಂಡಿತಾ
ಲ್ಲ. ಅದನ್ನು ಮೂಲಭೂತ ಪ್ರಶ್ನೆಯ
ಗೆದುಕೊಳ್ಳಬೇಡಿ. ಕೆಲವು ಅನಿವಾರ್ಯ
ಗಳಿಂದ ತಾತ್ಕಾಲಿಕ ಪರಿಹಾರ ಅಷ್ಟೆ
ರೆ.

...ಕಾ ರಂಗದ ಸ್ಥಿತಿ
...ಸ್ಥಾನದಿಂದ 9ನೇ ಸ್ಥಾನಕ್ಕೆ

ನ್ನೊಂದು ಬಹಳ ಮುಖ್ಯವಾದ ಬೆಳವ
ಅಂಶವೆಂದರೆ ಕೈಗಾರಿಕಾ ರಂಗ. ಆದರ
ಜೆಟಿನಲ್ಲಿ ಏನು ಹೇಳಿದ್ದಾರೆಂಬುದನ್ನು
ಮನಕ್ಕೆ ತರಬೇಕಾಗುತ್ತದೆ.
ಗಾರಿಕಾ ಮತ್ತು ಸೇವಾ ವಲಯಗಳಲ್ಲಿ ಬಂಡ
ಡಗಿಸುವಂಥ ಹಿತಕರ ವಾತವರಣ ನಿರ್ಮಿಸಲು
ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳ

ದರೆ ಇದರ ಅರ್ಥ ಏನು? ಹಿತಕರ
ರಣ ಎಂದರೆ ಎರಡು ದೃಷ್ಟಿ ಬರುತ್ತದೆ.
ಷ್ಟಿ ಬೇರೆ. ಹಿತಕರ ವಾತಾವರಣ
ಯಾವುದೇ ಒಂದು ಕಾರ್ಖಾನೆಯಲ್ಲಿ
ಮಾಡತಕ್ಕ ಒಬ್ಬ ಕಾರ್ಮಿಕ ತನ್ನ
ನ್ನು ಜಾಸ್ತಿ ಮಾಡುವಂತೆ ಕೇಳಬಾ
ಕರರು ಸಂಬಳ ಡಿ.ಎ. ಮುಂತಾದ್ದನ್ನು

ಜಾಸ್ತಿ ಮಾಡುವಂತೆ ಕೇಳಬಾರದು. ಅದಕ್ಕೋಸ್ಕರ ಅವರು ಹೋರಾಟಕ್ಕೆ ಇಳಿಯಬಾರದು ಇತ್ಯಾದಿ...... ನಿಮ್ಮ ಅರ್ಥ ಏನೆಂದು ಗೊತ್ತಿಲ್ಲ, ಇನ್ನೂ ಮುಂದುವರೆದು ತಾವು ಏನು ಹೇಳುತ್ತಿದಿದ್ದೀರೆಂದರೆ,

"ಕಳೆದ 3 ತಿಂಗಳ ಅವಧಿಯಲ್ಲಿ ಉನ್ನತಾಧಿಕಾರ ಸಮಿತಿಯು 1768.86 ಕೋಟಿ ರೂ. ಪ್ರಾಸ್ತಾವಿಕ ಬಂಡವಾಳ ಹೂಡಿಕೆಯನ್ನುಳ್ಳ ಕೈಗಾರಿಕಾ ಯೋಜನೆಗಳಿಗೆ ಮಂಜೂರಾತಿ ನೀಡಿಕೆ ಸರ್ಕಾರವು ಈ ಪ್ರಾಸ್ತಾವಿಕ ಬಂಡವಾಳ ಹೂಡಿಕೆಗಳು ನನಸಾಗುವಂತೆ ಮಾಡಲು ಪ್ರಯತ್ನಿಸುತ್ತಿದೆ."

ಇದು ಹೇಗೆ?

"ರಾಜ್ಯದಲ್ಲಿ ಬೃಹತ್ ಪ್ರಮಾಣದಲ್ಲಿ ಕಬ್ಬಿಣದ ಅದುರಿನ ನಿಕ್ಷೇಪ ಇದೆ. ಇದು ಉಕ್ಕು ಸ್ಥಾವರಗಳನ್ನು ಸ್ಥಾಪಿಸಲು ಅನೇಕ ಖಾಸಗಿ ಕಂಪನಿಗಳನ್ನು ಆಕರ್ಷಿಸಿದೆ."

ಅಂದರೆ ನೀವು ಖಾಸಗಿ ಕಂಪೆನಿಗಳನ್ನು ಆಕರ್ಷಿಸಿ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ ಎಂಬುದು ಇದರ ಅರ್ಥ. ಆದರೆ ಈ ಬಜೆಟ್ಟಿನಲ್ಲೇ ನರಸಿಂಹರಾವ್ ಸರ್ಕಾರದ ಹೊಸ ಆರ್ಥಕ ಧೋರಣೆಯಿಂದಾಗಿ ಕೈಗಾರಿಕೆ ಹಿಂಜರಿತವಾಗಿದೆ ಎಂದು ಹೇಳಿದ್ದೀರಿ.

ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಯ ಮೂಲ ಪಾಠವೇ ಎಲ್ಲವನ್ನೂ ಖಾಸಗೀಕರಣ ಮಾಡತಕ್ಕದ್ದು. ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಯನ್ನು ವಿರೋಧ ಮಾಡುತ್ತೇವೆಂದು ಹೇಳುವ ನೀವು ಇನ್ನೊಂದು ಕಡೆ ನೀವು ನಿಮಗೆ ರಾಜ್ಯದಲ್ಲಿ ಖಾಸಗೀಕರಣವನ್ನು ಪ್ರೋತ್ಸಾಹಿಸಲು ಬೇಕಾಗಿರತಕ್ಕ ಎಲ್ಲ ಪ್ರಯತ್ನವನ್ನೂ ನಾವು ಮಾಡುತ್ತೇವೆಂದು ಹೇಳಿದ್ದೀರಿ. ಹಾಗಾದರೆ ಇದು ಸವಿವರವಾದ ಭಾಷಣ ಎಂದು ಹೇಳಬೇಕೋ ಅಥವಾ ನರಸಿಂಹರಾಯರ ಸರ್ಕಾರದ ಹೊಸ ಆರ್ಥಿಕ ನೀತಿಗೂ ನಿಮಗೂ ನೇರವಾಗಿ ಸಂಬಂಧ ಇದೆ ಎಂದು ಹೇಳಬೇಕೋ ಎಂಬುದಕ್ಕೆ ನೀವು ಉತ್ತರವನ್ನು ಕೊಡಿ.

ನಮ್ಮ ರಾಜ್ಯದಲ್ಲಿ ಕೈಗಾರಿಕಾ ಪರಿಸ್ಥಿತಿ ಹೇಗಿದೆ? 1991ರಲ್ಲಿ ಖಾಸಗೀ ಕಂಪೆನಿಗಳು ಮುಖ್ಯವಾಗಿ ವಿದೇಶೀ ಬಂಡವಾಳವನ್ನು ಆಕರ್ಷಿಸುವುದಕ್ಕಾಗಿ ಎಲೆಕ್ಟ್ರಾನಿಕ್ಸ್, ಟೆಲಿ ಕಮ್ಯುನಿಕೇಷನ್, ಮಾಹಿತಿ ತಂತ್ರಜ್ಞಾನ, ಕೃಷಿ, ಆಹಾರ ಸಂಸ್ಕರಣ, ಚರ್ಮ, ಕೈಗಾರಿಕೆ, ಸಿದ್ಧವಸ್ತುಗಳು, ಔಷಧಿಗಳು, ರೇಷ್ಮೆ ಮುಂತಾದ ಕೈಗಾರಿಕೆಗಳನ್ನು ಮುಖ್ಯವಾದವೆಂದು ಗುರ್ತಿಸಿದೆ. ಆದರೆ ಇದರ ಬೆಳವಣಿಗೆ ಹೇಗಾಗಿದೆ? ಇದರ ಬೆಳವಣಿಗೆಯ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯು ಇಡೀ ಭಾರತದಲ್ಲಿ 3ನೇ ಸ್ಥಾನದಲ್ಲಿತ್ತು. ಇವತ್ತು ಅದು ಕೈಗಾರಿಕಾ ಬೆಳವಣಿಗೆಯ ಸಾಲಿನಲ್ಲಿ 9ನೇ ಸ್ಥಾನಕ್ಕೆ ಇಳಿದಿದೆ. ಮೊದಲು ನಮ್ಮ ಕರ್ನಾಟಕದಲ್ಲಿ 724 ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳು ಇದ್ದುವು. ಅದರ ಒಟ್ಟು ಬಂಡವಾಳ 6268 ಕೋಟಿ ರೂ. ಇದರಲ್ಲಿ ಒಟ್ಟು 2.77 ಲಕ್ಷ ಸಣ್ಣ ಕೈಗಾರಿಕೆಗಳಿದ್ದು ಅವುಗಳ ಬಂಡವಾಳ 1040 ಕೋಟಿ ರೂ. ಬಂಡವಾಳವಾಗಿತ್ತು. ಅಂದರೆ ದೊಡ್ಡ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು 6368 ಕೋಟಿ ರೂ. ಮತ್ತು ಸಣ್ಣ ಕೈಗಾರಿಕೆಗಳು 1040 ಕೋಟಿ ರೂಗಳ ಬಂಡವಾಳದ ಕೈಗಾರಿಕೆಗಳಲ್ಲಿ 7.8 ಲಕ್ಷ ಕಾರ್ಮಿಕರಿಗೆ ಕೆಲಸ ನೀಡಲಾಗುತ್ತಿತ್ತು. ಆದರೆ ಆ ಪರಿಸ್ಥಿತಿ ಈಗೇನಾಗಿದೆ? 1,37,407 ಕೈಗಾರಿಕೆಗಳ ಒಟ್ಟು ಬಂಡವಾಳ, 1,472.64 ಕೋಟಿ ರೂ. ಆದರೆ ಇವು ಎಷ್ಟು ಜನರಿಗೆ ಕೆಲಸ ಕೊಟ್ಟಿವೆ. ಎಂದರೆ 9.33 ಲಕ್ಷ ಜನರಿಗೆ ಮಾತ್ರ. ಇದರ ಪರಿಣಾಮ ಏನಾಗುತ್ತದೆ? ಕೈಗಾರಿಕಾ ಬೆಳವಣಿಗೆ ಇವತ್ತು ಸಂಪೂರ್ಣವಾಗಿ ಸ್ಥಗಿತವಾಗುತ್ತಿದೆ. ಕೆಳಕ್ಕೆ ಬರುತ್ತಿದೆ. ಮತ್ತೆ 3 ನೇ ಸ್ಥಾನವನ್ನು ನೀವು ಕೈಗಾರಿಕಾ ರಂಗದಲ್ಲಿ ಪಡೆಯುವುದು ಕನಸಿನ ಮಾತು. ಏಕೆಂದರೆ ಇದರ ಬಗ್ಗೆ ನಿಮ್ಮಲ್ಲಿ ಯಾವುದೇ ಕಾರ್ಯಕ್ರಮವೂ ಇಲ್ಲ. ಈಗಿರತಕ್ಕ ಕೈಗಾರಿಕೆಗಳನ್ನಾದರೂ ನೀವು ಕನಿಷ್ಠ ಉಳಿಸಿಕೊಳ್ಳಬಹುದು. ಆ ಕೈಗಾರಿಕೆಗಳಲ್ಲಿ ಉತ್ಪಾದನೆ ಮಾಡುವುದಕ್ಕೆ ನಮ್ಮ ಹತ್ತಿರ ಇರತಕ್ಕ ಒಂದೇ ಒಂದು ಮಂತ್ರ, ಅಥವಾ ಔಷಧಿ ಎಂದರೆ ಅವನ್ನೆಲ್ಲಾ ಖಾಸಗೀಕರಣ ಮಾಡತಕ್ಕದ್ದು ಅಷ್ಟೆ...... ಖಾಸಗೀ ಕಂಪೆನಿಗಳು ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದ ಮಟ್ಟಿಗಾದರೂ ತಾವು ಅಂಕಿ-ಅಂಶಗಳನ್ನು ತೆಗೆದು ನೋಡಬೇಕು.....

> "ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕರ್ನಾಟಕ ರಾಜ್ಯದಲ್ಲಿ 1 ಕೋಟಿ 50 ಲಕ್ಷದವರೆಗೆ ಇದೆ. ಅದಕ್ಕಿಂತ ಹೆಚ್ಚು ಹಳ್ಳಿಗಾಡಿನಲ್ಲಿ ಅವಿದ್ಯಾವಂತರಿದ್ದಾರೆ. ಅವರಿಗೆ ಉದ್ಯೋಗ ಕೊಡಬೇಕೆಂದರೆ ಭೂಮಿ ಹಂಚುವುದು ಬಿಟ್ಟರೆ ಬೇರೆ ಯಾವುದೇ ರೀತಿಯಲ್ಲಿ ಅವರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನೀವು ಭೂಮಿಯನ್ನು ಹಂಚುವ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ"

ನಿರುದ್ಯೋಗ ನಿವಾರಣೆಗೆ ಕಾರ್ಯಕ್ರಮ ಎಲ್ಲಿ?

ಕೈಗಾರಿಕಾ ರಂಗದಲ್ಲಿ ಖಾಸಗೀಕರಣದ ಧೋರಣೆಯನ್ನು ಅನುಸರಿಸಿದ್ದರಿಂದ ನಮ್ಮ ಕರ್ನಾಟಕ ರಾಜ್ಯ ಹಿಂದೆಂದೂ ಕಾಣದಷ್ಟು ನಿರುದ್ಯೋಗ ಸಮಸ್ಯೆಯನ್ನು ಕಾಣಬೇಕಾಗುತ್ತದೆ. ಆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ನಿಮ್ಮಲ್ಲಿ ಯಾವುದೇ ರೀತಿಯ ಕಾರ್ಯಕ್ರಮ ಇಲ್ಲ. ಅಂದರೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಯಾವುದೇ ಕಾರ್ಯಕ್ರಮವನ್ನೂ ಹಾಕಿಕೊಳ್ಳದೇ ಇರತಕ್ಕ ಸರ್ಕಾರ ಶೇ. 48 ರಷ್ಟು ಬಡತನ ರೇಖೆಯಿಂದ ಕೆಳಗೆ ಇರುವಂಥ ಜನರಿಗೆ ಈ ರಾಜ್ಯದಲ್ಲಿ ನಾವು ಬಡತನ ನಿವಾರಣೆ ಮಾಡುತ್ತೇವೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ನಿಮ್ಮ ಕಾರ್ಯಕ್ರಮ ಏನು ಸ್ವಾಮಿ? ನೀವು ಹೇಗೆ ಬಡತನವನ್ನು ನಿವಾರಣೆ ಮಾಡುತ್ತೀರಿ? ನೀವು ಹೇಳುತ್ತಿರುವುದು ಸ್ವಯಂ ಉದ್ಯೋಗ. ಯಾವ ವಿಧವಾದ ಸ್ವಯಂ ಉದ್ಯೋಗವನ್ನು ಮಾಡುತ್ತೀರಿ. ಸ್ವಯಂ ಉದ್ಯೋಗದ ಹೆಸರಿನಲ್ಲಿ ನೀವು ಏನು ಕೊಟ್ಟಿದ್ದೀರಿ, ಹಾಗೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ರೀತಿ ಜಾರಿ ಆಗಿವೆ: ಯಾವ ಸ್ಥಿತಿಗೆ ಹೋಗಿದೆ ಎಂಬುದನ್ನು ತಾವು ನೋಡಬೇಕು. ಸ್ವಯಂ ಉದ್ಯೋಗದ

ಪುಟ 8 ನೋಡಿ

ಮನೆಗೆ ಮಾರಿ ಪರರಿಗುಪಕಾರಿ

ಇದು ಹೊಸ ಆಮದು ರಫ್ತು ನೀತಿಯ ಬಗ್ಗೆ ಧಾರಳವಾಗಿ ಆಡಬಹುದಾದ ಮಾತು. ಉದಾರೀಕರಣ ಬಂದ ದಿನದಿಂದ ಸಾಮ್ರಾಜ್ಯಶಾಹಿ ಹದ್ದುಗಳಿಗೆ ಭಾರತ ದೇಶವನ್ನು ಕುಕ್ಕಿ ತಿನ್ನುವಂತೆ ಅನುಕೂಲ ಮಾಡಿಕೊಡುವ ಆಮದು -ರಫ್ತು ಉದಾರೀಕರಣವನ್ನು ನರಸಿಂಹರಾಯರ ಸರ್ಕಾರ ಮಾಡುತ್ತಾ ಬಂದಿದೆ. ಶೇರು ಹಗರಣಗಳಲ್ಲಿ ನೇರವಾಗಿಯೇ ಪಾಲುದಾರನಾಗಿದ್ದ ಚಿದಂಬರಂ ಎಂಬ ವಾಣಿಜ್ಯ ಇಲಾಖೆಯ ಮಂತ್ರಿ ಶೇರು ಹಗರಣ ತನಿಖೆಯ ಪರಿಣಾಮವಾಗಿ ಮನೆಗೆ ಹೋಗಬೇಕಾಗಿ ಬಂದಿತ್ತು. ಆ ದಿನಗಳಲ್ಲಿ ಈ ಉದಾರೀಕರಣ ಸ್ವಲ್ಪ ಕುಂಠಿತವಾಗಿತ್ತು. ಆದರೆ ಈ ಮಹಾಶಯರು ಮತ್ತೆ ನರಸಿಂಹರಾಯರ ಸರ್ಕಾರ ಸೇರಿ ಅದೇ ಇಲಾಖೆಗೆ ಬಂದು ವಕ್ರಿಸಿದ್ದಾರೆ. ಆದ್ದರಿಂದಲೇ ಈ ಉದಾರೀಕರಣಕ್ಕೆ ಮತ್ತೆ ವೇಗ ಬಂದಿದೆ.

ಮನಮೋಹನ ಸಿಂಗ್‌ರ ಬಜೆಟ್ಟು ಆಮದಿನ ಮೇಲೆ ಇರುವ ಸುಂಕವನ್ನು (ಬಹುತೇಕ ಸರಕುಗಳ ಮೇಲೆ) ಕಡಿಮೆ ಮಾಡಿದೆ. ಈಗ ಚಿದಂಬರಂರ ಉದಾರೀಕರಣ ಕ್ರಮ ಆಮದು ರಫ್ತು ಕೈಗೊಳ್ಳಬೇಕಾದರೆ ಅನುಸರಿಸಬೇಕಾದ ವಿಧಿ ವಿಧಾಗಳನ್ನು ಸರಳಗೊಳಿಸಿದೆ. ಮುಕ್ತ ಜನರಲ್ ಲೈಸೆನ್ಸ್ (ಓಜಿಎಲ್) ವ್ಯಾಪ್ತಿಯಲ್ಲಿನ ವಸ್ತುಗಳ ಸಂಖ್ಯೆ ಈ ವರೆಗಿನ 43ರಿಂದ 75ಕ್ಕೆ ಏರಿದೆ. ಯಂತ್ರೋಪಕರಣಗಳ ಬೆಲೆ (ಸಿ.ಐ.ಎಫ್) ಮೌಲ್ಯದ ಅನ್ವಯರೂ.20ಕೋಟಿ ಮೀರಿದರೆ ಆಮದು ಸುಂಕ ಶೂನ್ಯವಾಗುತ್ತದೆ.

ನಿರ್ಬಂಧಿತ ಆಮದು ವಸ್ತುಗಳ ಪಟ್ಟಿಯನ್ನು ಮರುವಿಮರ್ಶಿಸಿ ಅದಕ್ಕೆ ಕತ್ತರಿ ಹಾಕಲಾಗಿದೆ. ವಿಶೇಷ ಆಮದು ಅನುಮತಿ (ಎಸ್.ಐ.ಎಲ್) ಅನ್ವಯ ಅನೇಕ ಹೆಚ್ಚುವರಿ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಬಳಕೆದಾರರ ವಸ್ತುಗಳ ವ್ಯಾಖ್ಯೆಯನ್ನೇ ಪರಿಷ್ಕರಿಸಲಾಗಿದೆ. ಬಿಡಿಭಾಗಗಳು ಉಪಕರಣಗಳ ಘಟಕಗಳನ್ನು ಕೂಡಾ ಇದರಿಂದ ಆಮದು ಮಾಡಿಕೊಳ್ಳಬಹುದಾಗಿದೆ. ಕಚ್ಚಾ ಹಾಗೂ ಉತ್ಪಾದಿತ ವಸ್ತುಗಳ ವ್ಯಾಪ್ತಿಗೆ ಸುಮಾರು 1100 ವಸ್ತುಗಳನ್ನು ಸೇರಿಸಲಾಗಿದೆ. ಇದರಿಂದ ಇವುಗಳ ಸಂಖ್ಯೆ 4200ಕ್ಕೆ ಏರಿದೆ.

ಹೀಗೆ ಈ ಕ್ರಮಗಳನ್ನು ನಮೂದಿಸುತ್ತ ಹೋದರೆ ದೊಡ್ಡ ಪಟ್ಟಿಯೇ ಆಗುತ್ತದೆ. ಇದೆಲ್ಲವನ್ನು ರಫ್ತು ಹೆಚ್ಚಿಸುವ ಸಲುವಾಗಿಯೇ ಮಾಡುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ನಿಜದಲ್ಲಿ ರಫ್ತು ಅಲ್ಪ ಸ್ವಲ್ಪ ಹೆಚ್ಚಾಗಿದೆ ಹೊರತು ಗಣನೀಯ ಪ್ರಮಾಣದಲ್ಲಿ ಆಗಿಲ್ಲ. ಈ ಸಾರಿಯ ಉದಾರೀಕರಣದಿಂದಲೂ ರಫ್ತು ತೀರ ದೊಡ್ಡ ಪ್ರಮಮಾಣದಲ್ಲಿ ಹೆಚ್ಚಲಾರದು. ಆದರೆ ದೇಶೀ ಉದ್ದಿಮೆಗಳನ್ನು ಅದು ಹಾಳುಗೆಡವುತ್ತದೆ. ಆಮದು ಹೆಚ್ಚಾಗಿ ದೇಶದೊಳಗೆ ಬೆಲೆಗಳು ತೀವ್ರ ಹೆಚ್ಚುತ್ತವೆ. ಅಲ್ಲದೆ ಸಾಮ್ರಾಜ್ಯಶಾಹಿಗಳು ದೇಶವನ್ನೇ ಕೊಳ್ಳೆ ಹೊಡೆದು ಕೊಂಡು ಹೋಗುತ್ತವೆ.

'ಹಿಲೇರಿಯ ಮಹಿಳಾ ಕಾಳಜಿ'

ಜಗತ್ತಿನ ಮಹಿಳೆಯರ ಪೋಲೀಸು ತಾನೆಂಬಂತೆ ಪೋಸು ಕೊಡುತ್ತ ಅಮೇರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ನರ ಹೆಂಡತಿ ಹಿಲೇರಿ ರೊಧಾಮ್ ಕ್ಲಿಂಟನ್ ದೇಶದೇಶಗಳನ್ನು ಸುತ್ತುತ್ತಿದ್ದಾರೆ. ಭಾರತಕ್ಕೂ ಬಂದ ಅವರು ಹೊಸ ಜಗತ್ತಿನಲ್ಲಿ ಮಹಿಳೆಯರಿಗೆ ಹಕ್ಕುಗಳಿರಬೇಕೆಂದಿದ್ದಾರೆ.

ಮಾನವೀಯತೆ ಇರುವ ಯಾರೂ ಮಾತನ್ನು ವಿರೋಧಿಸುವುದಿಲ್ಲ, ಆದರೆ ಈ ಮಾತು ಸಾಮ್ರಾಜ್ಯಶಾಹಿ ದೇಶದ ಅಧ್ಯಕ್ಷರ ಹೆಂಡತಿಯಿಂದ ಬಂದದ್ದು. ಹಾಗೆ ನೋಡಿದರೆ ಅಮೇರಿಕ ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ಅಮೇರಿಕ ಏನು ಮಾಡುತ್ತಿದೆ? ಇಡೀ ಜಗತ್ತನ್ನೇ ಶೋಷಿಸಿ ಹಿಂದುಳಿದ ದೇಶಗಳು ಯಾವಾಗಲೊ ಹಿಂದುಳಿರುವುವಂತೆ ನೋಡಿಕೊಂಡು ಈ ದೇಶದಲ್ಲಿ ಸಾಮಾಜಿಕ ಪ್ರಗತಿಯೇ ಆಗದಂತೆ ನೋಡಿಕೊಂಡದು ಅಮೇರಿಕ.

ಇಂದು ಜಗತ್ತಿನಾದ್ಯಂತ ಹಿಂದುಳಿದ ದೇಶಗಳಲ್ಲೆಲ್ಲ ಮಹಿಳೆಯರ ಪರಿಸ್ಥಿತಿ ಹೀನಾಯವಾಗಿದ್ದರೆ ಅದಕ್ಕೆ ಅಮೇರಿಕ ದೊಡ್ಡ ಕಾರಣ. ಹೀಗಿರುವಾಗ ಭಾರತಕ್ಕೆ ಬಂದು ಇಂತಹ ಮಾತುಗಳನ್ನಾಡಲು ಈ ಮಹಾ ತಾಯಿಗೇನು ಅಧಿಕಾರ? ಅಲ್ಲವೇ?

ಆರೋಗ್ಯ ವಿಮೆ ಖಾಸಗೀಯವರ ಕಾತುರ

ಮೂವತ್ತು ದಶಲಕ್ಷ ಮಧ್ಯಮ ವರ್ಗದ ಜನರಿರುವ ದೇಶದಲ್ಲಿ ಆರೋಗ್ಯ ವಿಮೆ ಮಾಡಿಸ ಹೊರಟರೆ ಅಪಾರ ಲಾಭ ಗಳಿಸಬಹುದೆಂಬ ಕಾತುರ ಖಾಸಗಿಯವರದ್ದು. ವಿಮಾ ರಂಗ ಖಾಸಗೀಕರಣಗೊಂಡು ಖಾಸಗೀಯವರ ಪ್ರವೇಶ ಮುಕ್ತವಾದರೆ ಆಗ ಈ ರಂಗ ಖಾಸಗಿಯವರಿಗೆ ಚಿನ್ನದ ಗಣಿ.

ಒಂದು ಅಧ್ಯಯನದ ಪ್ರಕಾರ ಹೆಚ್ಚು ವರಮಾನವಿರುವವರ ಶೇ. 75ರಷ್ಟು ಕಾಯಿಲೆಗಳನ್ನು ಮತ್ತು ಕಡಿಮೆ ವರಮಾನದವರ ಶೇ. ೫೫ ರಷ್ಟು ಕಾಯಿಲೆಗಳನ್ನು ಖಾಸಗಿ ವೈದ್ಯರೇ ಶುಶ್ರೂಷೆ ಮಾಡುತ್ತಾರಂತೆ. ಹೀಗಿರುವಾಗ ಈ ಆರೋಗ್ಯ ವಿಮೆ ಮಾಡಿಸಲು ಅಪಾರ ಅವಕಾಶಗಳಿವೆಯಂತೆ.

ಆದ್ದರಿಂದ ಅವರು ಕಾಯುತ್ತಿದ್ದಾರೆ ಆದರೆ ಜನರ ಆರೋಗ್ಯದ ಗತಿ? ಅಧೋಗತಿ?! ಅಲ್ಲವೇ?



ಕಲ್ಕತ್ತಾದಲ್ಲಿ ಕೇಂದ್ರ ಸರ್ಕಾರದ ಕೊಲೆಯ ಕಹಳೆ

ರೈಲ್ವೆ ವ್ಯಾಗನ್ನುಗಳನ್ನು ಕಟ್ಟುವ ಉದ್ದಿಮೆ ಕಲ್ಕತ್ತದಲ್ಲಿದೆ. ಆದರೆ ಈ ಉದ್ದಿಮೆಗೆ ಆರ್ಡರುಗಳು ರೈಲ್ವೆ ಇಲಾಖೆಯಿಂದ ಬರಬೇಕು. 1994-95ನೇ ಸಾಲಿಗೆ ಕೇಂದ್ರ ಸರ್ಕಾರ 9000 ವ್ಯಾಗನ್ನುಗಳನ್ನು ಕಟ್ಟಲು ಆರ್ಡರು ನೀಡಿತ್ತು. ಆದರೆ ಮಾರ್ಚಿ ೩೧ರ ವೇಳೆಗೆ ಮುಗಿಯುತ್ತದೆ. ಅನಂತರದಲ್ಲಿ ಈ ಉದ್ದಿಮೆಯಲ್ಲಿ ಕೆಲಸವಿಲ್ಲ.

ಒಂದೂವರೆ ಲಕ್ಷದಷ್ಟು ಜನರಿಗೆ ನಿರುದ್ಯೋಗ ಉಂಟಾಗುತ್ತದೆ. ಇದಲ್ಲದೆ ಈ ವ್ಯಾಗನ್ನು ಉದ್ದಿಮೆಯನ್ನು ಅವಲಂಬಿಸಿಕೊಂಡಿರುವ ಪೂರಕ ಉದ್ದಿಮೆಗಳೂ ಹಲವು ಇವೆ. ಇವೆಲ್ಲ ರೋಗ ಗ್ರಸ್ತವಾಗುತ್ತವೆ. ಅಪಾರ ಜನರಿಗೆ ಇದು ನೋವು ತರುತ್ತದೆ.

ಈ ವರ್ಷದ ರೈಲ್ವೆ ಬಜೆಟ್ಟಿನಲ್ಲಿ ಈ ಬಗ್ಗೆ ಅವಶ್ಯ ಹಣಕಾಸು ತೆಗೆದಿರಿಸ ಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ ಅದನ್ನು ಮಾಡಲಿಲ್ಲ, ಆದ್ದರಿಂದಲೇ ಈಗ ಈ ಸಮಸ್ಯೆ ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿಯೇ ಇಂತಹ ಕ್ರಮಗಳನ್ನು ಕೈಗೊಂಡಿದೆ ಎಂಬುದ ಸ್ಪಷ್ಟ.

ರೂಪಾಯಿಯನ್ನೇ ಅಪಮೌಲ್ಯಕರಿಸಿ

ಇದನ್ನು ಫೆಡರೇಷನ್ ಆಫ್ ಇಂಡಿಯನ್ ಎಕ್ಸಪೋರ್ಟ್/ಆರ್ಗನೈಸೇಷನ್ (FIFO)ಅಧ್ಯಕ್ಷ ಹೆಚ್ ಮಹಾನಿ ಹೇಳಿದ್ದಾರೆ. ಇದಕ್ಕೆ ಅವರು ನೀಡುವ ಕಾರಣ ಪೂರ್ವ ಮತ್ತು ಪಶ್ಚಿಮದ ಮಾರುಕಟ್ಟೆಗಳಲ್ಲಿ ರೂಪಾಯಿಯ ಬೆಲೆ ಇಳಿದಿದೆ. ಆದ್ದರಿಂದ ರೂಪಾಯಿಯ ಬೆಲೆಯನ್ನು ಅಪಮೌಲ್ಯೀಕರಿಸಿದರೆ (ಶೇ. 10ರಷ್ಟು) ಆಗ ರಫ್ತು ಹೆಚ್ಚಾಗಲು ಅದು ಸಹಾಯ ಮಾಡುತ್ತದೆ ಎಂಬುದು ಅವರ ನಿಲುವು.

ಆದರೆ ಹಿಂದೆಲ್ಲ ಈ ಅಪಮೌಲ್ಯೀಕರಣ ಮಾಡಿದಾಗ ರಫ್ತು ಅಷ್ಟೇ ದೊಡ್ಡ ಪ್ರಮಾಣದಲ್ಲಿ ಏರಲಿಲ್ಲ ಬದಲಿಗೆ ದೇಶದೊಳಗೆ ಹಣದುಬ್ಬರ ಹೆಚ್ಚಿ ಬೆಲೆಯೇರಿಕೆ ಉಂಟಾಗಿವೆ.

ಕೆಲವು ರಫ್ತುದಾರರಿಗೆ ಈ ಕ್ರಮಗಳಿಂದ ಲಾಭವಾಗಿರಬಹುದಾದರೂ ದೇಶದ ಬಹುತೇಕ ಜನರಿಗೆ ಕ್ರಮಗಳು ನೋವು ತಂದಿವೆ.

ಈಗ ಮತ್ತೆ ಇಂಥ ನೋವು ನೀಡಲು ತಯಾರಿಯೆ ಅದು?

ಸಿಪಿಐ(ಎಂ) 15

15ನೇ ಮಹಾಧಿವೇಶನದತ್ತ..

ಸಿಪಿಐ(ಎಂ)ನ 15 ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ನಡೆದ ರಾಜ್ಯ ಸಮ್ಮೇಳನಗಳ ಸಂಕ್ಷಿಪ್ತ ವರದಿಗಳು.

ತಮಿಳುನಾಡು: ಮುನ್ನಡೆ ಸಾಧಿಸಿದ ಮೂರು ವರ್ಷಗಳು

ಮದ್ರಾಸಿನಿಂದ 180 ಕಿ.ಮೀ. ದೂರದಲ್ಲಿರುವ ಮಧ್ಯಮಗಾತ್ರದ ಬಂದರು ಪಟ್ಟಣ ಕಡಲೂರಿನಲ್ಲಿ ಮಾರ್ಚ್ 1 ರಿಂದ 4 ರವರೆಗೆ 15ನೇ ತಮಿಳುನಾಡು ರಾಜ್ಯ ಸಮ್ಮೇಳನ ಜರುಗಿತು.

ಕಡಲೂರು ತಮಿಳುನಾಡಿನ ಕಮ್ಯುನಿಸ್ಟ್ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದ ಒಂದು ಪಟ್ಟಣ . ಇಲ್ಲಿಯ ಸೆಂಟ್ರಲ್ ಜೈಲಿನಲ್ಲಿ ಎ.ಕೆ.ಜಿ., ಪಿ.ರಾಮಮೂರ್ತಿ, ವಿ.ಪಿ. ಚಿಂತನ್ ರಂತಹವರು ದೀರ್ಘಕಾಲ ಕಳೆದಿದ್ದರು. ಹೀಗೆ ಕಾರ್ಮಿಕರು, ರೈತರಿಗಾಗಿ ದೀರ್ಘ ಜೈಲುವಾಸ ಕಂಡ ಸಿ. ಗೋವಿಂದರಾಜನ್ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಮಾರ್ಚ್ 1 ರಂದು ಸುಮಾರು 500 ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಪಿ.ಬಿ. ಸದಸ್ಯ ಎ. ನಲ್ಲಶಿವನ್ ಕೆಂಬಾವುಟ ಹಾರಿಸುವುದರೊಂದಿಗೆ ಸಮ್ಮೇಳನ ಆರಂಭಗೊಂಡಿತು. ಇನ್ನೊಬ್ಬ ಪಿ.ಬಿ. ಸದಸ್ಯ ಪ್ರಕಾಶ್ ಕಾರಟ್ ಉದ್ಘಟನಾ ಭಾಷಣ ಮಾಡಿದರು. ಎರಡನೇ ದಿನ ಮತ್ತೊಬ್ಬ ಪಿ.ಬಿ. ಸದಸ್ಯರಾದ ಪಿ. ರಾಮಚಂದ್ರನ್ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನದಲ್ಲಿ ಭಾಗವಹಿಸಿದ 498 ಪ್ರತಿನಿಧಿಗಳು (ಇವರಲ್ಲಿ 37 ಮಹಿಳೆಯರು) ಕಳೆದ ಸಮ್ಮೇಳನದ ನಂತರದ ಅವಧಿಯ ಕೆಲಸ ಕಾರ್ಯಗಳ ವಿಮರ್ಶೆ ನಡೆಸಿತು. ರಾಜಕೀಯ-ಸಂಘಟನಾ ವರದಿಯಲ್ಲಿ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಕೆಲಸವನ್ನು ವಿಶ್ಲೇಷಿಸುವ ಒಂದು ದಸ್ತಾವೇಜನ್ನು ಸಮ್ಮೇಳನ ಚರ್ಚಿಸಿತು.

83 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಆರಿಸಲಾಯಿತು. ಚಂಡೀಗಢ ಸಮ್ಮೇಳನಕ್ಕೆ 45 ಪ್ರತಿನಿಧಿಗಳನ್ನು ಆರಿಸಲಾಯಿತು. ಹೊಸ ರಾಜ್ಯ ಸಮಿತಿ ಎನ್. ಶಂಕರಯ್ಯ ಅವರನ್ನು ಕಾರ್ಯದರ್ಶಿಯಾಗಿ ಆರಿಸಿತು. ಹಾಗೂ ಅವರೂ ಸೇರಿದಂತೆ 16 ಸದಸ್ಯರುಳ್ಳ ಕಾರ್ಯದರ್ಶಿ ಮಂಡಳಿಯನ್ನು ಆರಿಸಿತು.

ಪಕ್ಷದ ಸದಸ್ಯತ್ವ ಈ ರಾಜ್ಯದಲ್ಲಿ 1991ರಲ್ಲಿ 49,171 ಇದ್ದದ್ದು ಮಾರ್ಚ್ 1995ರಲ್ಲಿ 63,438 ಕ್ಕೇರಿತು. ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಈ ಅವಧಿಯಲ್ಲಿ 6.99 ಲಕ್ಷದಿಂದ 12.48 ಲಕ್ಷಕ್ಕೇರಿತು. ಸಾಮೂಹಿಕ ಸಂಘಟನೆಗಳ ವಿವಿಧ ಮಾಸಪತ್ರಿಕೆಗಳ ಪ್ರಸಾರ 1 ಲಕ್ಷ 20 ಸಾವಿರ.

ಮಣಿಪುರ: ಹನ್ನೊಂದನೇ ಸಮ್ಮೇಳನ

ಇಂಫಾಲ್‌ದಲ್ಲಿ ಮಾರ್ಚ್ 11 ಹಾಗೂ 12 ರಂದು ನಡೆಯಿತು. 47 ಪ್ರತಿನಿಧಿಗಳು ಭಾಗವಹಿಸಿದರು. ಕೇಂದ್ರ ಸಮಿತಿಯ ಪರವಾಗಿ ನೂರಲ್ ಹುದಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕ್ಷೇತ್ರಿ ಮಾಯುರ ಸಾಂತಾ ವರದಿಯನ್ನು ಮಂಡಿಸಿದರು. 15 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು.

13 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಹಾಗೂ ಚಂಡೀಗಢ ಮಹಾಧಿವೇಶನಕ್ಕೆ ಇಬ್ಬರು ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಆರಿಸಿತು. ಮೈತ್ರಾಪ ಶಾಮು ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಪಶ್ಚಿಮ ಬಂಗಾಳ: ಮುಂಚೂಣಿ ಪಾತ್ರ ವಹಿಸುವ ಘೋಷಣೆ

ಸಿಪಿಐ(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮ್ಮೇಳನ ದಕ್ಷಿಣ 24-ಪರಗಣಾ ಜಿಲ್ಲೆಯ ಜಾಧವ್‌ಪುರ ಕ್ರೀಡಾಂಗಣದಲ್ಲಿ ನಡೆಯಿತು. ಪಶ್ಚಿಮ ಬಂಗಾಳದ ಮಟ್ಟಿಗೆ ಇದು 18ನೇ ಸಮ್ಮೇಳನವಾಗಿತ್ತು. ಸಮ್ಮೇಳನದ ಅಂತ್ಯದಲ್ಲಿ ಕಲ್ಕತ್ತೆಯ ಬ್ರಿಗ್ರೇಡ್ ಪರೇಡ್ ಮೈದಾನದಲ್ಲಿ ಮಾರ್ಚ್ 5ರಂದು ಬೃಹತ್ ರ್‍ಯಾಲಿ ನಡೆಯಿತು. ಇದರಲ್ಲಿ 5 ಲಕ್ಷ ಮಂದಿ ಭಾಗವಹಿಸಿದರು. ಕಾಂಗ್ರೆಸ್(ಐ) ಕೇಂದ್ರ ಸರ್ಕಾರದ ಪ್ರತಿಗಾಮಿ ನೀತಿಗಳು ಹಾಗೂ ಕೋಮುವಾದಿ ಅಪಾಯದ ವಿರುದ್ಧ ಐಕ್ಯ ಹೋರಾಟ ನಡೆಸುವಲ್ಲಿ ಸಿಪಿಐ(ಎಂ)ನ ಪಶ್ಚಿಮ ಬಂಗಾಳ ಘಟಕ ಮುಂಚೂಣಿ ಪಾತ್ರವಹಿಸುತ್ತದೆ, ಎಡ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿಕೊಳ್ಳುತ್ತದೆ ಎಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಜ್ಯೋತಿಬಸು ಬಿನೊಯ್ ಚೌಧುರಿ ಹಾಗೂ ಶೈಲೇನ್‌ದಾಸ್‌ಗುಪ್ತಾ ಘೋಷಿಸಿದರು.

ಜ್ಯೋತಿಬಸುರವರು ಉದ್ಘಾಟಿಸಿದ ಸಮ್ಮೇಳನ ಕಳೆದ ಮೂರು ವರ್ಷಗಳ ಅನುಭವಗಳ ವಿನಿಮಯ, ವಿಮರ್ಶೆ ನಡೆಸಿ ವ್ಯಾಪಕ ಸಾಮೂಹಿಕ ರಾಜಕೀಯ ಆಂದೋಲನಗಳ ಮೂಲಕ, ದೇಶದಲ್ಲಿ ಈಗ ಇರುವ ರಾಜಕೀಯ ಸನ್ನಿವೇಶ'ದಲ್ಲಿ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಬಲ್ಲ ಸಂಘಟನೆಯನ್ನು ಬೆಳೆಸಿ ಪಕ್ಷದ ಸೈದ್ಧಾಂತಿಕ ನೀತಿಗಳನ್ನು ಜನಗಳ ಮುಂದಿಡಲು ದೃಢ ಹಾಗೂ ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಎಂದು ಪಕ್ಷದ ಸದಸ್ಯರಿಗೆ ಕರೆ ನೀಡಿದರು. ಇನ್ನೊಬ್ಬ ಪಿ.ಬಿ.ಸದಸ್ಯರಾದ ಸೀತಾರಾಂಯೆಚೂರಿಯವರೂ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

584 ಪ್ರತಿನಿಧಿಗಳು ಹಾಗೂ 100 ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಿದರು. ಪ್ರತಿನಿಧಿಗಳಲ್ಲಿ ಮಹಿಳೆಯರ ಸಂಖ್ಯೆ 41 ಪ್ರತಿನಿಧಿಗಳಲ್ಲಿ 37 ಮಂದಿ 50 ವರ್ಷಕ್ಕಿಂತಲೂ ಹೆಚ್ಚು ಕಾಲ ಕಮ್ಯುನಿಸ್ಟ್ ಆಂದೋಲನದಲ್ಲಿ ಸೇವೆ ಸಲ್ಲಿಸಿದವರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕಮ್ಯುನಿಸ್ಟ್ ಧ್ಯೇಯಗಳಿಗೆ ತಮ್ಮನ್ನು ಅರ್ಪಿಸಿಕೊಂಡ ಗೌರವ ಪ್ರತಿನಿಧಿಗಳು ಈ ಸಮ್ಮೇಳನದ ಒಂದು ವಿಶಿಷ್ಟತೆಯಾಗಿತ್ತು.

1991ರಿಂದ 1994ರ ರಾಜ್ಯದಲ್ಲಿ ಪಕ್ಷದ ಸದಸ್ಯತ್ವ 25000ದಷ್ಟು ಹೆಚ್ಚಿತು. ಡಿಸೆಂಬರ್ 1994ರಲ್ಲಿ ಪಕ್ಷದ ಸದಸ್ಯತ್ವ 2,16,490 ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಸದಸ್ಯತ್ವ 1 ಕೋಟಿ 96 ಲಕ್ಷ.

91 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಅವಿರೋಧವಾಗಿ ಆರಿಸಲಾಯಿತು. ಶೈಲೇನ್‌ದಾಸ್‌ಗುಪ್ತಾ ರಾಜ್ಯ ಕಾರ್ಯದರ್ಶಿಯಾಗಿ ಹಾಗೂ ಅನಿಲ್ ಬಿಸ್ವಾಸ್ 'ಗಣಶಕ್ತಿ' ದೈನಿಕದ ಸಂಪಾದಕರಾಗಿ ಪುನರಾಯ್ಕೆಗೊಂಡರು. ಐವರು ಸದಸ್ಯರುಳ್ಳ ಒಂದು ರಾಜ್ಯ ಹತೋಟಿ ಆಯೋಗವನ್ನು ಸಮ್ಮೇಳನ ಆರಿಸಿತು.

ಈ ಸಮ್ಮೇಳನದ ಸಿದ್ಧತಾ ಕಾರ್ಯಗಳ ಭಾಗವಾಗಿ ಜಿಲ್ಲೆಯ ಮೂಲೆ-ಮೂಲೆಗಳಲ್ಲಿ ವಿವಿಧ ವಿಚಾರಸಂಕಿರಣಗಳು, ಪಕ್ಷದ ತರಗತಿಗಳು ನಡೆದವು. ಸುಮಾರು 2000 ತರಬೇತಿ ಪಡೆದ ಸ್ವಯಂ ಸೇವಕರು ಈ ಸಮ್ಮೇಳನದ ಯಶಸ್ವಿಗಾಗಿ ಹಗಲುರಾತ್ರಿ ದುಡಿದರು.

ತ್ರಿಪುರಾ: "ಸಾಧನೆಗಳನ್ನು ಕ್ರೋಢೀಕರಿಸಬೇಕು"

15ನೇ ತ್ರಿಪುರಾ ರಾಜ್ಯ ಸಮ್ಮೇಳನ ಅಗರ್ತಲಾದಲ್ಲಿ ಫೆಬ್ರವರಿ 17ರಂದು ಪೊಲಿಟ್ ಬ್ಯೂರೋ ಸದಸ್ಯ ನೃಪೇನ್ ಚಕ್ರವರ್ತಿ ಕೆಂಬಾವುಟ ಆರಿಸುವುದರೊಂದಿಗೆ ಆರಂಭವಾಯಿತು. ಈ ಕೆಂಬಾವುಟವನ್ನು ಅಕ್ಟೋಬರ್ 12, 1988ರಂದು ಕಾಂಗ್ರೆಸ್(ಐ) ಗೂಂಡಾಗಳು 11 ಸಂಗಾತಿಗಳನ್ನು ಹಾಗೂ ಇಬ್ಬರು ಭದ್ರತಾ ಸಿಬ್ಬಂದಿಯನ್ನು ಸಾಯಿಸಿದ ಸ್ಥಳವಾದ ಬೀರ್ ಚಂದ್ರ ಮಾನುನಿಂದ (ಅಗರ್ತಲಾದಿಂದ 88 ಕಿ.ಮೀ) ತರಲಾಗಿತ್ತು. ಅಂದು ಬೀರ ಚಂದ್ರಮಾನುನಲ್ಲಿ ಪಕ್ಷದ ಕಛೇರಿಯ ಮೇಲೆ ಕೆಂಬಾವುಟ ಹಾರಿಸುವ ಪ್ರಯತ್ನದಲ್ಲಿ ಹಲ್ಲೇಗೀಡಾಗಿ ಆಶ್ಚರ್ಯತನಕ ರೀತಿಯಲ್ಲಿ ಪಾರಾದ ಬೃಜ್ ಮೋಹನ್ ಜಮಾತಿಯಾ ಫೆಬ್ರವರಿ 15 ರಂದು ಕೆಂಬಾವುಟ ಪಡೆದು 350 ಸಂಗಾತಿಗಳೊಡನೆ ಎರಡು ದಿನಗಳ ಜಾಥಾದ ನಂತರ ಅಗರ್ತಲಾ ತಲುಪಿದ್ದರು. ಸಾರ್ವಜನಿಕ ಸಭೆಯೂ ಮೊದಲ ದಿನವೇ ನಡೆಯಿತು.

ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ರವರು ಮಂಡಿಸಿದ ವರದಿಯ ಮೇಲೆ 34 ಪ್ರತಿನಿಧಿಗಳು ಚರ್ಚೆ ನಡೆಸಿದರು. ಚರ್ಚೆಯ ಸಮಯದಲ್ಲಿ ಒಬ್ಬ ವ್ಯಕ್ತಿಗೆ ಒಂದು ಹುದ್ದೆ. ಪಕ್ಷದಲ್ಲಿ ಸಾಮೂಹಿಕ ನಾಯಕತ್ವದ ಮೇಲೆ ಒತ್ತು ಇರಬೇಕೆಂದು ಸೂಚಿಸಿದರು. ಚರ್ಚೆಗೆ ಉತ್ತರ ನೀಡುತ್ತಾ ರಾಜ್ಯ ಕಾರ್ಯದರ್ಶಿಗಳು ತ್ರಿಪುರಾ ಮೂರನೇ ಎಡರಂಗ ಸರ್ಕಾರ ತೀವ್ರ ಮಿತಿಗಳೊಳಗೆ, ರಾಜ್ಯಪಾಲರ ದುಷ್ಟ ಪಾತ್ರದ ನಡುವೆ ಕೆಲಸ ನಿರ್ವಹಿಸಬೇಕಾಗಿದೆ ಎಂದರು.

ನೃಪೇನ್ ಚಕ್ರವರ್ತಿಯವರಲ್ಲದೆ ಈ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಇತರ ಪಿ.ಬಿ. ಸದಸ್ಯರೆಂದರೆ ಪ್ರಕಾಶ್ ಕಾರಟ್, ಜ್ಯೋತಿ ಬಸು ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಸುರ್ಜಿತ್.

62 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿ ಆಯ್ಕೆಗೊಂಡಿತು. ಚಂಡೀಗಢ ಮಹಾಧಿವೇಶನಕ್ಕೆ 23 ಪ್ರತಿನಿಧಿಗಳನ್ನು ಆರಿಸಲಾಯಿತು. 15 ಸದಸ್ಯರುಳ್ಳ ಕಾರ್ಯದರ್ಶಿ ಮಂಡಳಿ ರಚನೆಗೊಂಡಿತು.

ಸಮ್ಮೇಳನದಲ್ಲಿ ಒಟ್ಟು 403 ಪ್ರತಿನಿಧಿಗಳು, 29 ವೀಕ್ಷಕರು ಭಾಗವಹಿಸಿದರು. ಇವರಲ್ಲಿ 38 ಮಹಿಳೆ ಪ್ರತಿನಿಧಿಗಳು, 8 ಮಹಿಳಾ ವೀಕ್ಷಕರು.

ಗುಜರಾತ್: ಪಕ್ಷವನ್ನು ಬಲಗೊಳಿಸುವ ನಿರ್ಧಾರ

15ನೇ ಗುಜರಾತ್ ರಾಜ್ಯ ಸಮ್ಮೇಳನ ರಾಜ್‌ಕೋಟ್‌ನಲ್ಲಿ ಮಾರ್ಚ್ 28-29 ರಂದು ನಡೆಯಿತು. ಸೀತಾರಾಂ ಯೆಚೂರಿಯವರು ಕೆಂಬಾವುಟ ಹಾರಿಸುವುದರೊಂದಿಗೆ ಸಮ್ಮೇಳನ ಆರಂಭವಾಯಿತು. 142 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 30 ಮಹಿಳೆಯರು.

ಸಮ್ಮೇಳನ 16 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಹೊಸ ಕಾರ್ಯದರ್ಶಿ ಮಂಡಳಿಯಲ್ಲಿ ನಾಲ್ವರು ಸದಸ್ಯರಿದ್ದು ಸುಭೋದ್ ಮೆಹ್ತಾ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಆಂಧ್ರ: ಮಹಾಧಿವೇಶನಕ್ಕೆ ಪ್ರತಿನಿಧಿಗಳ ಆಯ್ಕೆ

ಮಾರ್ಚ್ 26 ರಂದು ವಿಜಯವಾಡದಲ್ಲಿ ಉತ್ಸಾಹದಿಂದ 18ನೇ ಆಂಧ್ರ ಪ್ರದೇಶ ರಾಜ್ಯ ಸಮ್ಮೇಳನ ಆರಂಭವಾಯಿತು. ಪಕ್ಷದ ಹಿರಿಯ ಮುಖಂಡ ಹಾಗೂ ಪಿ.ಬಿ. ಸದಸ್ಯ ಎಲ್ ಬಾಲಗಂಗಾಧರ ರಾವ್ ಕೆಂಬಾವುಟ ಹಾರಿಸಿದರು. ಇ. ಬಾಲನಂದನ್ ಉದ್ಘಾಟಿಸಿದರು. ಪಕ್ಷದ ಮಹಾಧಿವೇಶನಕ್ಕೆ ಪ್ರತಿನಿಧಿಗಳನ್ನು ಹಾಗೂ ವೀಕ್ಷಕರನ್ನು ಆರಿಸಿದ ನಂತರ ಸಮ್ಮೇಳನವನ್ನು ಮುಂದೂಡಲಾಯಿತು

ಮಧ್ಯಪ್ರದೇಶ: ಭೂಮಿ, ಬುಡಕಟ್ಟು ಜನರ ಪ್ರಶ್ನೆಗಳ ಮೇಲೆ ಹೋರಾಟ

8ನೇ ಮಧ್ಯಪ್ರದೇಶ ರಾಜ್ಯ ಸಮ್ಮೇಳನ ಛತ್ತೀಸ್ ಘಡ್ ಪ್ರದೇಶದ ಮುಖ್ಯನಗರ ರಾಮಗಢದಲ್ಲಿ ಫೆಬ್ರವರಿ 14-16 ರವರೆಗೆ ನಡೆಸಿತು. ರಾಜ್ಯದಲ್ಲಿ ಒಂದು ದುರ್ಬಲ ಘಟಕವಾದರೂ ರಾಯಗಢ ಜಿಲ್ಲಾ ಘಟಕ ಈ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿತ್ತು.

ಪಿ.ಬಿ. ಸದಸ್ಯ ಪಿ. ರಾಮಚಂದ್ರನ್‌ರವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಿಪಿಐ(ಎಂ) ಈಗ ಮಧ್ಯಪ್ರದೇಶದ ರಾಜಕೀಯ ನಕಾಶೆಯಲ್ಲಿ ಬಂದಿದೆ. ಮಧ್ಯಪ್ರದೇಶ ರಾಜ್ಯ ಘಟಕವನ್ನೀಗ ಸಿಪಿಐ(ಎಂ)ನ ರಾಜಕೀಯ ನಕಾಶೆಯಲ್ಲಿ ತರಬೇಕೆಂದು ಅವರು ಕರೆ ನೀಡಿದರು. ಹಿಂದಿನ ಬಿಜೆಪಿ ಸರಕಾರ ನಂತರ ರಾಷ್ಟ್ರಪತಿ ಆಳ್ವಿಕೆ ಹಾಗೂ ಈಗ ಕಾಂಗ್ರೆ ಸರಕಾರದಿಂದ ತೀವ್ರ ದಮನದ ನಡುವೆಯೂ ಪಕ್ಷ ನಡೆಸಿದ ಕೆಲಸಗಳ ವಿಮರ್ಶೆ ನಡೆಸಲಾಯಿತು. ಕಳೆದ ಮೂರು ವರ್ಷಗಳಲ್ಲಿ ಸದಸ್ಯತ್ವ 987 ರಿಂದ 2500 ಕ್ಕೇರಿತು ಇದರಲ್ಲಿ ಹಿಂದಿನ ಸಮಾಜವಾದಿ ಪಕ್ಷ ಹಾಗೂ ಸಿಪಿಐನಿಂದ 600 ಕಾರ್ಯಕರ್ತರೂ ಸೇರಿದ್ದಾರೆ, ಮೂರು ಹೊಸ ಜಿಲ್ಲಾ ಘಟಕಗಳು ರಚನೆಗೊಂಡವು.

32 ವೀಕ್ಷಕರೂ ಸೇರಿದಂತೆ 270 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನ, ಕೊನೆಯಲ್ಲಿ ಹಿಂದಿನ ರಾಜ್ಯ ಸಮಿತಿ 39 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯ ಪಟ್ಟಿಯನ್ನು ಮಂಡಿಸಿತು. 36 ಹೆಸರುಗಳಿಗೆ ಒಂದು ಸೇರಿಸಿದ್ದರಿಂದ ಗುಪ್ತ ಮತದಾನಕ್ಕೆ ಹಾಕಲಾಯಿತು. ನಂತರ ರಾಜ್ಯ ಸಮಿತಿಯ ಪಟ್ಟಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಹೊಸ ರಾಜ್ಯ ಸಮಿತಿ ಶೈಲೇಂದ್ರ ಶೈಲಿಯವರನ್ನು ಕಾರ್ಯದರ್ಶಿಯಾಗಿ ಪುನರಾಯ್ಕೆ ಮಾಡಿತು. ಒಂಭತ್ತು ಸದಸ್ಯರುಳ್ಳ ಕಾರ್ಯದರ್ಶಿ ಮಂಡಳಿಯು ಆಯ್ಕೆಗೊಂಡಿತು.

ಮಹಾಧಿವೇಶನಗಳು ಯಾವಾಗ -ಎಲ್ಲಿ

ಪ್ರಥಮ	ಮುಂಬೈ	ಮೇ. 23 - ಜೂನ್ 1, 1943
ಎರಡನೇ	ಕಲ್ಕತ್ತ	ಫೆ.28 - ಮಾರ್ಚ್ 5, 1948
ಮೂರನೇ	ಮಧುರೈ	ಡಿಸೆಂಬರ್ 27, (1952) ಜ. 4, 1953
ನಾಲ್ಕನೇ	ಪಾಲಕ್ಕಾಡ್	ಏಪ್ರಿಲ್ 19-29, 1956
ಐದನೇ	ಅಮೃತ್‌ಸರ್	ಏಪ್ರಿಲ್ 6-13, 1958
ಆರನೇ	ವಿಜಯವಾಡ	ಏಪ್ರಿಲ್ 7-16, 1961
ಏಳನೇ	ಕಲ್ಕತ್ತಾ	ಅಕ್ಟೋಬರ್ 31, ನವೆಂಬರ್ 7, 1964
ಎಂಟನೇ	ಕೊಚ್ಚಿ	ಡಿಸೆಂಬರ್ 23-29, 1968
ಒಂಭತ್ತನೇ	ಮಧುರೈ	ಜೂನ್ 27 - ಜುಲೈ 2, 1972
ಹತ್ತನೇ	ಜಾಲಂಧರ್	ಏಪ್ರಿಲ್ 2-8, 1978
ಹನ್ನೊಂದನೇ	ವಿಜಯವಾಡ	ಜನವರಿ 26-31, 1982
ಹನ್ನೆರಡನೇ	ಕಲ್ಕತ್ತಾ	ಡಿಸೆಂಬರ್ 24-29, 1985
ಹದಿಮೂರನೇ	ತಿರುವನಂತಪುರ	ಡಿಸೆಂಬರ್ 27, 1988 ಜನವರಿ 1, 1989
ಹದಿನಾಲ್ಕನೇ	ಮದ್ರಾಸ್	ಜನವರಿ 3-8, 1992
ಹದಿನೈದನೇ	ಚಂಡೀಗಢ	ಏಪ್ರಿಲ್ 3-8, 1995

15ನೇ ಮಹಾಧಿವೇಶನದತ್ತ..

ಕೇರಳ: ಸಾಮೂಹಿಕ ನೆಲೆಯ ಸಂಘಟನಾ ಶಕ್ತಿಯ ವಿಸ್ತಾರ

15ನೇ ಕೇರಳ ರಾಜ್ಯ ಸಮ್ಮೇಳನ ಕೊಲ್ಲರಿನಲ್ಲಿ ಫೆಬ್ರವರಿ 28ರಂದು ಒಂದು ಬೃಹತ್ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆಯೊಡನೆ ಮುಕ್ತಾಯಗೊಂಡಿತು. ಈ ಮೆರವಣಿಗೆಯಲ್ಲಿ ಭಾಗವಹಿಸಿದ ಕೆಲವು ಸ್ವಯಂ ಸೇವಕರ ಸಂಖ್ಯೆಯೇ 25 ಸಾವಿರ. ಪಕ್ಷದ ಸಾಮೂಹಿಕ ನೆಲೆಯ, ಸಂಘಟನಾ ಶಕ್ತಿಯ ವಿಸ್ತಾರ ಪ್ರತೀಕವಾಗಿದ್ದರು. ನಂತರ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸುರ್ಜಿತ್, ಇ.ಎಂ.ಎಸ್., ನಾಯನಾರ್, ಅಚ್ಯುತಾನಂದನ್ ಹಾಗೂ ಬಾಲಾನಂದನ್ ಮಾತನಾಡಿದರು.

ಇದಕ್ಕೆ ಮೊದಲು ಫೆಬ್ರುವರಿ 28ರಂದು ಇ.ಎಂ.ಎಸ್. ರವರು ಕೆಂಬಾವುಟ ಹಾರಿಸುವುದರೊಂದಿಗೆ ಸಮ್ಮೇಳನ ಆರಂಭವಾಗಿತ್ತು. ಆರಂಭದಲ್ಲಿ ಭಾಷಣ ಮಾಡುತ್ತಾ ಇಎಂಎಸ್ ಬಂಡವಾಳಶಾಹಿ ಸುದ್ದಿ ಮಾಧ್ಯಮಗಳು ಮಾಡುತ್ತಿರುವ ಅಪಪ್ರಚಾರದ ಬಗ್ಗೆ ಪ್ರಸ್ತಾಪಿಸುತ್ತಾ "ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಯಾರು ಎಂದು ನಿರ್ಧರಿಸುವ ಸಮ್ಮೇಳನ ಮಾತ್ರ ಎಂದವರು ಹೇಳುತ್ತಿದ್ದಾರೆ. ಅದಕ್ಕೆ ನಾಲ್ಕು ದಿನಗಳ ಸಮ್ಮೇಳನ ಬೇಕೆ?" ಎಂದು ಪ್ರಶ್ನಿಸಿದರು. ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ಸಮ್ಮೇಳನವನ್ನು ಉದ್ಘಾಟಿಸಿದರು. ನಂತರ ಇ.ಕೆ.ನಯನಾರ್ ರಾಜ್ಯ ಸಮಿತಿಯ ವರದಿಯನ್ನು ಮಂಡಿಸಿದರು. ಅದರ ಮೇಲೆ ನಡೆದಚರ್ಚೆಯಲ್ಲಿ 60 ಪ್ರತಿನಿಧಿಗಳು ಮಾತನಾಡಿಕಳೆದ ಮೂರು ವರ್ಷಗಳ ಕೆಲಸದ ವಿಮರ್ಶೆ ನಡೆಸಿದರು.

508 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನ 15ನೇ ಮಹಾಧಿವೇಶನಕ್ಕೆ 165 ಪ್ರತಿನಿಧಿಗಳನ್ನು, ಮೂವರು ಸದಸ್ಯರುಳ್ಳ ರಾಜ್ಯ ಹತೋಟಿ ಆಯೋಗವನ್ನು ಹಾಗೂ 89 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಆರಿಸಿತು.ಇ.ಕೆ.ನಾಯನಾರ್ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಈ ಸಮ್ಮೇಳನದ ಸಂದರ್ಭದಲ್ಲಿ ಫೆಬ್ರುವರಿ 25, 26 ಹಾಗೂ 27ರಂದು ವಿಚಾರ ಸಂಕಿರಣಗಳು ನಡೆದವು. ಎರಡು ಕವಿ ಸಮ್ಮೇಳನಗಳು ನಡೆದವು. ಫೆಬ್ರುವರಿ 20ರಿಂದ 28ರವರೆಗೆ ಒಂದು 'ಇತಿಹಾಸ ಪ್ರದರ್ಶನ'ವನ್ನು ಏರ್ಪಡಿಸಲಾಗಿತ್ತು. 1848ರಲ್ಲಿ ಪ್ರಕಟವಾದ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದಿಂದ ಆರಂಭವಗುವ ಪ್ರದರ್ಶನ ನೋಟಗಳನ್ನು ವಿವಿಧ ಯುಗಗಳ ಮೂಲಕ, ವಿವಿಧ ಅಂತರ್‍ರಾಷ್ಟ್ರೀಯ, ರಾಷ್ಟ್ರೀಯ, ಸ್ಥಳೀಯ ಘಟನೆಗಳ ಮೂಲಕ ಸೋವಿಯೆತ್ ಒಕ್ಕೂಟ ಪತನ, ಚೀಣಾ ಜನತಾ ಗಣತಂತ್ರದ ಜನನ, ನೇಪಾಳದಲ್ಲಿ ಕೆಂಪು ಸೂರ್ಯ, ಭಾರತೀಯ ಕಮ್ಯುನಿಸ್ಟ್ ಆಂದೋಲನ, ತೆಲಂಗಾಣದಿಂದ ಕೂತುಪರಂಬುವರೆಗಿನ ವಿವಿಧ ಹೋರಾಟಗಳ ಮೂಲಕ ಕೊಂಡೊಯ್ಯುವಂತಿತ್ತು.

ಮಹಾರಾಷ್ಟ್ರ: ಕೋಮುವಾದಿ ಸವಾಲನ್ನು ಎದುರಿಸಬೇಕಾಗಿದೆ

ಠಾಣೆ ಜಿಲ್ಲೆಯ ತಲಸಾರಿ ಎಂಬಲ್ಲಿ 15ನೇ ಮಹಾರಾಷ್ಟ್ರ ರಾಜ್ಯ ಸಮ್ಮೇಳನ ಮಾರ್ಚ್ 24-26 ರವರೆಗೆ ನಡೆಯಿತು. ಇದು ಮಹಾರಾಷ್ಟ್ರ ಕಿಸಾನ್ ಸಭಾ ಹಾಗೂ ಇತಿಹಾಸ ಪ್ರಸಿದ್ಧ ವಾರಳೀ ಆದಿವಾಸಿ ಜನಗಳ ಹೋರಾಟದ ಸ್ವರ್ಣ ಮಹೋತ್ಸವದ ಸಂದರ್ಭವೂ ಆಗಿತ್ತು. ಮೊದಲ ದಿನ ನಡೆದ ಸಾರ್ವಜನಿಕ ಸಭೆಯಲ್ಲಿ 30 ಸಾವಿರ ಮಂದಿ ಭಾಗವಹಿಸಿದ್ದರು. ಸುರ್ಜಿತ್, ಸೀತಾರಾಂ ಯೆಚೂರಿ, ಪ್ರಭಾಕರ್ ಸಾಂಝಗಿರಿ, ಅಹಲ್ಯಾ ರಂಗ್ನೇಕರ್ ಮಾತನಾಡಿದರು.

ಮಹಾರಾಷ್ಟ್ರದಲ್ಲಿ ರೈತ ಆಂದೋಲನದ ಹಿರಿಯ ಮುಖಂಡರಾದ ಹಾಗೂ ಕಳೆದ ಮಹಾಧಿವೇಶನದಲ್ಲಿ ಅನಾರೋಗ್ಯದಿಂದ ನಿವೃತ್ತರಾಗುವವರೆಗೆ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿದ್ದ 89 ವರ್ಷ ವಯಸ್ಸಿನ ಗೋದಾವರಿ ಪರುಳೇಕರ್ ರವರು ಭಾಗವಹಿಸಿದ್ದು ಈ ಸಭೆಯ ಒಂದು ವಿಶಿಷ್ಟತೆಯಾಗಿತ್ತು. ಸುರ್ಜಿತ್‌ರವರು ಗೋದಾವರಿ ಪುರುಳೇಕರ್ ಹಾಗೂ ವಾರಳೀ ಹೋರಾಟದ ಇನ್ನೂ ಕೆಲವು ಹಿರಿಯರನ್ನು ಸನ್ಮಾನಿಸಿದ ಸಂದರ್ಭ ಹೃದಯಸ್ಪರ್ಶಿಯಾಗಿತ್ತು.

70 ವರ್ಷಗಳ ಹಿಂದೆ ಮುಂಬೈಯ ಕಾರ್ಮಿಕ ವರ್ಗ ಕಮ್ಯುನಿಸ್ಟ್ ಪಕ್ಷ ಕಟ್ಟಿ ದೇಶದ ಜನಸಮೂಹಗಳಿಗೆ ದಾರಿ ತೋರಿತ್ತು. 50 ವರ್ಷಗಳ ಹಿಂದೆ ಠಾಣೆ ಜಿಲ್ಲೆಯ ಆದಿವಾಸಿ ಬಂಡಾಯ ರೈತ ಆಂದೋಲನಕ್ಕೆ ಹೊಸ ದಿಕ್ಕು ನೀಡಿತ್ತು. ಈ ಭವ್ಯ ಪರಂಪರೆಯನ್ನು ಪುನರುಜ್ಜೀವನಗೊಳಿಸಿ ರಾಜ್ಯದಲ್ಲಿ ಬಂದಿರುವ ಹೊಸ ಸವಾಲುಗಳನ್ನು ಎದುರಿಸಲು ಮುಂದಾಗಬೇಕು ಎಂದು ಸುರ್ಜಿತ್ ಮನವಿಮಾಡಿಕೊಂಡರು.

ರಾಜ್ಯ ಸಮ್ಮೇಳನವನ್ನು ಸೀತಾರಾಂ ಯೆಚೂರಿ ಉದ್ಘಾಟಿಸಿದರು. ರಾಜ್ಯದ ಪ್ರಸ್ತುತ ಪರಿಸ್ಥಿತಿಯ ವಿಶ್ಲೇಷಣೆ ನಡೆಸಿದ್ದ ವರದಿಯ ಮೇಲೆ ಸಂಘಟನಾ ವರದಿಯ ಮೇಲೆ ಏಳು ಗಂಟೆಗಳ ಚರ್ಚೆಯಲ್ಲಿ 24 ಜಿಲ್ಲೆಗಳ 61 ಪ್ರತಿನಿಧಿಗಳು ಭಾಗವಹಿಸಿದರು. ಸಮ್ಮೇಳನ 41 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಹನ್ನೊಂದು ಸದಸ್ಯರುಳ್ಳ ಈಗಿನ ರಾಜ್ಯ ಕಾರ್ಯದರ್ಶಿ ಮಂಡಳಿ ಮಹಾಧಿವೇಶನದ ನಂತರ ರಾಜ್ಯ ಸಮಿತಿ ಸಭೆಯವರೆಗೆ ಮುಂದುವರೆಸಲು ನಿರ್ಧರಿಸಲಾಯಿತು.

ಪ್ರಭಾಕರ್ ಸಾಂಝ್‌ಗಿರಿ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಒಟ್ಟು 263 ಪ್ರತಿನಿಧಿಗಳು, 22 ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಿದರು. ಪಕ್ಷದ ಸದಸ್ಯತ್ವ ಕಳೆದ ಮೂರು ವರ್ಷಗಳಲ್ಲಿ 5880 ರಿಂದ 6984ಕ್ಕೇರಿದೆ. ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಸದಸ್ಯತ್ವ 2 ಲಕ್ಷ 83 ಸಾವಿರದಿಂದ 3ಲಕ್ಷ 51 ಸಾವಿರಕ್ಕೇರಿದೆ.

ಒರಿಸ್ಸಾ: ಪಕ್ಷದ ಸಂಘಟನೆ ಬಲಗೊಳಿಸಲು ಆದ್ಯತೆ

14ನೇ ಒರಿಸ್ಸಾ ರಾಜ್ಯ ಸಮ್ಮೇಳನ ಮಾರ್ಚ್ 19-20 ರಂದು ಬಹ್ರಾಂಪುರದಲ್ಲಿ ನಡೆಯಿತು. ರಾಜ್ಯದ 17 ಜಿಲ್ಲೆಗಳಲ್ಲಿರುವ 3057 ಸದಸ್ಯರನ್ನು ಪ್ರತಿನಿಧಿಸಿದ 183 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್‌ಕಾರಟ್ ಸಮ್ಮೇಳನವನ್ನು ಉದ್ಘಾಟಿಸಿದರು. ರಾಜ್ಯದಲ್ಲಿ ಕಾಂಗ್ರೆಸ್(ಐ)ನ್ನು ಮತ್ತೆ ಅಧಿಕಾರಕ್ಕೆ ಜನ ತಂದದ್ದು ವ್ಯವಸ್ಥೆಯ ವಿರೋಧ ಮತ ಎಂದು ಪರಿಗಣಿಸಬಾರದು. ಅದು ಕಾಂಗ್ರೆಸ್‌ಗೆ ಬಿಜು ಪಟ್ನಾಯಕ್ ನೀಡಿದ ಉಡುಗೊರೆ, ರಾಜ್ಯದಲ್ಲಿ ಕಾಂಗ್ರೆಸ್(ಐ) ಆರ್ಥಿಕ ನೀತಿಗಳನ್ನು ಜ್ಯಾರಿಗೆ ತಂದು ಎಡಪಕ್ಷಗಳೊಂದಿಗೆ ಸಹಕರಿಸಲು ನಿರಾಕರಿಸಿ ನೀಡಿದ ಉಡುಗೊರೆ ಎಂದರು. ಪಕ್ಷದ ಚಟುವಟಿಕೆಗಳು, ಬೆಳವಣಿಗೆ ಮತ್ತು ದೌರ್ಬಲ್ಯಗಳನ್ನು ವಿಮರ್ಶಿಸಿದ ವರದಿ ಚುನಾವಣೆಗಳಲ್ಲಿ ಸರಿಯಾದ ನಿಲುವು ತಳೆದರೂ ಸಂಘಟನಾ ದೌರ್ಬಲಯದಿಂದಾಗಿ ಉತ್ತಮ ಫಲಿತಾಂಶ ಪಡೆಯಲಿಲ್ಲ ಎಂದಿತು. 47ಪ್ರತಿನಿಧಿಗಳು ವರದಿಯ ಮೇಲೆ ಮಾತನಾಡಿದರು. ಒರಿಸ್ಸಾ ಅಭಿವೃದ್ಧಿಯ ಬಗ್ಗೆ ಒಂದು ಪ್ರತ್ಯೇಕನಿರ್ಣಯ ಕೈಗೊಂಡ ಸಮ್ಮೇಳನ ರಾಜ್ಯದ ಸ್ಥಾಪನೆಯ ವಜ್ರಮಹೋತ್ಸವದ ಸಂದರ್ಭದಲ್ಲಿ ರಾಜ್ಯದಲ್ಲಿ ಇನ್ನೂ ಇರುವ ಬಡತನ, ಹಿಂದುಳಿಕೆ ನಿವಾರಿಸಲು ಪಕ್ಷದ ಪರ್ಯಾಯ ಪ್ರಸ್ತಾಪಗಳನ್ನು ಜನಜನಿತಗೊಳಿಸಬೇಕೆಂದು ನಿರ್ಧರಿಸಿತು.

ಸಮಾರೋಪ ಭಾಷಣ ಮಾಡಿದ ಕೇಂದ್ರ ಸಮಿತಿ ಸದಸ್ಯ ಬಿಮಾನ್ ಬಸು ರಾಜ್ಯದಲ್ಲಿ ಪಕ್ಷದ ಮುಂದಿರುವ ಅವಕಾಶಗಳ ಬಗ್ಗೆ ವಿವರಿಸಿದರು. ಸಮ್ಮೇಳನ 35 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಆರಿಸಿತು. ಎಂಟು ಸದಸ್ಯರುಳ್ಳ ಕಾರ್ಯದರ್ಶಿ ಮಂಡಳಿ ರಚನೆಗೊಂಡಿತು. ಜನಾರ್ದನ್ ಪತಿ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಜಮ್ಮು-ಕಾಶ್ಮೀರ: ನಾಲ್ಕನೇ ಸಮ್ಮೇಳನ

4ನೇ ಜಮ್ಮು-ಕಾಶ್ಮೀರ ರಾಜ್ಯ ಸಮ್ಮೇಳನ ಮಾರ್ಚ್ 24 ರಂದು ಜಮ್ಮುವಿನಲ್ಲಿ ನಡೆಯಿತು. ಅದರ ಹಿಂದಿನ ದಿನ ಜಮ್ಮು ಪ್ರಾದೇಶಿಕ ಸಮ್ಮೇಳನ ನಡೆಯಿತು.

ಸುಮಾರು 800 ಜನ ಭಾಗವಹಿಸಿದ್ದ ಈ ಪ್ರದೇಶಿಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಪಿ.ಬಿ.ಸದಸ್ಯ ಪ್ರಕಾಶ್ ಕಾರಟ್ ರಾಜ್ಯದಲ್ಲಿ ಪಕ್ಷದ ಬೆಳವಣಿಗೆಯನ್ನು ಶ್ಲಾಘಿಸಿದರು. ರಾಜ್ಯದಲ್ಲಿ ಹಿಂದೆ ಸಿಪಿಐಗೆ ಸೇರಿದ್ದ ಕಿಸಾನ್‌ಮಜ್ದೂರ್‌ಪಾರ್ಟಿ ಎಂಬ ಸಂಘಟನೆ ಈಗ ಸಿಪಿಐ(ಎಂ) ಸೇರಲು ನಿರ್ಧರಿಸಿದೆ.

ಮಾರ್ಚ್ 24 ರಂದು ನಡೆದ ರಾಜ್ಯ ಸಮ್ಮೇಳನ ಸಂಕ್ಷಿಪ್ತ ಅಧಿವೇಶನ ನಡೆಸಿ 13 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಹಾಗೂ ಮಹಾಧಿವೇಶನಕ್ಕೆ 5 ಪ್ರತಿನಿಧಿಗಳನ್ನು ಹಾಗೂ ಒಬ್ಬ ವೀಕ್ಷಕರನ್ನು ಆರಿಸಿತು. ಮಹಮ್ಮದ್ ತರಿಗಾಮಿ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಸಮ್ಮೇಳನಕ್ಕೆ ಮಹಮ್ಮದ್ ತರಿಗಾಮಿ ಸಲ್ಲಿಸಿದ ವರದಿ ಕಾಶ್ಮೀರದ ಈಗಿನ ಪರಿಸ್ಥಿತಿಯ, ಇದರ ಇತಿಹಾಸದ ಹಾಗೂ ಸಿಪಿಐ(ಎಂ) ನಿಲುವಿನ ವಿವರ ನೀಡಿತು. ವರದಿಯ ಮೇಲೆ ಚರ್ಚೆ ನಡೆದು ಅದನ್ನು ಅಂಗೀಕರಿಸಲಾಯಿತು.

ಕಾಂ.ಪ್ರಕಾಶ್‌ಕಾರಟ್ ಸಮಾರೋಪ ಭಾಷಣ ಮಾಡುತ್ತಾ ಅತ್ಯಂತ ಪ್ರತಿಕೂಲಕರ ಸನ್ನಿವೇಶದಲ್ಲಿ ಧೈರ್ಯದಿಂದ ಕೆಲಸ ಮಾಡುತ್ತಿರುವ ಪಕ್ಷದ ಕಾರ್ಯಕರ್ತರನ್ನು ಅಭಿನಂದಿಸಿದರು. ಭಯೋತ್ಪಾದಕ ಹಲ್ಲೆಗಳು ಸತತವಾಗಿ ನಡೆಯುತ್ತಿದ್ದರೂ ಒಬ್ಬನೇ ಒಬ್ಬ ಸದಸ್ಯ ಪಕ್ಷ ಬಿಟ್ಟಿಲ್ಲವೆಂಬುದು ನಿಜಕ್ಕೂ ಶ್ಲಾಘನಾರ್ಹ ಎಂದರು. ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ ಪ್ರಾಣ ಬಲಿದಾನ ನೀಡಿದ ಎಂಟು ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಪ್ರಕಾಶ್ ಕಾರಟ್ ರವರು ಸಿಪಿಐ(ಎಂ) ಒಂದೆಡೆ ದೇಶದ ಐಕ್ಯತೆಯನ್ನು ರಕ್ಷಿಸುತ್ತಾ ಇನ್ನೊಂದೆಡೆ ಕಾಶ್ಮೀರಿಗಳ ಸ್ವಂತಿಕೆಯ ರಕ್ಷಣೆಗೆ, ಕಾಶ್ಮೀರ ಸಮಸ್ಯೆಗೆ ಸ್ವಾಯತ್ತತೆಯ ಆಧಾರದಲ್ಲಿ ರಾಜಕೀಯ ಪರಿಹಾರಕ್ಕೆ ಹೋರಾಡುತ್ತದೆ ಎಂದು ಭರವಸೆ ನೀಡಿದರು.

ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳು

1943-48	ಪಿ.ಸಿ. ಜೋಷಿ
1948-50	ಬಿ.ಟಿ. ರಣದಿವೆ
1950-51	ಸಿ. ರಾಜೇಶ್ವರರಾವ್
1951-62	ಅಜಯಘೋಷ್
1962-64	ಇ.ಎಂ.ಎಸ್. ನಂಬೂದಿರಿಪ್ಪಾಡ್
1964-78	ಪಿ.ಸುಂದರಯ್ಯ
1978-92	ಇ.ಎಂ.ಎಸ್. ನಂಬೂದಿರಿಪ್ಪಾಡ್
1992ರಿಂದ	ಹರ್ಕಿಷನ್ ಸಿಂಗ್ ಸುರ್ಜಿತ್

1925 ಡಿಸೆಂಬರ್‌ನಲ್ಲಿ ಭಾರತದಲ್ಲಿ ಆಗ ಕೆಲಸ ಮಾಡುತ್ತಿದ್ದ ವಿವಿಧ ಕಮ್ಯುನಿಸ್ಟ್ ಗುಂಪುಗಳ ಒಂದು ಸಮ್ಮೇಳನ ಕಾನ್‌ಪುರದಲ್ಲಿ ನಡೆಯಿತು. ಈ ಸಮ್ಮೇಳನ ಆರಿಸಿದ ಕೇಂದ್ರ ಕಾರ್ಯಕಾರಿ ಸಮಿತಿಗೆ ಎಸ್.ವಿ. ಘಾಟೆ ಹಾಗೂ ಜೆ.ಪಿ. ಬಗ್ಗೇರಹಟ್ಟಿರನ್ನು ಕಾರ್ಯದರ್ಶಿಗಳಾಗಿ ಆರಿಸಲಾಯಿತು. ನಂತರ 1930-31ರಲ್ಲಿ ಮೀರತ್ ಪಿತೂರಿ ಮೊಕದ್ದಮೆ ಬಂಧಿಗಳ ಬಿಡುಗಡೆಯ ನಂತರ ಒಂದು ತಾತ್ಕಾಲಿಕ ಕೇಂದ್ರ ಸಮಿತಿ ರಚಿಸಿಕೊಂಡಿತು. ಡಾ. ಜಿ. ಅಧಿಕಾರಿ ಇದರ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ರಾಜಸ್ತಾನ: ಸಾಮೂಹಿಕ ಹೋರಾಟಗಳ ಮೂಲಕ ಸ್ಥಗಿತತೆ ನಿವಾರಣೆ

ಮಾರ್ಚ್ 8-10ರವರೆಗೆ ಸಿಕಾರ್‌ನಲ್ಲಿ ನಡೆದ 15ನೇ ರಾಜಸ್ತಾನ್ ರಾಜ್ಯ ಸಮ್ಮೇಳನ ಜನಗಳ ನಡುವೆ ವ್ಯವಸ್ಥಿತ ಪ್ರಜ್ಞಾಪೂರ್ವಕ ಕೆಲಸಗಳ ಮೂಲಕ ಸ್ಥಗಿತತೆಯನ್ನು ನಿವಾರಿಸಿಕೊಳ್ಳಬೇಕೆಂದು ನಿರ್ಧರಿಸಿದೆ. ಸಮ್ಮೇಳನದ ಆರಂಭದಲ್ಲಿ ಮಾರ್ಚ್ 8 ರಂದು 10 ಸಾವಿರ ಕಾರ್ಮಿಕರು, ರೈತರು ಭಾಗವಹಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸುರ್ಜಿತ್ ಮಾತನಾಡಿದರು.

ರಾಜ್ಯ ಕಾರ್ಯದರ್ಶಿ ಹರಿರಾಂ ಚೌಹಾಣ್ ರವರು ವರದಿ ಮಂಡಿಸಿದರು. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲುಳಿಯಲು ನಡೆಸುತ್ತಿರುವ ತಂತ್ರಗಳು, ಅದರ ಮತ್ತು ಕಾಂಗ್ರೆಸ್‌ನ ವರ್ಗ ಸ್ವಭಾವ ಬಯಲಾಗುತ್ತಿರುವುದು, ಜನತಾದಳದ ವಿಘಟನೆ ಇತ್ಯಾದಿಗಳನ್ನು ವಿಶ್ಲೇಷಿಸಿದ ವರದಿ ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಸದಸ್ಯತ್ವ ಕಡಿಮೆಯಾಗುತ್ತಿರುವುದರ ಬಗ್ಗೆ ತೀವ್ರ ಆತ್ಮವಿಮರ್ಶೆ ನಡೆಸಿತು. ಮುಂದೆ ರಾಜ್ಯದಲ್ಲಿ ಪಕ್ಷದ ಬಲವರ್ಧಿಸುವ ಪ್ರಯತ್ನಗಳ ಹಿನ್ನೆಲೆಯಲ್ಲಿ ರಾಜ್ಯದ ಒಟ್ಟು ಪರಿಸ್ಥಿತಿಯ ವಿಶ್ಲೇಷಣೆ ಮಾಡಿತು. ಸುಮಾರು 60 ಪ್ರತಿನಿಧಿಗಳು ವರದಿಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿದರು.

ಚರ್ಚೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡುತ್ತಾ ಸುರ್ಜಿತ್ ಸಂಘಟನಾ ದೌರ್ಬಲ್ಯ ರಾಜ್ಯದಲ್ಲಿ ಪಕ್ಷದ ಹಳೆಯ ಸಮಸ್ಯೆ, ಅದನ್ನು ಆದಷ್ಟು ಬೇಗ ನಿವಾರಿಸಬೇಕು ಎಂದರು. ಜನಗಳ ನಡುವೆ ಕೆಂಬಾವುಟದ ಬಗ್ಗೆ ಬಹಳ ಗೌರವವಿದೆ. ಅದನ್ನು ಪಕ್ಷದ ಪ್ರಭಾವದ ರೂಪಕ್ಕೆ ಪರಿವರ್ತಿಸಬೇಕಾಗಿದೆ ಎಂದರು.

ಸಮ್ಮೇಳನ 26 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಆರಿಸಿತು. ಹರಿರಾಂ ಚೌಹಾಣ್ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆ ಗೊಂಡರು.

ಸಮಾರೋಪ ಭಾಷಣ ಮಾಡುತ್ತಾ ಪ್ರಕಾಶ್ ಕಾರಟ್ ರವರು ಪಕ್ಷದ ವಿವಿಧ ಸಮಸ್ಯೆಗಳನ್ನು ಹಿಂದಿನ ರಾಜ್ಯ ಸಮ್ಮೇಳನದಲ್ಲಿ ಗಮನಿಸಿದ್ದರೂ ಪರಿಸ್ಥಿತಿ ಸುಧಾರಿಸಲಿಲ್ಲ, ಕೇವಲ ಪರಾಮರ್ಶೆ, ಟೀಕೆಗಳಿಂದಲೇ ಪ್ರಯೋಜನವಿಲ್ಲ ಎಂದರು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯ ಬಲದಲ್ಲಿ ಸರಿಯಾದ ಅನುಪಾತ ಇರಬೇಕು, ಮಹಿಳೆಯರ ಪಾತ್ರವನ್ನು ಶಕ್ತಿಯನ್ನು ಗುರುತಿಸಬೇಕು ಎಂದು ಹೇಳಿದರು. ಒಟ್ಟು 198 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 18 ಮಹಿಳೆಯರು.

ಬ್ರಿಟನ್: ಭಾರತೀಯ ಕಮ್ಯುನಿಸ್ಟರ 11ನೇ ಸಮ್ಮೇಳನ

ಸಿಪಿಐ(ಎಂ)ನ ಒಂದು ಅಂಗ ಸಂಘಟನೆಯಾದ "ಭಾರತೀಯ ಕಮ್ಯುನಿಸ್ಟರ ಸಂಘ-ಗ್ರೇಟ್ ಬ್ರಿಟನ್" (AIC-GB) 11ನೇ ಸಮ್ಮೇಳನ ಬ್ರಿಟನ್ನಿನ ಎರಡನೇ ಅತಿ ದೊಡ್ಡ ನಗರ ಬರ್ಮಿಂಗ್ ಹ್ಯಾಮ್‌ನಲ್ಲಿ ಜನವರಿ 22ರಂದು ನಡೆಯಿತು. ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಉದ್ಘಾಟಿಸಿದರು. ಸಂಘಟನೆಯ ತಾತ್ಕಾಲಿಕ ಕಾರ್ಯದರ್ಶಿ ಅವತಾರ್ ಸಾದಿಕ್ ಮಂಡಿಸಿದ ವರದಿ ಸಂಘಟನೆಯ ಕಳೆದ ಎರಡೂವರೆ ವರ್ಷಗಳ ಚಟುವಟಿಕೆಗಳನ್ನು ವಿಮರ್ಶಿಸಿತು. ಸಮಾಜವಾದಕ್ಕಾದ ಹಿನ್ನಡೆಯ ಬಗ್ಗೆ ಹೇಳುತ್ತಾ ವರದಿ ಬಂಡವಾಳಶಾಹಿ ದೇಶಗಳಲ್ಲಿನ ಬಿಕ್ಕಟ್ಟಿನ ಬಗ್ಗೆಯೂ ವಿಶ್ಲೇಷಿಸಿತು. ನಿರುದ್ಯೋಗಿಗಳ, ಬಡವರ, ನಿರ್ವಸಿತರ ಸಂಖ್ಯೆ ಹೆಚ್ಚುತ್ತಲಿದೆ. ಅಪರಾಧಗಳು, ಹಿಂಸಾಚಾರ ಹೆಚ್ಚುತ್ತಿದೆ. ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳ ಜನ ಹೇಗೆ ಬಹುರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಆಂದೋಲನಕ್ಕಿಳಿದಿದ್ದಾರೆ ಎಂದೂ ವರದಿ ವಿವರಿಸಿತು. ಬ್ರಿಟನ್ನಿನಲ್ಲಿ ಲೇಬರ್ ಪಕ್ಷ ಬಂಡವಾಳಶಾಹಿ ವ್ಯವಸ್ಥೆಯನ್ನು ರಕ್ಷಿಸಲು ಹೊಸ ಹೊಸ ನಿಲುವು ತಳೆಯುತ್ತಿದೆ. ಸಮಾಜವಾದಿ ವಿಚಾರಗಳನ್ನೆಲ್ಲಾ ತನ್ನ ಕಾರ್ಯಕ್ರಮದಿಂದ ಹೊರಗಿಡುತ್ತಿದೆ, ಅದರ ಕಾರ್ಮಿಕ ಸಂಘಟನೆ ತನ್ನ ಸಮರಧೀರ ಸ್ವರೂಪವನ್ನು ಬಿಟ್ಟುಕೊಟ್ಟಿದೆ ಎಂದು ವರದಿ ಖೇದ ವ್ಯಕ್ತಪಡಿಸಿತು. ಏಷ್ಯನ್ ಜನರ ಮೇಲೆ ಗುರಿಯಿಟ್ಟ ಜನಾಂಗವಾದ ಬ್ರಿಟನ್ ಮತ್ತು ಯುರೋಪಿನ ಇತರೆಡೆ ಹರಡುತ್ತಿದೆ ಎಂದ ವರದಿ ಅದರ ವಿರುದ್ಧ ತಮ್ಮ ಸಂಘಟನೆ ನಡೆಸಿರುವ ಪ್ರತಿ ರೋಧಗಳ ಬಗ್ಗೆ ತಿಳಿಸಿತು. ಬ್ರಿಟನ್ನಿನಲ್ಲಿ ಎಲ್ಲಾ ಕಮ್ಯುನಿಸ್ಟರನ್ನು ಮತ್ತೆ ಒಂದೆಡೆಗೆ ತರಲು ಸಂಘಟನೆ ಪ್ರಯತ್ನ ನಡೆಸಿತು.

ಕಳೆದ ಕೆಲವು ವರ್ಷಗಳೂ ಈ ಸಂಘಟನೆಯ ಸದಸ್ಯ ಬಲವೂ ಹೆಚ್ಚಿದೆ. ಒಖ್ ಮೂಲಭೂತವಾದಕ್ಕೆ ಹಿಂದೆ ಯಾರೂ ಹೋಗಿದ್ದಾರವರಲ್ಲಿ ಹಲವರು ಈಗ ಭ್ರಮನಿರಸನ ಗೊಳ್ಳುತ್ತಿದ್ದಾರೆ. ಪರಿಣಾಮವಾಗಿ ಹುಂಡೆರ್ಸ್ ಫೀಲ್ಡ್ ಎಂಬಲ್ಲಿ ಈ ಸಂಘಟನೆ ಹೊಸ ಶಾಖೆಯೊಂದು ಆರಂಭವಾಯಿತು. ಇದೇ ರೀತಿ ಬ್ರೆಡ್‌ಫೋರ್ಡ್ ಎಂಬಲ್ಲೂ ಇನ್ನೊಂದು ಶಾಖೆ ಆರಂಭವಾಗಲಿದೆ.

ಅವತಾರ್ ಸಾದಿಕ್ ಹಾಗೂ ಹರಸೇವ್‌ಬಸ್ಸ್‌ರನ್ನು 15ನೇ ಮಹಾಧಿವೇಶನಕ್ಕೆ ಪ್ರತಿನಿಧಿಗಳಾಗಿ ಹಾಗೂ ಮಹಿಂದರ್ ಘರ್ಮಾರನ್ನ ವೀಕ್ಷಕರಾಗಿ ಆರಿಸಲಾಯಿತು. 23 ಸದಸ್ಯ ಬಲದ AIG-GBಯ ಕೇಂದ್ರ ಸಮಿತಿಯನ್ನು ಆರಿಸಲಾಯಿತು. ಅವತಾರ್ ಸಾದಿಕ್ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

"ರಾಜ್ಯದ ಬೆಳವಣಿಗೆಗೆ ಕನಿಷ್ಠ" ಕಾರ್ಯಕ್ರಮವಾದರೂ ರೂಪಿಸಿ

ರಾಜ್ಯಪಾಲರ ಭಾಷಣದ ಮೇಲೆ ವಂದನಾ ಚರ್ಚೆಯಲ್ಲಿ ಕಾಂ. ಜಿ.ವಿ.ಶ್ರೀರಾಮರೆಡ್ಡಿ

"ಕಳೆದ 4 ತಿಂಗಳಲ್ಲಿ ಜನತಾದಳ ಸರ್ಕಾರ ಎರಡನೇ ಬಾರಿಗೆ ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸತಕ್ಕ ಚರ್ಚೆಯನ್ನು ಮಾಡುತ್ತಿದೆ.... ಪ್ರಥಮ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದಂತಹ ಹೆಚ್ಚಿನ ಅಂಶಗಳೇ ಇದರಲ್ಲಿಯೂ ಪ್ರಸ್ತಾವನೆಯಾಗಿವೆ. ಯಾವುದೇ ರೀತಿಯ ಹೊಸ ವಿಚಾರಗಳು ಇದರಲ್ಲಿ ಇಲ್ಲ, ನಿರ್ದಿಷ್ಟವಾದ ಗುರಿಯಿಲ್ಲ, ಏನನ್ನು ಮಾಡಬೇಕೆಂಬ ಯಾವ ಸಂದರ್ಭದಲ್ಲಿ, ಯಾವ ಸಮಸ್ಯೆಯನ್ನು ಯಾವ ಹಂತದಲ್ಲಿ ಹೇಗೆ ನಿವಾರಣೆ ಮಾಡಬೇಕೆಂಬ ಬಗ್ಗೆ ಸ್ಪಷ್ಟವಾದ ಗುರಿ ಕೂಡಾ ಇಲ್ಲ" ಎಂದು ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸುತ್ತಾ ಸಿಪಿಐ(ಎಂ)ನ ಕಾಂ. ಶ್ರೀರಾಮರೆಡ್ಡಿ ಟೀಕಿಸಿದ್ದಾರೆ.

ಅವರು ಬಜೆಟ್ ಮೇಲಿನ ಭಾಷಣದಲ್ಲಿ ಹೇಳಿದ್ದನ್ನು ನೆನಪಿಸುತ್ತಾ ಭೌತಿಕ ಹಾಗೂ ಬೌದ್ಧಿಕ ದಾರಿದ್ರ್ಯ ನಿವಾರಣೆಯ ನಿಟ್ಟಿನಲ್ಲಿ ಸರ್ಕಾರದ ಧೋರಣೆ ಸ್ಪಷ್ಟವಾಗಿಲ್ಲ ಎಂದು ಪುನರುಚ್ಚರಿಸಿದರು. ಇದರಲ್ಲಿ ಬೌದ್ಧಿಕ ದಾರಿದ್ರ್ಯ ಕುರಿತಂತೆ ಧೋರಣೆಯ ಅಸ್ಪಷ್ಟತೆಗೆ ಉದಾಹರಣೆಯಾಗಿ 'ಮಹಾಚೈತ್ರ'ವನ್ನು ಪಠ್ಯಪುಸ್ತಕವಾಗಿ ವಾಪಸು ತಗೊಂಡ ಘಟನೆಯನ್ನು ಪ್ರಸ್ತಾಪಿಸಿ ನಮ್ಮ ರಾಜ್ಯದಲ್ಲಿ ಬೌದ್ಧಿಕ ಬೆಳವಣಿಗೆಯಾಗ ತಕ್ಕ ದೃಷ್ಟಿಯಾಗಲೀ ಅಥವಾ ಅದನ್ನು ಬೆಳೆಸತಕ್ಕ ವಿಷಯವಾಗಲಿ ಈ ಸರ್ಕಾರದ ಮುಂದೆ ಇಲ್ಲ" ಎಂದು ಕಟುವಾಗಿ ಟೀಕಿಸಿದರು. ಆಗ ಬಿಜೆಪಿಯ ಪ್ರಮೀಳಾ ನೇಸರ್ಗಿ 'ಪಾಯಿಂಟ್ ಆಫ್ ಆರ್ಡರ್' ಎತ್ತಿ ಸರ್ಕಾರದ ಈ ಕ್ರಮದ ಸಮರ್ಥನೆಗೆ ಧಾವಿಸಿದರು! ಇನ್ನೂ ಇಬ್ಬರು ಸದಸ್ಯರು 'ಮಹಾಚೈತ್ರ'ದಲ್ಲಿ ಬಸವಣ್ಣನವರಿಗೆ ಅಲ್ಲಮಪ್ರಭುಗಳಿಗೆ, ಅಕ್ಕ ಮಹಾದೇವಿಯವರಿಗೆ ಅವಹೇಳನ ಮಾಡಲಾಗಿದೆ ಎಂದರು.

ಆದರೆ 'ಮಹಾಚೈತ್ರ'ದಲ್ಲಿ ಅಂತಹುದೇನೂ ಇಲ್ಲ ಎಂದು ಮುಂದುವರಿಸಿದ ಶ್ರೀರಾಮರೆಡ್ಡಿಯವರು "ಮಹಾಚೈತ್ರ"ದ ವಿರೋಧಿಗಳ ತರ್ಕವನ್ನು ಬಯಲಿಗೆಳೆಯುತ್ತಾ "ಸರ್ಕಾರ ಇವತ್ತು ತಪ್ಪು ಮಾಹಿತಿ ಕೊಡುತ್ತಿದೆ. ಒಂದು ಕಡೆ ಕಾನೂನು ದೃಷ್ಟಿ, ಇನ್ನೊಂದು ಕಡೆ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿ, ಇನ್ನೊಂದು ಕಡೆ ಚರಿತ್ರೆಯನ್ನು ತನ್ನ ಮೂಗಿನ ನೇರಕ್ಕೆ ಬರೆಯಬೇಕೆನ್ನುವ ದೃಷ್ಟಿ ಈ ಮೂರು ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳನ್ನು ಪ್ರತಿಪಾದನೆ ಮಾಡುತ್ತ ಇರತಕ್ಕಂಥ ಶಕ್ತಿಗಳು ಇವತ್ತು ಈ ಪುಸ್ತಕವನ್ನು ವಾಪಸ್ ಪಡೆದಿವೆ.... ಇದರ ಹಿಂದೆ ಇರುವ ತಾತ್ವಿಕ ಧೋರಣೆಯನ್ನು ನಾವು ನೋಡಬೇಕಾಗುತ್ತದೆ......

........ತನ್ನ ಆಲೋಚನಾ ಶಕ್ತಿಯನ್ನು ತನ್ನ ವಿವೇಚನಾಶಕ್ತಿಯನ್ನು ಕಳೆದುಕೊಂಡಂತಹ ಯಾವುದೇ ಒಂದು ರಾಜ್ಯ ಯಾವುದೇ ದೃಷ್ಟಿಯಲ್ಲಿ ಬೆಳೆಯುವುದಕ್ಕೆ ಸಾಧ್ಯವಿಲ್ಲ" ಎಂದು ಎಚ್ಚರಿಸಿದರು.

"ನಮ್ಮ ರಾಜ್ಯದ ಬೌದ್ಧಿಕ ಚಿಂತನೆಗೆ ಈ ಸರ್ಕಾರ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಹಾಕಿರತಕ್ಕ ಕೊಡಲಿ ಪೆಟ್ಟು ಇದು. ಇದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ" ಎಂದ ಶ್ರೀರಾಮರೆಡ್ಡಿಯವರು ನಂತರ ಕೈಗಾರಿಕಾ ರಂಗ, ಕೃಷಿ ರಂಗ, ಗ್ರಾಮೀಣ ಜನರ, ಮಹಿಳೆಯರ ಸಮಸ್ಯೆಗಳತ್ತ ಗಮನ ಇತ್ಯಾದಿಗಳಲ್ಲಿ ಸರ್ಕಾರದ ನಿಲುವುಗಳಲ್ಲಿ ಇರುವ ಲೋಪದೋಷಗಳತ್ತ ಗಮನ ಸೆಳೆದರು-ಜನಸಾಮಾನ್ಯರ ಸಮಸ್ಯೆಗಳ, ಮುಖ್ಯವಾಗಿ ಬರದ ಜಿಲ್ಲೆಯಾದ ಕೋಲಾರದ ಜನತೆಯ ಸಮಸ್ಯೆಗಳ ಉದಾಹರಣೆಗಳನ್ನು ನೀಡಿದರು.

"ನಮ್ಮದು ಒಕ್ಕೂಟ ವ್ಯವಸ್ಥೆ. ಕೃಷಿ ಬೆಲೆ ನೀತಿ, ಕೃಷಿ ನೀತಿ, ಕೈಗಾರಿಕಾ ನೀತಿ ಇವೆಲ್ಲಾ ಮೂಲಭೂತವಾಗಿ ಚರ್ಚೆಯಾಗಿ ರೂಪಿತಗೊಳ್ಳಬೇಕಾದ್ದು ಲೋಕಸಭೆಯಲ್ಲಿ" ಎಂದು ಅಧ್ಯಕ್ಷರು ಮಧ್ಯೆ ಹೇಳಿದಾಗ ಕಾಂ. ಶ್ರೀರಾಮರೆಡ್ಡಿಯವರು "ಆ ಮೂಲಭೂತ ಸಮಸ್ಯೆ ಪರಿಹಾರ ಮಾಡಲಿಕ್ಕೆ ರಾಜ್ಯ ಸರಕಾರಕ್ಕೆ ಅಧಿಕಾರ ಇಲ್ಲ ಎಂದು ನನಗೆ ಸ್ಪಷ್ಟವಾಗಿ ಗೊತ್ತಿದೆ. ಆದರೆ ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ತನ್ನ ಕರ್ತವ್ಯ ಮಾಡಬೇಕು, ಕೃಷಿ ಕಾರ್ಮಿಕರ ಕೃಷಿ ವೇತನದ ಪ್ರಶ್ನೆಯನ್ನು 9ನೇ ಶೆಡ್ಯೂಲಿಗೆ ಸೇರಿಸಲು ಏಕೆ ಕರ್ನಾಟಕ ಸರ್ಕಾರ ಒತ್ತಾಯ ಮಾಡಬಾರದು? ಭೂಮಿಯನ್ನು ಹಂಚಿಕೆ ಮಾಡುವ ಪ್ರಶ್ನೆಯನ್ನು ೯ನೇ ಶೆಡ್ಯೂಲಿಗೆ ಸೇರಿಸುವಂತೆ ಏಕೆ ನಮ್ಮ ಸರ್ಕಾರ ಒತ್ತಾಯ ಮಾಡಬಾರದು? ಇದು ರಾಜ್ಯ ಸರಕಾರದ ವ್ಯಾಪ್ತಿಗೆ ಬರುತ್ತದೆ. ವಿದ್ಯುತ್ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ, ರೈತನಿಗೆ ಒಳ್ಳೆ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡುವುದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಇವನ್ನು ಮಾಡಬಹುದಲ್ಲ" ಎಂದು ಪ್ರಶ್ನಿಸಿದರು.

ಇಡೀ ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆ ಮಾಡಲು ರಾಜ್ಯ ಸರಕಾರದಿಂದ ಸಾಧ್ಯವಿಲ್ಲ ನಿಜ. ಆದರೆ ಜನ ಮತ ನೀಡಿರುವಾಗ ಪರ್ಯಾಯವಾದ ವ್ಯವಸ್ಥೆಯ ಬಗ್ಗೆಯಾದರೂ ಹೇಳಬೇಕು, ಆ ದಿಕ್ಕಿನಲ್ಲಿ ಯೋಚನೆಯನ್ನಾದರೂ ಮಾಡಬೇಕು, ರಾಜ್ಯದ ಬೆಳವಣಿಗೆಯ ಒಂದು ಕಾರ್ಯಕ್ರಮವನ್ನಾದರೂ ರೂಪಿಸಬೇಕಾಗಿತ್ತು, ಇದನ್ನು ಮಾಡಿಲ್ಲ ಎಂದು ಶ್ರೀರಾಮರೆಡ್ಡಿಯವರು ಒತ್ತಿ ಹೇಳಿದರು.

ವಿಕೇಂದ್ರೀಕರಣದ ಪ್ರಶ್ನೆಯಲ್ಲೂ "ನನ್ನ ರಾಜ್ಯವೇ ಮೊಟ್ಟಮೊದಲನೆಯಯದು" ಎಂದು ಹೇಳುವುದು ಸರಿಯಲ್ಲ, ಏಕೆಂದರೆ ಇಲ್ಲಿ ಬಂದಿರುವುದು 1985-86ರಲ್ಲಿ, ಆದರೆ 1978ರಲ್ಲೇ ದೇಶದಲ್ಲೇ ಮೊಟ್ಟಮೊದಲು ಪಶ್ಚಿಮ ಬಂಗಾಳ ಸರ್ಕಾರ ಅಧಿಕಾರ ವಿಕೇಂದ್ರೀಕರಣದ ಪಂಚಾಯತಿ ವ್ಯವಸ್ಥೆಯನ್ನು ತಂದದ್ದು ಎಂದು ನೆನಪಿಸಿದರು. ಪಂಚಾಯಿತೀ ರಾಜ್ಯ ವ್ಯವಸ್ಥೆಯನ್ನು ಅಪವಿತ್ರ ಮಾಡಬೇಡಿ ಎಂದೂ ಒತ್ತಾಯಿಸಿದರು.

ಹೊಸ ಸವಾಲುಗಳು ....

ಪುಟ 1ರಿಂದ

ಮಾಡಲಾರಂಭಿಸಿದ್ದರು. ಆ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸತ್ವ ನೀಡಿದ್ದರು" ಎಂದರು.

ಪಂಜಾಬು ಈ ಮೊದಲು ಎರಡು ಮಹಾಧಿವೇಶನಗಳನ್ನು (1958ರಲ್ಲಿ ಅಮೃತಸರದಲ್ಲಿ ಮತ್ತು 1978ರಲ್ಲಿ ಜಾಲಂಧರ್‌ನಲ್ಲಿ) ನಡೆಸಿದೆ. ಈಗ ಮೂರನೇ ಬಾರಿಗೆ ಮಹಾಧಿವೇಶನ ನಡೆಸುತ್ತಿರುವುದು ಗೌರವದ ವಿಷಯ ಎಂದ ಅವರು 'ಮಹಾಧಿವೇಶನಕ್ಕೆ ಸಿದ್ಧತೆಯಾಗಿ ನಾವು ರಾಜ್ಯದ ಎಲ್ಲಾ ಹಳ್ಳಿಗಳನ್ನು ತಲುಪಿದ್ದೇವೆ. ಎಲ್ಲಾ ಜನವಿಭಾಗಗಳಿಂದ ನಮಗೆ ಅಗಾಧ ಸ್ಪಂದನ ದೊರೆಯಿತು. ಕಳೆದ ಎರಡು ತಿಂಗಳಲ್ಲಿ ಪಕ್ಷಕ್ಕೆ 50ಲಕ್ಷ ರೂ.ಗಳಷ್ಟು ಸಂಗ್ರಹಿಸಲು ಸಾಧ್ಯವಾಗಿದೆ. ಪ್ರತಿಯೊಂದು ಘಟಕವೂ ತನ್ನ ಕೋಟಾ ಪೂರೈಸಿದೆ. ಸಿಪಿಐ(ಎಂ)ನ ಸಂದೇಶ ಎಲ್ಲಾ ಜನವಿಭಾಗಗಳಿಗೆ ತಲುಪಿದೆ" ಎಂದು ಹೇಳಿದರು.

ಕಲಾಪಗಳ ಆರಂಭ

ಸ್ವಾಗತ ಭಾಷಣದ ನಂತರ ಏಳು ಸದಸ್ಯರುಳ್ಳ ಅಧ್ಯಕ್ಷ ಮಂಡಳಿಯನ್ನು ಚುನಾಯಿಸಲಾಯಿತು. ಜ್ಯೋತಿಬಸು, ಆರ್. ಉಮಾನಾಥ್, ಕನಕ್ ಮುಖರ್ಜಿ, ನೂರುಲ್ ಹುದಾ, ಪಿನರಾಯಿ ವಿಜಯಾನ, ಅಘೋರ್ ದೇಬ್ ಬರ್ಮಾ ಮತ್ತು ಬಿ.ವಿ. ರಾಘವಲು ಅಧ್ಯಕ್ಷ ಮಂಡಳಿಗೆ ಚುನಾಯಿತರಾದರು. ಆರ್. ಉಮಾನಾಥ್ ಶ್ರದ್ಧಾಂಜಲಿ ನಿರ್ಣಯಗಳನ್ನು ಮಂಡಿಸಿದರು. ಮೊದಲ ನಿರ್ಣಯದ ಮೂಲಕ ಭಾರತೀಯ ಕಮ್ಯುನಿಸ್ಟ್ ಆಂದೋಲನದ ಸಂಸ್ಥಾಪಕರಲ್ಲೊಬ್ಬರಾಗಿದ್ದ ಏಪ್ರಿಲ್ 1992ರಲ್ಲಿ ನಿಧನರಾದ ಸಿಪಿಐ(ಎಂ) ಮುಖಂಡ ಎಂ. ಬಸವಪುನ್ನಯ್ಯರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಅಚಿಂತ್ಯ ಭಟ್ಟಾಚಾರ್ಯ, ಮನೋರಂಜನ್ ರಾಯ್, ರೊಬಿನ್‌ಸೆನ್ ಹಾಗೂ ಕಳೆದ ಮೂರು ವರ್ಷಗಳಲ್ಲಿ ನಿಧರಾದ ವಿವಿಧ ರಾಜ್ಯ ಸಮಿತಿಗಳ ಹಿರಿಯ ಮುಖಂಡರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸೋದರ ಪಕ್ಷಗಳ ಮುಖಂಡರಾದ ಸಿ.ರಾಜೇಶ್ವರರಾವ್, ಕಿಮ್ ಇಲ್ ಸುಂಗ್, ಎರಿಕ್ ಹೊನೇಕರ್, ಜೋಸ್ಲೋವ್ಸೋ, ಕ್ರಿಸ್ ಹನಿ, ಲಿಕ್ಸಿಯಾನ್ ಯಾನ್, ಮದನ್ ಭಂಡಾರಿ, ಜೀವರಾಜ್ ಆಶ್ರಿತ್ ಮತ್ತು ಕಾಯ್ಲೀನೆ ಪೋಮ್‌ವಿಹಾನೆಯವರಿ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಉಮಾನಾಥ್ ರವರು ಓದಿದ ಇನ್ನೊಂದು ನಿರ್ಣಯದ ಮೂಲಕ ಮಹಾಧಿವೇಶನ ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕ ವರ್ಗ ಹಾಗೂ ಪ್ರಜಾಪ್ರಭುತ್ವ ಆಂದೋಲನದ ರಕ್ಷಣೆಯಲ್ಲಿ ಪ್ರಾಣ ತ್ಯಾಗ ಮಾಡಿದ ಪಕ್ಷದ, ಸಾಮೂಹಿಕ ಸಂಘಟನೆಗಳ ಹುತಾತ್ಮರಿಗೆ ಕೆಂಪು ನಮನ ಸಲ್ಲಿಸಿತು.

ಪೊಲಿಟ್ ಬ್ಯೂರೋವನ್ನು ಚುಕ್ಕಾಣಿ ಸಮಿತಿಯಾಗಿ ಹಾಗೂ ಚಿತ್ತಬ್ರತ್ ಮಜುಂದಾರ್, ವಿ.ವಿ. ಜಾನಕಿಮೂರ್ತಿ ಹಾಗೂ ಜಿ. ರಾಮಕೃಷ್ಣನ್ ಸದಸ್ಯರುಳ್ಳ ಅರ್ಹತಾ ಪರಿಶೀಲನಾ ಸಮಿತಿಯನ್ನು ಆರಿಸಿದ ನಂತರ ಮಹಾಧಿವೇಶನದ ಪ್ರಮುಖ ಕಲಾಪ ಆರಂಭವಾಯಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಕರಡು ರಾಜಕೀಯ ವರದಿಯನ್ನು ಪ್ರತಿನಿಧಿಗಳ ಮುಂದೆ ಮಂಡಿಸಿದರು.

ಎಡ ಪ್ರಜಾಸತ್ತಾತ್ಮಕ ಪರ್ಯಾಯ ....

ಪುಟ 1 ರಿಂದ

ಗುತ್ತಿದೆ ಎಂದರು. ದೇಶದ ಸ್ವಾವಲಂಬನೆಯನ್ನು ನಾಶಮಾಡುತ್ತಿರುವ, ಜನಗಳನ್ನು ದರಿದ್ರರಾಗಿಸುತ್ತಿರುವ ಹೊಸ ಆರ್ಥಿಕ ನೀತಿಗಳು ಒಡ್ಡಿರುವ ಸವಾಲುಗಳನ್ನು ಮತ್ತು ಕೇವಲ ಅಲ್ಪಸಂಖ್ಯಾತರ ಮೇಲೆ ಗುರಿಯಿಟ್ಟಿರುವುದಷ್ಟೇ ಅಲ್ಲ ಒಂದು ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಭಾರತದ ಅಸ್ತಿತ್ವಕ್ಕೆ ಸಂಚಾಕಾರ ತಂದಿರುವ ಕೋಮುವಾದಿ ಶಕ್ತಿಗಳಿಂದ ಬಂದಿರುವ ಸವಾಲುಗಳನ್ನು ಎದುರಿಸಬೇಕಾಗಿದೆ. ಸಿಪಿಐ(ಎಂ) ಈ ಎರಡರ ವಿರುದ್ಧವೂ ಹೋರಾಟದಲ್ಲಿ ಅಗ್ರ ಪಂಕ್ತಿಯಲ್ಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೋಮುವಾದಿ ಶಕ್ತಿಗಳ ಬಲ ಹೆಚ್ಚಿದೆ. ಇಂದು ದೇಶ ಎದುರಿಸುತ್ತಿರುವ ಅತಿ ದೊಡ್ಡ ಅಪಾಯವೆಂದರೆ ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನಾ ಕೂಟದ ಹಾಗೂ ಗುಜರಾತ್ ದಲ್ಲಿ ಬಿಜೆಪಿಯ ವಿಜಯದಲ್ಲಿ ಕಂಡು ಬರುತ್ತಿರುವ ಕೋಮುವಾದಿಗಳ ಪುನರುಜ್ಜೀವನ. ಸಿಪಿಐ(ಎಂ) ತನ್ನ 13ನೇ ಮಹಾಧಿವೇಶನದಲ್ಲಿ ಬಿಜೆಪಿಯ ಅಪಾಯವನ್ನು ಎತ್ತಿ ತೋರಿ ಕಾಂಗ್ರೆಸ್(ಐ)ನ್ನು ಸೋಲಿಸಿ, ಬಿಜೆಪಿಯನ್ನು ಮೂಲೆಗೊತ್ತಿ ಎಂದು ಕರೆ ನೀಡಿತ್ತು. ನಂತರ 14ನೇ ಮಹಾಧಿವೇಶನದ ಕಾಂಗ್ರೆಸ್(ಐ) ಮತ್ತು ಬಿಜೆಪಿ ಎರಡನ್ನೂ ಸೋಲಿಸಿ ಎಂದು ಕರೆ ನೀಡಿತ್ತು, ಅಂದಿನಿಂದ ಬಿಜೆಪಿ ಮತ್ತಷ್ಟು ಬೆಳೆದಿದೆ ಮತ್ತು "ಪ್ರಧಾನ ಶತ್ರು ಯಾರು ಎಂಬ ಪ್ರಧಾನ ಪ್ರಶ್ನೆಯ ಬಗ್ಗೆ ಈ ಮಹಾಧಿವೇಶನ ಅಂತಿಮವಾಗಿ ನಿರ್ಣಯಿಸಬೇಕಾಗಿದೆ" ಎಂದು ಸುರ್ಜಿತ್ ಹೇಳಿದರು.

ಈ ಬಗ್ಗೆ ವಿಸ್ತಾರವಾಗಿ ಹೇಳುತ್ತಾ ಸುರ್ಜಿತ್ ಪ್ರಧಾನ ಶತ್ರು ಯಾರು ಎಂಬುದು ನಿರ್ದಿಷ್ಟ ಸಮಯದ ನಿರ್ದಿಷ್ಟ ಸನ್ನಿವೇಶವನ್ನು ಅವಲಂಬಿಸಿದೆ ಎಂದರು. ಪಕ್ಷದ ಮುಂದಿರುವ ಪ್ರಶ್ನೆಯೆಂದರೆ ದೇಶದಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಉದಯವನ್ನು ತಡೆಯಲು ಮಧ್ಯ ಪ್ರವೇಶ ಮಾಡುವುದು ಹೇಗೆ ಎಂಬುದರತ್ತ ಬೊಟ್ಟು ಮಾಡುತ್ತಾ ಅವರು ನಾವು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ಕೇಂದ್ರೀಕರಿಸಬೇಕು, ಇದರಲ್ಲಿ ಕಾಂಗ್ರೆಸ್ಸಿಗರನ್ನು ಕೂಡಾ ಅಣಿನೆರೆಸಬೇಕು ಎಂದರು. "ಯಾವ ನಿರ್ಣಾಯಕ ಗಳಿಗೆಯಲ್ಲಿ ಯಾರು ಪ್ರಧಾನ ಶತ್ರು ಎಂದು ತಿಳಿದು ಮಧ್ಯಪ್ರವೇಶಿಸಬೇಕು. ಈ ಬಗ್ಗೆ ಅಂತಿಮ ನಿರ್ಣಯಕ್ಕೆ ಬರಬೇಕು" ಎಂದು ಸುರ್ಜಿತ್ ಪದೇ ಪದೇ ಒತ್ತಿ ಹೇಳಿದರು.

ಕೋಮುವಾದದ ವಿರುದ್ಧ ಹೋರಾಡುವಾಗ ಅಲ್ಪಸಂಖ್ಯಾಕ ಕೋಮುವಾದದ ವಿರುದ್ಧವೂ ಸೆಣಸಬೇಕಾದ್ದು ಅಗತ್ಯ, ಏಕೆಂದರೆ ಅದು ಬಹುಸಂಖ್ಯಾಕ ಕೋಮುವಾದಕ್ಕೆ ಪೂರಕವಾಗಿದೆ ಎಂದೂ ಈ ಸಂದರ್ಭದಲ್ಲಿ ಸುರ್ಜಿತ್ ಒತ್ತಿ ಹೇಳಿದರು.

ಎಡಶಕ್ತಿಗಳ ಮಧ್ಯಪ್ರವೇಶ ಅತ್ಯಗತ್ಯ

ಪ್ರಸ್ತುತ ಸನ್ನಿವೇಶದಲ್ಲಿ ಕೋಮುವಾದದ ಬೆಳವಣಿಗೆಯನ್ನು ಎದುರಿಸಲು, ಹೊಸ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಲು ಎಡಶಕ್ತಿಗಳು ಮಧ್ಯ ಪ್ರವೇಶಿಸಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಾ ಹೊಸ ಪ್ರಚಾರ-ಪ್ರಕ್ಷೋಭೆಗಳನ್ನು, ಆಂದೋಲನಗಳನ್ನು ಹರಿಯಬಿಡಬೇಕು ಎಂದು ಅವರು ಹೇಳಿದರು.. ಅದೇ ರೀತಿ ಬಂಡವಾಳಶಾಹಿ ಪ್ರತಿಪಕ್ಷಗಳೊಂದಿಗೆ ನಮಗೆ ಮೂಲಭೂತ ಭಿನ್ನಾಭಿಪ್ರಾಯವಿದ್ದರೂ ಜಾತ್ಯಾತೀತ ಪಕ್ಷಗಳೊಡನೆ ಸಹಕರಿಸುವುದು ಕೂಡಾ ಅಗತ್ಯ ಎಂದರು. ಜನತಾದಳ ಹಾಗೂ ಇತರ ಜಾತ್ಯಾತೀತ ಶಕ್ತಿಗಳು ಒಂದು ಸುಸಂಗತ ನೀತಿ ಹೊಂದಿಲ್ಲ ಎಂದು ಖೇದ ವ್ಯಕ್ತಪಡಿಸಿದ ಅವರು ಹೀಗಿದ್ದರೂ ಕೂಡಾ ನಮ್ಮೆದುರಿರುವ ಅವಳಿ ಶತ್ರುಗಳನ್ನು ಸೋಲಿಸಲು ಅವರ ಜೊತೆಗೆ ಕೈ ಜೋಡಿಸುವ ಅವಶ್ಯಕತೆಯ ಮೇಲೆ ಒತ್ತು ನೀಡಿದರು. ಆದರೆ ಬಂಡವಾಳಶಾಹಿ ಪ್ರತಿಪಕ್ಷಗಳೊಂದಿಗೆ ಸಹಕರಿಸುವಾಗ ಸಿಪಿಐ(ಎಂ) ತನ್ನ ಮೂಲಭೂತ ವರ್ಗ ನಿಲುವನ್ನು ದುರ್ಬಲಗೊಳಿಸಬಾರದು, ಚುನಾವಣಾ ಮೈತ್ರಿಯಿರುವಲ್ಲಿ ಹಾಗೂ ಇಂತಹ ಸರಕಾರಗಳನ್ನು ಬೆಂಬಲಿಸುವಲ್ಲಿ ಕೂಡಾ (ಬಿಹಾರದಂತಲ್ಲಿ) ನಾವು ಸಾಮೂಹಿಕ ಹೋರಾಟಗಳನ್ನು ಬಿಟ್ಟು ಬಿಡಬಾರದು, ಏಕೆಂದರೆ ಇವುಗಳ ಮೂಲಕ ಮಾತ್ರವೇ ನಮ್ಮ ದೇಶದ ಮೂಲಭೂತ ವರ್ಗಬಲಾಬಲಗಳನ್ನು ಬದಲಿಸಲು ಸಾಧ್ಯ ಎಂದು ಸುರ್ಜಿತ್ ನೆನಪಿಸಿದರು.

ಈ ಎರಡು ಪ್ರಧಾನ ಸವಾಲುಗಳ ಮೇಲಲ್ಲದೆ ಸುರ್ಜಿತ್‌ರವರು ರಾಷ್ಟ್ರೀಯ ಐಕ್ಯತೆಯ ಮೇಲೆ ಬೆದರಿಕೆ ಈಗಲೂ ಮುಂದುವರಿಯುತ್ತಿರುವುದರ ಬಗ್ಗೆ ಮಾತನಾಡಿದರು. ವಿಶೇಷವಾಗಿ ಕಾಶ್ಮೀರದಲ್ಲಿ ಸ್ವಾಯತ್ತತೆಯ ಭರವಸೆ ನೀಡುವ ಒಂದು ಸಮಗ್ರ ರಾಜಕೀಯ ಪರಿಹಾರವಿಲ್ಲದೆ ಚುನಾವಣೆಗಳನ್ನು ನಡೆಸಿದರೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದಷ್ಟೆ ಎಂದು ಅವರು ಹೇಳಿದರು.

ತಮ್ಮ ಭಾಷಣವನ್ನು ಕೊನೆಗೊಳಿಸುತ್ತಾ ಸುರ್ಜಿತ್ ದೇಶಾದ್ಯಂತ ದೊಡ್ಡ ಸಾಮೂಹಿಕ ಆಂದೋಲನಗಳನ್ನು ಹರಿಯಬಿಡುವ ತುರ್ತು, ಅಗತ್ಯವನ್ನು, ಪಕ್ಷವನ್ನು ರಾಜಕೀಯವಾಗಿ, ಸಂಘಟನಾತ್ಮಕವಾಗಿ,ಸೈದ್ಧಾಂತಿಕವಾಗಿ ಬಲಿಷ್ಠಗೊಳಿಸಿ ದೇಶವನ್ನು ಬಾಧಿಸುತ್ತಿರುವ ತುರ್ತು ಅಗತ್ಯವನ್ನು ಒತ್ತಿ ಹೇಳಿದರು. ಒಂದು ನೈಜ ಎಡ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯದತ್ತ ಮುನ್ನಡೆಯಲು ಇದು ಅನಿವಾರ್ಯ ಎಂದು ಸುರ್ಜಿತ್ ಹೇಳಿದರು.

ಕನಿಷ್ಠ ಜವಾಬ್ದಾರಿ.......

ಪುಟ 5 ರಿಂದ

ಹೆಸರಿನಲ್ಲಿ ಕೇಂದ್ರ ಸರ್ಕಾರದ ಒಂದು ಯೋಜನೆ ಇದೆ. ಅವರೂ ಕೂಡಾ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು ಹಣವನ್ನು ಕೊಡುತ್ತಿದ್ದಾರೆ. ಅದರಲ್ಲಿ ಎಷ್ಟು ಕೋಟಿ ರೂಗಳ ಅವ್ಯವಹಾರವಾಗಿದೆ. ಸ್ವಯಂ ಉದ್ಯೋಗದ ಹೆಸರಲ್ಲಿ ಉತ್ಪಾದನೆಯನ್ನು ಎಷ್ಟು ಹೆಚ್ಚು ಮಾಡಿದ್ದಾರೆಂಬುದನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಅಂಕಿ-ಅಂಶಗಳ ಮೂಲಕ ಗಮನಿಸಿದರೆ ನಿಮಗೆ ತಿಳಿಯುತ್ತದೆ. ನೀವು ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದರೆ ನಿಮಗಿರತಕ್ಕದ್ದು ಕೇವಲ ಎರಡೇ ಎರಡು ಮಾರ್ಗ. ಇಲ್ಲಿ ಎರಡು ರೀತಿಯ ನಿರುದ್ಯೋಗ ಸಮಸ್ಯೆ ಇದೆ. ವಿದ್ಯಾವಂತ ನಿರುದ್ಯೋಗಿಗಳು, ಅವಿದ್ಯಾವಂತ ನಿರುದ್ಯೋಗಿಗಳು. ವಿದ್ಯಾವಂತ ನಿರುದ್ಯೋಗಿಗಳಿಗೆ ಉದಯೋಗವನ್ನು ಸೃಷ್ಟಿಮಾಡುವುದಕ್ಕೆ ಒಂದು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಅವಿದ್ಯಾವಂತ ನಿರುದ್ಯೋಗಿಗಳು ಹಳ್ಳಿಗಾಡಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅವರಿಗೆ ಕೆಲಸ ಸಿಕ್ಕಬೇಕಾದರೆ ಇರತಕ್ಕ ಒಂದು ದಾರಿ ಎಂದರೆ, ಅವರಿಗೆ ಕೃಷಿ ಯೋಗ್ಯವಾದ ಭೂಮಿಯನ್ನು ನೀಡತಕ್ಕದ್ದು. ಆ ಭೂಮಿಯಲ್ಲೂ ಕೂಡ ಎರಡು ರೀತಿಯ ಭೂಮಿ ಇದೆ. ಒಂದು ಕೃಷಿಗೆ ಯೋಗ್ಯವಾದ ಸರ್ಕಾರೀ ಭೂಮಿ, ಇನ್ನೊಂದು ಕೃಷಿ ಯೋಗ್ಯವಾಗಿರತಕ್ಕ ಭೂಮಾಲೀಕರ ಹಿಡಿತದಲ್ಲಿರತಕ್ಕ ಹೆಚ್ಚುವರಿ ಭೂಮಿ. ಭೂಮಾಲೀಕರ ಹಿಡಿತದಲ್ಲಿರತಕ್ಕ ಹೆಚ್ಚುವರಿ ಕೃಷಿ ಭೂಮಿಯನ್ನು ಅವಿದ್ಯಾವಂತ ಹಾಗೂ ಹಳ್ಳಿಗಾಡಿನಲ್ಲಿರತಕ್ಕ ನಿರುದ್ಯೋಗಿಗಳಿಗೆ ಹಂಚತಕ್ಕದ್ದು ಒಂದು, ಮತ್ತು ಸರ್ಕಾರೀ ಹತೋಟಿಯಲ್ಲಿರತಕ್ಕ ಕೃಷಿ ಯೋಗ್ಯ ಭೂಮಿಯನ್ನು ಹಂಚತಕ್ಕದ್ದು ಇನ್ನೊಂದು ಈಗಾಗಲೇ ನಾವು ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿಯನ್ನು ತರುತ್ತೇವೆಂದು ಹೇಳುತ್ತೀದ್ದೀರಿ. ಬಹುಶಃ ಈಗಾಗಲೇ ಆ ತಿದ್ದುಪಡಿ ತಯಾರಾಗಿರಬಹುದು. ಕರ್ನಾಟಕದಲ್ಲಿ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತಂದಂಥವರು ದಿವಂಗತ ದೇವರಾಜ ಅರಸ್ ರವರು. ಅವರಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಕೂಡಾ ಕರ್ನಾಟಕದಲ್ಲಿ ನಿಜವಾಗಿ ಕೃಷಿ ಬೆಳವಣಿಗೆಗೆ ಪ್ರೋತ್ಸಾಹ ನೀಡಿದವರು. ಅದನ್ನು ಅರ್ಥಮಾಡಿಕೊಂಡವರು ಎಂದರೆ ದಿವಂಗತ ದೇವರಾಜ ಅರಸ್. ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತಂದ ಉದ್ದೇಶವಾದರೂ ಏನು? ಭೂ ಮಾಲೀಕರ ಕೈಯಲ್ಲಿದ್ದ ಹೆಚ್ಚುವರಿ ಭೂಮಿಯನ್ನು ಉಳುವವನಿಗೆ ಕೊಡಬೇಕೆಂಬ ಉದ್ದೇಶ. ಇವತ್ತು ಆ ಭೂಮಿ ಪರಿಮಿತಿ ಕಾಯಿದೆಯನ್ನು ಬದಲಾವಣೆ ಮಾಡುತ್ತಿದ್ದೀರಿ. ಎರಡನೆಯದಾಗಿ 1978ಕ್ಕೆ ಭೂ ಪರಿಮಿತಿ ಅಡಿಯಲ್ಲಿ ಭೂಮಿಯನ್ನು ಹಂಚತಕ್ಕ ಕೆಲಸ ಸ್ಥಗಿತವಾಯಿತು. ಈಗ ಪರಿಸ್ಥಿತಿ ಏನಾಗಿದೆ. 1978ನೇ ಇಸವಿ ಕೆಳಗೆ ನಂತರ ಇವತ್ತು ಹೊಸದಾಗಿ ಶ್ರೀಮಂತ ಭೂಮಾಲೀಕರು ಹುಟ್ಟಿಕೊಳ್ಳುತ್ತಿದ್ದಾರೆ. ಶ್ರೀಮಂತ ಕುಟುಂಬಕ್ಕೆ ನೂರಾರು ಎಕರೆ ಭೂಮಿ ಇದೆ. ಅವರು ಭೂ ಪರಿಮಿತಿ ವ್ಯಾಪ್ತಿಯಲ್ಲಿ ಬರುತ್ತಿಲ್ಲ, ಕೃಷಿಯಲ್ಲಿ ಯಾಂತ್ರೀಕರಣ ಜಾಸ್ತಿಯಾಗಿ ಅತ್ಯಾಧುನಿಕ ಯಂತ್ರಗಳನ್ನು ಬಳಸುವುದರ ಮೂಲಕ ಕೃಷಿಯನ್ನು ಮಾಡುವ ವ್ಯವಸ್ಥೆ ಜಾರಿಗೆ ಬಂದಿರುವುದರಿಂದ ಟೆನೆನ್ಸಿ ಪ್ರಶ್ನೆ ಕಡಿಮೆಯಾಗುತ್ತಿದೆ. ಆದರೆ ಭೂಮಿ ಮಾತ್ರ ಕೇಂದ್ರೀಕೃತ ಆಗುತ್ತಲೇ ಇದೆ. ಕೇಂದ್ರೀಕೃತ ಭೂಮಿಯನ್ನು ವಿಕೇಂದ್ರೀಕರಣ ಮಾಡಿ ಬಡವರಿಗೆ ಹಚ್ಚತಕ್ಕ ಉಳುವವನಿಗೆ ಭೂಮಿ ಎನ್ನತಕ್ಕ ನೀತಿ ಈ ಕರ್ನಾಟಕ ಸರ್ಕಾರದ ಮುಂದಿಲ್ಲ,

ಈ ರೀತಿ ಇದ್ದಾಗ ಹಳ್ಳಿಗಾಡಿನಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತೀರಿ? ನಿರುದ್ಯೋಗ ಸಮಸ್ಯೆ ಅತಿ ಹೆಚ್ಚು ಇರತಕ್ಕದ್ದು ಹಳ್ಳಿಗಾಡಿನಲ್ಲಿ, ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕರ್ನಾಟಕ ರಾಜ್ಯದಲ್ಲಿ 1 ಕೋಟಿ 50 ಲಕ್ಷದವರೆಗೆ ಇದೆ. ಅದಕ್ಕಿಂತ ಹೆಚ್ಚು ಹಳ್ಳಿಗಾಡಿನಲ್ಲಿ ಅವಿದ್ಯಾವಂತರಿದ್ದಾರೆ. ಅವರಿಗೆ ಉದ್ಯೋಗ ಕೊಡಬೇಕೆಂದರೆ ಭೂಮಿ ಹಂಚುವುದು ಬಿಟ್ಟರೆ ಬೇರೆ ಯಾವುದೇ ರೀತಿಯಲ್ಲಿ ಅವರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದ ನೀವು ಭೂಮಿಯನ್ನು ಹಂಚುವ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ. ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡಬೇಕೆಂಬ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದಕ್ಕೆ ಲ್ಯಾಂಡ್ ಗ್ರಾಂಟ್ ಕಮಿಟಿಗಳು ಎಂದು ತಾಲ್ಲೂಕು ಮಟ್ಟದಲ್ಲಿ ಮಾಡಿದರು. ಇದರ ಬಗ್ಗೆ ತಾವು ಇನ್ನೂ ಗಮನ ಹರಿಸದೆ ಇವತ್ತು ಅವು ಕೆಲಸ ಮಾಡದೆ ಹಾಗೆ ನಿಂತಿವೆ. ಬರೀ ಕಮಿಟಿ ಹೇಗೆ ಮಾಡಬೇಕು ಎಂಬ ಬಗ್ಗೆ ನಿಮ್ಮ ಗಮನ ಇದೆಯೇ ಹೊರತು ಭೂಮಿ ಹಂಚಿಕೆ ಮಾಡುವುದು ಹೇಗೆ ಅದಕ್ಕೆ ಏನು ಕಾರ್ಯಕ್ರಮ ಇದೆ ಅದಕ್ಕೆ ಯಾವ ರೀತಿ ನೀವು ಧೋರಣೆ ಅನುಸರಿಸುತ್ತೀರಿ ಎಂಬ ಬಗ್ಗೆ ಏನೂ ಬಜೆಟ್‌ನಲ್ಲಿ ಇಲ್ಲ......

......ನೀವು ತೆರಿಗೆಗಳನ್ನು ಹೆಚ್ಚು ಮಾಡುವುದಕ್ಕೆ ಹಲವಾರು ಕಾರಣಗಳನ್ನು ಕೊಟ್ಟಿದ್ದೀರಿ. ನಮ್ಮ ವೆಚ್ಚ ಹೆಚ್ಚಾಗುತ್ತಿದೆ. 11 ಸಾವಿರದ 1 ಕೋಟಿ ರೂಪಾಯಿ ನಮ್ಮ ವೆಚ್ಚ ಏರಿದೆ. ಇದು ಇನ್ನೊಂದು ಕಡೆ ನಮ್ಮ ಆದಾಯ ಎಷ್ಟಿದೆ. ನಮ್ಮ ಆದಾಯ 10,607,86 ಕೋಟಿ ಇದೆ. ಆದಾಯ ಕಡಿಮೆ ಇದೆ. ಖರ್ಚು ಜಾಸ್ತಿ ಇದೆ. ನಿಮ್ಮ ಖರ್ಚು ಏನು ಇದೆ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಈಗ ನನ್ನ ಹತ್ತಿರ ಒಂದು ವರ್ಷದ ಹಿಂದಿನ ಅಂಕಿ ಅಂಶ ಇರಬಹುದು. ನಮ್ಮ ಕರ್ನಾಟಕ ರಾಜ್ಯದ ಒಟ್ಟು ಆದಾಯದಲ್ಲಿ 32 ಪರ್ಸೆಂಟ್ ಹಣ ಕೇವಲ ಅಧಿಕಾರಿಗಳ ಸಂಬಳ ಸಾರಿಗೆ ಮತ್ತು ಅವರ ಪೆನ್ಷನ್ ಹೋಗುತ್ತಿದೆ. 2427 ಕೋಟಿ ರೂಪಾಯಿ ಅಂದರೆ ಒಟ್ಟು ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿರತಕ್ಕ ಒಂದು ಪರ್ಸೆಂಟ್ ಜನರಿಗೆ 32 ಪರ್ಸೆಂಟ್ ಆದಾಯ ಹೋಗುತ್ತದೆ. 99 ಪರ್ಸೆಂಟ್‌ಗೆ ಉಳಿದ 68 ಪರ್ಸೆಂಟ್ ಭಾಗ ಆಗುತ್ತದೆ. ಇದು ಸರಿಯಲ್ಲ........

......ಕರ್ನಾಟಕ ರಾಜ್ಯದಲ್ಲಿ ಜನರು ಉತ್ಪಾದನೆ ಮಾಡಿದಂತ ಹಣದಿಂದ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳ ವರ್ತನೆ ಹೇಗಿದೆ... ಒಂದು ಕಡೆ ಜನರಿಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತೀರಿ. ಜನರಿಗೆ ಸರ್ವೋಚ್ಚ ಅಧಿಕಾರ ಕೊಡುತ್ತೇವೆಂದು ಹೇಳಿದಾಗ ಬಿ.ಡಿ.ಓ ಏಕೆ ಪಾರುಪತ್ಯ ಮಾಡುವುದಕ್ಕೆ?.. ಪ. ಬಂಗಾಳದಲ್ಲಿ ಐಎಎಸ್ ಅಧಿಕಾರಿಗಳಿಗೆ ಯಾವುದೇ ಪ್ರಾಬಲ್ಯ ಇಲ್ಲ, ಅಧಿಕಾರ ವಿಕೇಂದ್ರಿಕರಣ ಮಾಡಿ ಎಲ್ಲರ ಕೈಗೆ ಅಧಿಕಾರ ಕೊಡಲಿಲ್ಲ.........

★